ಸೋಮವಾರ, ಮೇ 13, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 133 | ಪುಟ 14
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ–ಅಗಲ
ರನ್ ಸಾಗರದಲ್ಲಿ 'ಡಾಟ್‌ಬಾಲ್' ಮುತ್ತುಗಳು

ಪಾಲಕ್ಕಾಡ್ ರೈಲ್ವೆ ವಲಯ ಮುಚ್ಚಲು ನಿರ್ಧಾರ 11

ಕೇಜ್ರಿವಾಲ್ ಮೇಲ್ಮನವಿ: ಇಂದು ವಿಚಾರಣೆ ಸಾಧ್ಯತೆ 8

ಟಿಎಂಸಿ ನಾಯಕರ ವಿರುದ್ಧ ಪ್ರತಿಭಟನೆ ನಡೆಸಿದವರಿಗೆ ಹಣ ನೀಡಿದ ಪ್ರಕರಣ

ಸಂದೇಶ್‌ಖಾಲಿ: ಮತ್ತೊಂದು ವಿಡಿಯೊ 8

ಲೋಕಸಭೆ ಚುನಾವಣೆ: 10 ರಾಜ್ಯ– ಕೇಂದ್ರಾಡಳಿತ ಪ್ರದೇಶಗಳಲ್ಲಿ ವೇದಿಕೆ ಸಜ್ಜು

ಹಂತ ನಾಲ್ಕು: ಮತದಾನ ಇಂದು

ಪ್ರಜಾವಾಣಿ ವಾರ್ತೆ/ ಪಿಟಿಐ

ಕಣ ಚಿತ್ರಣ						
96 ಕ್ಷೇತ್ರಗಳು	1,717 ಅಭ್ಯರ್ಥಿಗಳು	17.7 ಕೋಟಿ ಒಟ್ಟು ಮತದಾರರು	8.97 ಕೋಟಿ ಪುರುಷ ಮತದಾರರು	8.73 ಕೋಟಿ ಮಹಿಳಾ ಮತದಾರರು	19 ಲಕ್ಷ ಮತಗಟ್ಟೆ ಸಿಬ್ಬಂದಿ	1.92 ಲಕ್ಷ ಮತಗಟ್ಟೆಗಳು

ನವದೆಹಲಿ: ಲೋಕಸಭಾ ಚುನಾವಣೆಯ ನಾಲ್ಕನೇ ಹಂತದ ಮತದಾನ ಸೋಮವಾರ ನಡೆಯಲಿದ್ದು, 10 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 96 ಕ್ಷೇತ್ರಗಳ ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ.

ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಮತ್ತು ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಸೇರಿದಂತೆ ಹಲವು ಪ್ರಮುಖರ ಭವಿಷ್ಯ ನಿರ್ಧಾರವಾಗಲಿದೆ.

ಆಂಧ್ರಪ್ರದೇಶ (25) ಮತ್ತು ತೆಲಂಗಾಣದ (17) ಎಲ್ಲ ಕ್ಷೇತ್ರಗಳಲ್ಲದೆ ಉತ್ತರ ಪ್ರದೇಶದ 13, ಮಹಾರಾಷ್ಟ್ರದ 11, ಮಧ್ಯಪ್ರದೇಶ, ಪಶ್ಚಿಮ ಬಂಗಾಳದ ತಲಾ ಎಂಟು, ಬಿಹಾರದ ಐದು, ಜಮ್ಮು ಮತ್ತು ಕಾಶ್ಮೀರದ ಒಂದು, ಒಡಿಶಾ ಮತ್ತು ಜಾರ್ಖಂಡ್‌ನ ತಲಾ ನಾಲ್ಕು ಕ್ಷೇತ್ರಗಳಲ್ಲಿ ಮತದಾನಕ್ಕೆ ವೇದಿಕೆ ಸಜ್ಜಾಗಿದೆ.

ನಾಲ್ಕನೇ ಹಂತದಲ್ಲಿ ಮತದಾನ ನಡೆಯಲಿರುವ 96 ಕ್ಷೇತ್ರಗಳಲ್ಲಿ ಬಿಜೆಪಿಯು ಕಳೆದ ಬಾರಿ 40ಕ್ಕೂ ಅಧಿಕ ಸ್ಥಾನಗಳಲ್ಲಿ ಜಯಿಸಿದ್ದರೆ, ಕಾಂಗ್ರೆಸ್ ಆರು ಸ್ಥಾನಗಳನ್ನು ಗೆದ್ದುಕೊಂಡಿತ್ತು. ಜಮ್ಮು ಮತ್ತು ಕಾಶ್ಮೀರದ ಶ್ರೀನಗರ ಲೋಕಸಭಾ ಕ್ಷೇತ್ರದಲ್ಲಿ 24 ಅಭ್ಯರ್ಥಿಗಳು ಕಣದಲ್ಲಿದ್ದು, 17.48 ಲಕ್ಷ ಅರ್ಹ ಮತದಾರರಿದ್ದಾರೆ. 370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಗೊಳಿಸಿದ ಬಳಿಕ ಕಾಶ್ಮೀರದಲ್ಲಿ ನಡೆಯುತ್ತಿರುವ ಮೊದಲ ಚುನಾವಣೆ ಇದು.

ಮಧ್ಯಪ್ರದೇಶದ ಇಂದೋರ್‌ನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಅಕ್ಷಯ್ ಬಮ್ ಅವರು ಕೊನೆಯ ಕ್ಷಣದಲ್ಲಿ ನಾಮಪತ್ರ ವಾಪಸ್ ತೆಗೆದುಕೊಂಡಿದ್ದರಿಂದ ಬಿಜೆಪಿ ಅಭ್ಯರ್ಥಿ ಶಂಕರ್ ಲಾಲ್ವಾನಿ ಭಾರಿ ಅಂತರದ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. 'ನೋಟಾ'ಕ್ಕೆ ಮತಹಾಕುವಂತೆ ಕಾಂಗ್ರೆಸ್ ಇಲ್ಲಿನ ಮತದಾರರನ್ನು ಕೇಳಿಕೊಂಡಿದೆ.

ನಾಲ್ಕನೇ ಹಂತ ಮುಕ್ತಾಯಗೊಂಡರೆ, 23 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾನ ಪ್ರಕ್ರಿಯೆಗೆ ತೆರೆ ಬಿದ್ದಂತಾಗಲಿದೆ. 543 ಲೋಕಸಭಾ ಕ್ಷೇತ್ರಗಳಲ್ಲಿ 381ರಲ್ಲಿ ಮತದಾನ ಪೂರ್ಣಗೊಳ್ಳಲಿದೆ.

ಮುಂದಿನ ಮೂರು ಹಂತಗಳ ಮತದಾನ ಮೇ 20, ಮೇ 25 ಮತ್ತು ಜೂನ್ 1 ರಂದು ನಡೆಯಲಿದೆ. ಮತ ಎಣಿಕೆಗೆ ಜೂನ್ 4ರ ಮುಹೂರ್ತ ನಿಗದಿಯಾಗಿದೆ.

ನಾಲ್ಕನೇ ಹಂತದ ಮತದಾನಕ್ಕಾಗಿ ಚುನಾವಣಾಧಿಕಾರಿಗಳು ಇವಿಎಂ ಮತ್ತು ಇತರ ಪರಿಕರಗಳನ್ನು ಭಾರತೀಯ ವಾಯುಸೇನೆಯ ಹೆಲಿಕಾಪ್ಟರ್‌ನಲ್ಲಿ ನಕ್ಸಲ್‌ಪೀಡಿತ ಗುಡ್ಡಗಾಡು ಪ್ರದೇಶವಾದ ಜಾರ್ಖಂಡ್‌ನ ಪಲಾಮು ಜಿಲ್ಲೆಯ ಬೂಡಾ ಪಹಾಡ್‌ಗೆ ಒಯ್ದರು —ಪಿಟಿಐ ಚಿತ್ರ

ಆಂಧ್ರ, ಒಡಿಶಾ: ವಿಧಾನಸಭೆಗೂ ಮತದಾನ

ಆಂಧ್ರಪ್ರದೇಶದಲ್ಲಿ ಲೋಕಸಭೆ ಚುನಾವಣೆ ಜತೆಯಲ್ಲೇ ವಿಧಾನಸಭೆಯ 175 ಸ್ಥಾನಗಳಿಗೂ ಸೋಮವಾರ ಮತದಾನ ನಡೆಯಲಿದೆ. 147 ಸದಸ್ಯ ಬಲದ ಒಡಿಶಾ ವಿಧಾನಸಭೆಯ 28 ಕ್ಷೇತ್ರಗಳಲ್ಲಿ ಮತದಾನಕ್ಕೆ ವೇದಿಕೆ ಸಜ್ಜುಗೊಂಡಿದೆ.

ಆಂಧ್ರಪ್ರದೇಶದಲ್ಲಿ ವೈ.ಎಸ್.ಜಗನ್‌ಮೋಹನ್ ರೆಡ್ಡಿ ನೇತೃತ್ವದ ವೈಎಸ್‌ಆರ್‌ಸಿಪಿ, 'ಇಂಡಿಯಾ' ಒಕ್ಕೂಟ ಮತ್ತು ಎನ್‌ಡಿಎ ನಡುವೆ ತ್ರಿಕೋನ ಪೈಪೋಟಿ ಏರ್ಪಟ್ಟಿದೆ. ಚಂದ್ರಬಾಬು ನಾಯ್ಡು ನಾಯಕತ್ವದ ಟಿಡಿಪಿ ಮತ್ತು ಪವನ್ ಕಲ್ಯಾಣ್ ಅವರ ಜನಸೇನಾ ಪಾರ್ಟಿ (ಜೆಎಸ್‌ಪಿ) ಎನ್‌ಡಿಎ ಜತೆಗಿದೆ.

ಇನ್ನಷ್ಟು ಸುದ್ದಿಗಳು 9

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಪೆನ್‌ಡ್ರೈವ್ ಹಂಚಿಕೆ: ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಹಾಸನ: ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿರುವ ಎಸ್‌ಐಟಿ ತಂಡ, ಚೇತನ್ ಹಾಗೂ ಲಿಖಿತ್ ಎಂಬವರನ್ನು ಭಾನುವಾರ ಬಂಧಿಸಿದೆ.

ನಗರದ ಎನ್.ಆರ್. ವೃತ್ತದಲ್ಲಿರುವ ಸೆನ್ ಪೊಲೀಸ್ ಠಾಣೆಯಲ್ಲಿ ಇಬ್ಬರನ್ನೂ ವಿಚಾರಣೆಗೆ ಒಳಪಡಿಸಿದ ಅಧಿಕಾರಿಗಳು ಹೇಳಿಕೆ ದಾಖಲಿಸಿಕೊಂಡರು.

ಚೇತನ್

ಲಿಖಿತ್

8ನೇ ಪುಟ ನೋಡಿ

ಪ್ರಜ್ವಲ್‌ರಿಂದ ಟಿಕೆಟ್ ರದ್ದು

ಬೆಂಗಳೂರು: ಪ್ರಜ್ವಲ್ ರೇವಣ್ಣ ಪತ್ತೆಗಾಗಿ ಬ್ಲ್ಯೂಕಾರ್ನರ್ ನೋಟಿಸ್ ಹೊರಡಿಸಲಾಗಿದ್ದು, ಹಲವು ದೇಶಗಳಲ್ಲಿ ಶೋಧ ಆರಂಭವಾಗಿದೆ. ಇದರ ಬೆನ್ನಲ್ಲೇ, ಜರ್ಮನಿಯಿಂದ ಬೆಂಗಳೂರಿಗೆ ಮೇ 15ರಂದು ಕಾಯ್ದಿರಿಸಲಾಗಿದ್ದ ವಿಮಾನದ ಟಿಕೆಟ್ ಅನ್ನು ಆರೋಪಿ ಪ್ರಜ್ವಲ್ ದಿಢೀರ್ ರದ್ದುಪಡಿಸಿರುವ ಮಾಹಿತಿ ಲಭ್ಯವಾಗಿದೆ.

ಹೊಳೆನರಸೀಪುರ ಹಾಗೂ ಸಿಐಡಿ ಠಾಣೆಯಲ್ಲಿ ದಾಖಲಾಗಿರುವ ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಆರೋಪಿ ಆಗಿರುವ ಪ್ರಜ್ವಲ್, ದೇಶ ತೊರೆದು ತಲೆಮರೆಸಿಕೊಂಡು ಓಡಾಡುತ್ತಿದ್ದಾರೆ. ಲೋಕಸಭಾ ಚುನಾವಣೆಯ ಮತದಾನ ಮುಗಿಯುತ್ತಿದ್ದಂತೆಯೇ ಪ್ರಜ್ವಲ್, ಬೆಂಗಳೂರಿನಿಂದ ಜರ್ಮನಿಗೆ ಹೋಗಿದ್ದಾರೆ. ಪ್ರಕರಣ ದಾಖಲಾದ ಕೆಲ ದಿನಗಳ ನಂತರ, ಅವರು ದುಬೈಗೆ ಸ್ಥಳಾಂತರಗೊಂಡಿರುವ ಮಾಹಿತಿ ಎಸ್‌ಐಟಿಗೆ ಸಿಕ್ಕಿದೆ.

ಅತ್ಯಾಚಾರ ಪ್ರಕರಣದ ಸಂತ್ರಸ್ತೆಯನ್ನು ಅಪಹರಿಸಿದ್ದ ಪ್ರಕರಣದಲ್ಲಿ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ಅವರನ್ನು ಎಸ್‌ಐಟಿ ಅಧಿಕಾರಿಗಳು ಇತ್ತೀಚೆಗಷ್ಟೇ ಬಂಧಿಸಿದ್ದರು. ಇದೀಗ, ಪ್ರಕರಣದ ಪ್ರಮುಖ ಆರೋಪಿ ಪ್ರಜ್ವಲ್ ರೇವಣ್ಣ ಬಂಧನಕ್ಕಾಗಿ ಶೋಧ ಮುಂದುವರಿಸಿದ್ದಾರೆ. ಆದರೆ, ಪ್ರಜ್ವಲ್ ಎಲ್ಲಿದ್ದಾರೆ ಎಂಬ ಖಚಿತ ಮಾಹಿತಿ ಇದುವರೆಗೂ ಲಭ್ಯವಾಗಿಲ್ಲ.

ಸಂಕ್ಷಿಪ್ತ ಸುದ್ದಿ

ಟೆಲಿಸ್ಕೋಪ್ ಲೈಬ್ರರಿ ಸೌಲಭ್ಯ

ಬೆಂಗಳೂರು: ಜವಾಹರಲಾಲ್ ನೆಹರೂ ತಾರಾಲಯದಿಂದ ನಕ್ಷತ್ರ ವೀಕ್ಷಣೆ ಕಾರ್ಯಕ್ರಮ ಆಯೋಜಿಸಲಾಗಿದ್ದು ಇದಕ್ಕೆ ಟೆಲಿಸ್ಕೋಪ್ ಲೈಬ್ರರಿ ಸೌಲಭ್ಯ ಕಲ್ಪಿಸುತ್ತಿದೆ.

ಶಿಕ್ಷಣ ಸಂಸ್ಥೆಗಳು ಹಾಗೂ ಆಸಕ್ತರು ಟೆಲಿಸ್ಕೋಪ್, ಬೈನಾಕ್ಯುಲರ್‌ಗಳನ್ನು ತಾರಾಲಯದಿಂದ ಪಡೆದುಕೊಳ್ಳಬಹುದು. ಇವುಗಳನ್ನು ನಿಗದಿತ ಅವಧಿಯೊಳಗೆ ಸುರಕ್ಷಿತವಾಗಿ ವಾಪಸ್ ನೀಡಬೇಕು. ಆಸಕ್ತರಿಗೆ ಇದೇ 18 ಹಾಗೂ 19ರಂದು ಬೆಳಿಗ್ಗೆ 11ರಿಂದ ಸಂಜೆ 5ರ ವರೆಗೆ ತಾರಾಲಯದಲ್ಲಿ ತರಬೇತಿ ಕಾರ್ಯಾಗಾರ ನಡೆಯಲಿದೆ. ಇದಕ್ಕೆ ಶುಲ್ಕ ನಿಗದಿ ಪಡಿಸಲಾಗಿದೆ. 18ರಂದು ಸಂಜೆ 6.30ರ ನಂತರ ಆಕಾಶ ವೀಕ್ಷಣಾ ಕಾರ್ಯಕ್ರಮ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ದೂರವಾಣಿ: 080 22379725, 080 22266084 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಬೆಂಗಳೂರು: ಅಕ್ಕಮಹಾದೇವಿ ಸೇವಾ ಸಮಾಜವು ಉಚಿತ ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನಿಸಿದೆ.

ಆಸಕ್ತ ವಿದ್ಯಾರ್ಥಿನಿಯರು ಮಾತ್ರ ಇದೇ 25ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಅಕ್ಕಮಹಾದೇವಿ ಸೇವಾ ಸಮಾಜ, ನಂ. 20, ಅಕ್ಕಮಹಾದೇವಿ ಸೇವಾ ಸಮಾಜ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020. 98443 61122 ಸಂಪರ್ಕಿಸಿ.

ನಗರದಲ್ಲಿ ಇಂದು

ಬಸವ ಜಯಂತಿ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಬಸವರಾಜ ಹೊರಟ್ಟಿ, ಅಧ್ಯಕ್ಷತೆ: ಡಿ.ವಿ. ಪರಶಿವಮೂರ್ತಿ, ಅತಿಥಿ: ವೀಣಾ ಬನ್ನಂಜೆ, ಆಶಯ ಭಾಷಣ: ಸಿ. ಸೋಮಶೇಖರ್, ಆಯೋಜನೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಶಿವರಾತ್ರೀಶ್ವರ ಕೇಂದ್ರ, ಜಗದ್ಗುರು ಶಿವರಾತ್ರೀಶ್ವರ ವೃತ್ತ, 1ನೇ ಮುಖ್ಯರಸ್ತೆ, ಜಯನಗರ 8ನೇ ಬ್ಲಾಕ್, ಸಂಜೆ 5.30

ಕುಂದು ಕೊರತೆ | ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

‘ವಿದ್ಯುತ್ ಬಾಕ್ಸ್ ಸರಿಪಡಿಸಿ’



ಗಾಂಧಿನಗರದಲ್ಲಿ ರಸ್ತೆಯಲ್ಲಿರುವ ವಿದ್ಯುತ್ ಬಾಕ್ಸ್‌ನ ಬಾಗಿಲುಗಳು ತೆರೆದಿರುವುದು

ಗಾಂಧಿನಗರದ 2ನೇ ಮುಖ್ಯರಸ್ತೆಯ ಕ್ರಾಸ್‌ನಲ್ಲಿರುವ ವಿದ್ಯುತ್ ಬಾಕ್ಸ್‌ನ ಬಾಗಿಲು ತೆರೆದಿದೆ. ಪ್ರತಿನಿತ್ಯ ಈ ಮಾರ್ಗದಲ್ಲಿ ಸಾವಿರಾರು ವಾಹನಗಳು ಸಂಚರಿಸುತ್ತವೆ. ಆಕಸ್ಮಿಕವಾಗಿ ಯಾರಾದರೂ ಬಾಕ್ಸ್ ಸ್ಪರ್ಶಿಸಿದರೆ ವಿದ್ಯುತ್ ಅವಘಡ ಸಂಭವಿಸುವ ಸಾಧ್ಯತೆ ಇದೆ. ಅವಘಡ ಸಂಭವಿಸುವ ಮುನ್ನ ಬೆಸ್ಕಾಂ ಅಧಿಕಾರಿಗಳು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು. ಈಗ ಮಳೆಗಾಲ ಆರಂಭವಾಗಿದೆ. ತೆರೆದ ಬಾಕ್ಸ್‌ನೊಳಗೆ ನೀರು ಹೋದರೂ ವಿದ್ಯುತ್ ಅವಘಡ ಸಂಭವಿಸುವ ಸಾಧ್ಯತೆ ಇದೆ. ವಿದ್ಯುತ್ ಬಾಕ್ಸ್ ಸರಿಪಡಿಸುವಂತೆ ಬೆಸ್ಕಾಂ ಅಧಿಕಾರಿಗಳಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ.

ಶಿವಪ್ರಸಾದ್ ಎಸ್., ಗಾಂಧಿನಗರ

‘ಪಾದಚಾರಿ ಮಾರ್ಗ ಸರಿಪಡಿಸಿ’

ಹೊರಮಾವು ಪಾದಚಾರಿ ಮಾರ್ಗದ ದುಃಸ್ಥಿತಿ

ಹೊರಮಾವು ಬಂಜಾರ ಲೇಔಟ್‌ನ ಡಿಎಸ್ ಮ್ಯಾಕ್ಸ್ ಸಾಲಿಟೇರ್ ಅಪಾರ್ಟ್‌ಮೆಂಟ್ ಬಳಿಯ ಪಾದಚಾರಿ ಮಾರ್ಗ ಸಂಪೂರ್ಣ ಹದಗೆಟ್ಟಿದೆ. ಈ ಮಾರ್ಗದಲ್ಲಿ ಅಳವಡಿಸಿರುವ ಸಿಮೆಂಟ್ ಸ್ಲ್ಯಾಬ್‌ಗಳು ಕುಸಿದು ಹೋಗಿವೆ. ಇದರಿಂದ, ಪಾದಚಾರಿಗಳು ಮುಖ್ಯರಸ್ತೆಯಲ್ಲೇ ಸಂಚರಿಸಬೇಕಿದೆ. ಅಪಾರ್ಟ್‌ಮೆಂಟ್‌ಗೆ ಹೋಗಬೇಕಾದರೂ ಮುಖ್ಯರಸ್ತೆಯ ಮೂಲಕವೇ ಹೋಗಬೇಕು. ಆದ್ದರಿಂದ, ಬಿಬಿಎಂಪಿ ಕೂಡಲೇ ಇಲ್ಲಿನ ಪಾದಚಾರಿ ಮಾರ್ಗವನ್ನು ಸರಿಪಡಿಸಬೇಕು.

ರವಿಕುಮಾರ್, ಹೊರಮಾವು

‘ರಸ್ತೆ ಗುಂಡಿ ಮುಚ್ಚಿ’

ಐಟಿಐ ಕಾಲೊನಿಯ 80 ಅಡಿ ಮುಖ್ಯರಸ್ತೆಯಲ್ಲಿ ಬಿದ್ದಿರುವ ಗುಂಡಿ

ನಾಗರಬಾವಿ ಪ್ರದೇಶಕ್ಕೆ ಹೊಂದಿಕೊಂಡಿರುವ ಐಟಿಐ ಕಾಲೊನಿ 80 ಅಡಿ ಮುಖ್ಯರಸ್ತೆಯಲ್ಲಿ ಗುಂಡಿ ಬಿದ್ದಿದೆ. ಇದರಿಂದ, ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಮಳೆ ಬಂದಾಗ ಗುಂಡಿಯಲ್ಲಿ ನೀರು ತುಂಬಿಕೊಂಡರೆ ರಸ್ತೆ ಯಾವುದು, ಗುಂಡಿ ಯಾವುದು ಎಂಬುದು ಗೊತ್ತಾಗುವುದಿಲ್ಲ. ರಸ್ತೆಯಲ್ಲಿರುವ ಗುಂಡಿ ಮುಚ್ಚುವಂತೆ ಬಿಬಿಎಂಪಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಕೂಡಲೇ ಇಲ್ಲಿನ ಗುಂಡಿಯನ್ನು ಮುಚ್ಚುವ ಮೂಲಕ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಶಿವು, ನಾಗರಬಾವಿ

‘ಕುಸಿದ ಪಾದಚಾರಿ ಮಾರ್ಗ’

ಎಲೆಕ್ಟ್ರಾನಿಕ್ ಸಿಟಿಯ ವೀರಸಂದ್ರದಲ್ಲಿರುವ ಪಾದಚಾರಿ ಮಾರ್ಗ ಕುಸಿದಿರುವುದು

ಎಲೆಕ್ಟ್ರಾನಿಕ್ ಸಿಟಿಯ ವೀರಸಂದ್ರದ ಹತ್ತಿರವಿರುವ ಕಾವೇರಮ್ಮ ದೇವಸ್ಥಾನ ಬಳಿಯ ಪಾದಚಾರಿ ಮಾರ್ಗ ಕುಸಿದು ಹೋಗಿದೆ. ಇದರಿಂದ, ಪಾದಚಾರಿಗಳು ಮುಖ್ಯರಸ್ತೆಯಲ್ಲಿಯೇ ಸಂಚರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ರಸ್ತೆಯಲ್ಲಿ ವಾಹನಗಳು ವೇಗವಾಗಿ ಸಂಚರಿಸುವುದರಿಂದ, ಮುಖ್ಯರಸ್ತೆಯಲ್ಲಿ ಓಡಾಡುವುದು ಕಷ್ಟ. ಅನಾಹುತ ಸಂಭವಿಸುವ ಮುನ್ನ ಕುಸಿದ ಪಾದಚಾರಿ ಮಾರ್ಗವನ್ನು ದುರಸ್ತಿಗೊಳಿಸಬೇಕು. ಈ ಬಗ್ಗೆ ಬಿಬಿಎಂಪಿ ಗಮನ ಹರಿಸಬೇಕು.

ಸುಂದರ್, ವೀರಸಂದ್ರ

‘ರಸ್ತೆಯಲ್ಲಿ ಹರಿಯುವ ಚರಂಡಿ ನೀರು’

ಬಾಲಾಜಿ ಲೇಔಟ್ 22ನೇ ಕ್ರಾಸ್‌ನ ರಸ್ತೆಯಲ್ಲಿ ನಿಂತಿರುವ ತ್ಯಾಜ್ಯ ನೀರು

ಹೊರಮಾವು ಭಾಗದಲ್ಲಿರುವ ಬಾಲಾಜಿ ಲೇಔಟ್‌ಗೆ ಸಂಪರ್ಕ ಕಲ್ಪಿಸುವ 22ನೇ ಕ್ರಾಸ್‌ನ ರಸ್ತೆಯಲ್ಲಿ ಚರಂಡಿ ನೀರು ಹರಿಯುತ್ತಿದೆ. ಇದರಿಂದ ವಾಹನ ಸಂಚಾರಕ್ಕೆ ತೊಂದರೆ ಆಗಿದೆ. ರಸ್ತೆಯಲ್ಲಿ ನೀರು ಹರಿಯುವ ಕಾರಣ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ. ರಸ್ತೆಯ ಮಧ್ಯದಲ್ಲಿರುವ ಮ್ಯಾನ್‌ಹೋಲ್‌ನಿಂದ ತ್ಯಾಜ್ಯ ನೀರು ರಸ್ತೆಯ ಮೇಲೆ ಹರಿಯುತ್ತಿದೆ. ಇದರಿಂದ, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ತ್ಯಾಜ್ಯ ನೀರು ಹರಿದು ಹೋಗಲು ಸರಿಯಾದ ಚರಂಡಿ ವ್ಯವಸ್ಥೆ ಇಲ್ಲದ ಕಾರಣ ಪ್ರತಿನಿತ್ಯ ನೀರು ರಸ್ತೆಯಲ್ಲಿ ಹರಿಯುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ.

ಶಶಾಂಕ್, ಹೊರಮಾವು

ಈಡಿಗ ಸಮಾಜದ ಪ್ರತಿಭಾವಂತರಿಗೆ ವಿದ್ಯಾರ್ಥಿ ವೇತನ ವಿತರಣೆ

‘ಸೋಲು, ಗೆಲುವು ಸಮವಾಗಿ ಸ್ವೀಕರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೇಷಾದ್ರಿಪುರದಲ್ಲಿರುವ ಆರ್ಯ ಈಡಿಗರ ವಿದ್ಯಾರ್ಥಿ ನಿಲಯದ ಹಳೆ ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ ಭಾನುವಾರ ಈಡಿಗ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣೆ ಕಾರ್ಯಕ್ರಮ ನಡೆಯಿತು.

ಶಿವಮೊಗ್ಗ ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಎಂ.ಕೆ ನಾಯ್ಕ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ‘ಜೀವನದಲ್ಲಿ ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಗುರಿ ಸಾಧನೆಗೆ ಶ್ರಮಿಸಿದರೆ ಉತ್ತಮ ಪ್ರತಿಫಲ ದೊರಕುತ್ತದೆ’ ಎಂದು ಅಭಿಪ್ರಾಯಪಟ್ಟರು.

ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಪ್ರಧಾನ ಕಾರ್ಯದರ್ಶಿ ಎಚ್.ಟಿ. ಮೋಹನ್‌ದಾಸ್ ಮಾತನಾಡಿ, ವೇತನ, ಪ್ರತಿಭಾ ಪುರಸ್ಕಾರ ‘ಸಂಘದ ವತಿಯಿಂದ ವಿದ್ಯಾರ್ಥಿ ಉದ್ಯೋಗ ಮಾಹಿತಿ, ವಧುವರರ ಮಾಹಿತಿ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ’ ಎಂದರು.

ಬೆಂಗಳೂರು ಈಡಿಗರ ವಿದ್ಯಾರ್ಥಿನಿಲಯದ ಹಳೇ ವಿದ್ಯಾರ್ಥಿಗಳ ಸಂಘವು ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ 2023–24ನೇ ಸಾಲಿನ ವಿದ್ಯಾರ್ಥಿವೇತನ ವಿತರಿಸಲಾಯಿತು

ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಎಂ ನಾಗರಾಜ ಮಾತನಾಡಿ, ‘ಈಡಿಗ ಜನಾಂಗದ ದಾನಿಗಳ ಹಾಗೂ ದತ್ತಿ ಸಹಯೋಗದಲ್ಲಿ ಪ್ರತಿ ವರ್ಷ ವಿದ್ಯಾರ್ಥಿ ವೇತನ ವಿತರಿಸಲಾಗುತ್ತದೆ’ ಎಂದು ಮಾಹಿತಿ ನೀಡಿದರು.

ದ್ವಿತೀಯ ಪಿಯುಸಿಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಜ್ಞಾನವಿಯನ್ನು ಸನ್ಮಾನಿಸಲಾಯಿತು. ಸಮಾಜದ ಹಲವು ಹಿರಿಯರನ್ನು ಸನ್ಮಾನಿಸಲಾಯಿತು.

ಸಮಾಜದ ಮುಖಂಡರಾದ ಟಿ.ಎಲ್. ಹನುಮಂತರಾಯ, ಡಾ. ಇ.ವಿ. ರಾಜೇಶ್, ಇ.ವಿ ಸತ್ಯನಾರಾಯಣ ಹಾಗೂ ಟಿ.ಎಸ್. ತಾರಕರಾಂ ಭಾಗವಹಿಸಿದ್ದರು.

ನಿಧನ ವಾರ್ತೆ

ಪತ್ರಕರ್ತ ವೀರೇಶ್ ಕಟ್ಟೆಮ್ಯಾಗಳ

ಬಳ್ಳಾರಿ: ಪತ್ರಕರ್ತ ವೀರೇಶ್ ಕಟ್ಟೆಮ್ಯಾಗಳ (42) ಹೃದಯಾಘಾತದಿಂದ ಭಾನುವಾರ ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ನಿಧನರಾದರು.

ವೀರೇಶ್ ಅವರಿಗೆ ಪತ್ನಿ, ಇಬ್ಬರು ಪುತ್ರಿಯರಿದ್ದಾರೆ.

ಈ ಹಿಂದೆ ‘ಪ್ರಜಾವಾಣಿ’ ದಿನಪತ್ರಿಕೆಯ ಅರೆಕಾಲಿಕ ವರದಿಗಾರರಾಗಿ ಅವರು ಕೆಲಸ ಮಾಡಿದ್ದರು.

ಸಿರುಗುಪ್ಪ ತಾಲ್ಲೂಕಿನ ಟಿ. ರಾಂಪುರ ಗ್ರಾಮದವರಾದ ವೀರೇಶ್ ಅವರ ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ಬಳ್ಳಾರಿಯ ಬೇವಿನಹಳ್ಳಿ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ

ನೋಂದಣಿ 37/ಸೌಕಾ/ನೋಂದಣಿ 2297/2010-11
“ಪುಣ್ಯಕೋಟಿ”, ನಂ.1587, 3ನೇ ಮುಖ್ಯರಸ್ತೆ, ಚಂದ್ರ ಬಡಾವಣೆ, ಬೆಂಗಳೂರು–560 040
ದೂರವಾಣಿ ಸಂಖ್ಯೆ: 080–23185584, 9538475454, 9980147199.

ಸ್ಥಿರಾಸ್ತಿ ಹರಾಜು ಪ್ರಕಟಣೆ

ಶ್ರೀಮತಿ. ವರಲಕ್ಷ್ಮಿ ಸಿ.ಎನ್.

ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ, ಬೆಂಗಳೂರು. ಈ ಸಹಕಾರಿಯ ಸುಸ್ತಿದಾರರಾದ ಶ್ರೀಮತಿ. ವರಲಕ್ಷ್ಮಿ .ಸಿ.ಎನ್. ಇವರಿಂದ ಬಾಕಿಯಿರುವ ಈ ಕೆಳಕಂಡ ಮೊತ್ತಗಳ ವಸೂಲಿ ಬಗ್ಗೆ ಸದರಿಯವರಿಗೆ ಸೇರಿದ ಈ ಕೆಳಗೆ ನಮೂದಿಸಿರುವ ಸ್ಥಿರ ಸ್ವತ್ತುಗಳನ್ನು ವಸೂಲಾತಿ ಅಧಿಕಾರಿಗಳು (ನಿ-441) ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರ ಸಂಘ ನಿಯಮಿತ, ಬೆಂಗಳೂರು ಇವರ ಆದೇಶ **ಇಪಿ.ಸಂಖ್ಯೆ: ಇಪಿ.ನಂ:ಕ.ರಾ.ಸೌ.ಸಂ.ಸ.ನಿ/ಸ.ಸಂ.ಸ.ನಿ/ವ.ಅ/153/2023-24** ದಿನಾಂಕ 16.10.2023 ರ ಮೇರೆಗೆ ದಿನಾಂಕ 27.05.2024 ರ ಸೋಮವಾರದಂದು ಹಗಲು 11.30 ಘಂಟೆಗೆ ಸ್ಥಿರಾಸ್ತಿ ಇರುವ ವಿಳಾಸದಲ್ಲಿ ಮೇಲ್ಕಂಡ ಆದೇಶಗಳಲ್ಲಿ ವಿಧಿಸಿರುವ ಷರತ್ತುಗಳಿಗೊಳಪಟ್ಟು ಬಹಿರಂಗ ಹರಾಜು ಮಾಡಲಾಗುವುದೆಂದು ಈ ಮೂಲಕ ತಿಳಿಸಿದೆ.

ಹರಾಜಿನ ಷರತ್ತುಗಳನ್ನು ಸಹಕಾರಿಯ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸುಸ್ತಿದಾರರ ಹೆಸರು ಮತ್ತು ವಿಳಾಸ	ಸ್ಥಿರಾಸ್ತಿಯ ವಿವರಗಳು	ತೀರ್ಪು ಮೊಬಲಗು (ರೂ.ಗಳಲ್ಲಿ)	ಷರಾ
ಶ್ರೀಮತಿ ವರಲಕ್ಷ್ಮಿ .ಸಿ.ಎನ್. #14, 1ನೇ ಕ್ರಾಸ್, ಸಿ ಮುಖ್ಯರಸ್ತೆ, ಹೆಬ್ಬಾಳ ಮಿಲ್ ರಸ್ತೆ, ಗಂಗಾನಗರ ಬಡಾವಣೆ, ಬೆಂಗಳೂರು–560032.	ಬೆಂಗಳೂರು ಪೂರ್ವ ತಾಲ್ಲೂಕು, ಕೃಷ್ಣರಾಜಪುರ ಹೋಬಳಿ, ನಾರಾಯಣಪುರ ಗ್ರಾಮದ ನಿವೇಶನ ಸಂಖ್ಯೆ.7, ಖಾತಾ ಸಂಖ್ಯೆ.349,27, ಸ್ವತ್ತಿನ ಸಂಖ್ಯೆ.50/1 ಹೊಂದಿರುವ ಹಾಗೂ ಈ ಕೆಳಕಂಡ ಚಕ್ಕುಬಂದಿಯ ಮಧ್ಯೆ ಇರುವ ಪೂರ್ವದಿಂದ ಪಶ್ಚಿಮಕ್ಕೆ: 30 ಅಡಿಗಳು, ಉತ್ತರದಿಂದ ದಕ್ಷಿಣಕ್ಕೆ: 40 ಅಡಿಗಳು, ಒಟ್ಟು 1200 ಚದರ ಅಡಿಗಳು, ಈ ರೀತಿ ಅಳತೆ ಮತ್ತು ಕೆಳಕಂಡ ಚಕ್ಕುಬಂದಿಗೊಳಪಟ್ಟ ನಿವೇಶನ ಹರಾಜು ಪ್ರಕ್ರಿಯೆಗೆ ಸಂಬಂಧಪಟ್ಟದಾಗಿರುತ್ತದೆ. **ಚಕ್ಕುಬಂದಿ:–** ಪೂರ್ವಕ್ಕೆ: ದೇವಣ್ಣನವರ ಆಸ್ತಿ, ಪಶ್ಚಿಮಕ್ಕೆ: ಸೈಟ್ ನಂ.06. ಉತ್ತರಕ್ಕೆ: 25 ಅಡಿ ರಸ್ತೆ, ದಕ್ಷಿಣಕ್ಕೆ: ಸೈಟ್ ನಂ.01.	36,95,785 ಒಟ್ಟು=36,95,785	ಆದೇಶ ಇಪಿ.ನಂ: ಕ.ರಾ.ಸೌ.ಸಂ.ಸ.ನಿ/ ಸ.ಸಂ.ಸ.ನಿ/ ವ.ಅ/153/ 2023-24

ವಿಶೇಷ ಸೂಚನೆ: ಮೇಲೆ ಹೇಳಿರುವ ತೀರ್ಪು ಮೊಬಲಗು ಹಾಗೂ ದಿನಾಂಕ 28.04.2022 ರಿಂದ ಬಾಕಿಯಿರುವ ಬಡ್ಡಿ ಹಾಗೂ ನ್ಯಾಯಾಲಯದ ವೆಚ್ಚಗಳನ್ನು ಸಹ ಪಾವತಿಸಬೇಕಾಗಿರುತ್ತದೆ.

ಆಸಕ್ತಿಯುಳ್ಳವರು ಈ ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ.

ಸ್ಥಳ: ಬೆಂಗಳೂರು
ದಿನಾಂಕ : 11.05.2024

ಸಹಿ/- ದೀಪು.ಎಸ್.
ಮಾರಾಟಾಧಿಕಾರಿ, ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ

ಕ್ಲಾಸಿಫೈಡ್ಸ್ EDUCATION CORNER

V.E.T.B.V.L. POLYTECHNIC
(Recognised by Collegiate and Directorate of Technical Education, Govt. of Karnataka, AICTE, New Delhi)
14th Main, 2nd Phase, J.P. Nagar, Bengaluru - 560078. Web: vetbvlpolytechnic.edu.in
ACADEMIC ACHIEVERS
KIRAN K U PER-98.67% COMMERCIAL PRACTICE
44 DISTINCTIONS
ANKITHA R PER-99.25% APPAREL DESIGN & FABRICATION TECHNOLOGY
KAPSHA SURAJ SINGH PER-99.00% COMPUTER SCIENCE & ENGINEERING
ADMISSIONS OPEN FOR POLYTECHNIC COURSE FOR THE ACADEMIC YEAR 2024–2025
COURSES OFFERED:
1. COMPUTER SCIENCE AND ENGG
2. APPAREL DESIGN & FABRICATION TECHNOLOGY
3. COMMERCIAL PRACTICE
4. INFORMATION SCIENCE & ENGG* (*Waiting for Approval)
CONTACT: 9513704801

May the Glory of the Lord endure forever, May the Lord rejoice in the works, Psalm: 104:31
CANAAN CHRIST PUBLIC SCHOOL
Rayasandra, Bangalore.
THE MANAGEMENT & STAFF PROUDLY CONGRATULATE THE STUDENS FOR ACHIEVING EXCEEDINGLY OUTSTANDING RESULTS IN THE SSLC BOARD EXAM 2023-24
SCHOOL TOPPERS
88% YOGADARSHINI. S | 87% DUPITHA. J | 86% M. JEEVA RATHINA | 84% AMULYA.M
100% RESULT
82% DAVID BLESSING.S | 79% MONIKA | 79% E.M.NAVNEETH | 79% DANIEL.B | 78% GRACY HELLEN.V | 77% CHAITANYA.U
Admissions open for academic year 2024-25
Please contact on this number for any information or details 9916596472

GOODWILL CHRISTIAN COLLEGE FOR WOMEN
No.10, Promenade Road, Frazer Town (Opp. Coles Park) Bengaluru - 560 005
CSI Karnataka Central Diocese
Affiliated to Bengaluru North University
NAAC ACCREDITED
Phone: 080 - 41516793, 41100422, 7022905576
Website: www.goodwillchristiancollege.com
E-mail: goodwillchristiancollege@gmail.com
Instagram: goodwillchristiancollege
ADMISSIONS OPEN 2024-2025
COURSES OFFERED
B.Com | BBA | BCA | B.Sc | B.A.

May the Glory of the Lord endure forever, May the Lord rejoice in the works, Psalm: 104:31
CANAAN CHRIST PUBLIC SCHOOL
BTM layout Bangalore-560029
THE MANAGEMENT & STAFF PROUDLY CONGRATULATE THE STUDENS FOR ACHIEVING EXCEEDINGLY OUTSTANDING RESULTS IN THE SSLC BOARD EXAM 2023-24
SCHOOL TOPPERS
98.5% Vishnuvardhan Reddy | 96% Arish Ali Khan | 95% Shah Fahad | 94% Ameena Fathima
93% B. Chetan | 92% Mohammed S Shariff | 90% K. Irfana
DISTINCTION HOLDERS EXCELLENT RESULT
86% Monisha. H | 86% Umair Shariff | 86% Bibi Hajira | 85% Akhil Ahmed
Admissions open for academic year 2024-25
Please contact on this number for any information or details 9916596472

R.E.S. POLYTECHNIC
Estd: 1986 - Recognised by Govt. of Karnataka & AICTE
10th Pass / What Next ???
JOIN DIPLOMA IN: Computer Science, IS, Civil, Mechanical, Automobile, Electrical, Electronics, Fashion Tech, Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
EVENING / WEEKEND CLASSES
Available for working Professionals to EE
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466

BUSINESS
Business to Business
Business
WANTED BUSINESS PARTNER ATTRACTIVE INCOME CONTACT: 88925 01007/ 9606701007

JOB OPPORTUNITIES
Teachers/ Professors
BRIGHT WAY SCHOOL TEACHERS REQUIRED ENGLISH, HINDI, COMPUTER, DANCE B.A/M.A, BEd, BCA/MCA, Walk-in interview on 14.05.2024 at 10.30 a.m- 080-26396720/ 9241204762

DH Classifieds ಪ್ರಜಾವಾಣಿ
NAME CHANGE @50/-* PER WORDS
Book your Name change Ad in DH All Karnataka + Prajavani Bengaluru City All Days
www.dhclassifieds.com BOOK NOW
For more details contact: 7795158424 9900428036

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

COMPUTERS
Hardware
USED COMPUTERS FOR SALE
Dual Core/ 2GB Ram / 80GB HDD / 17"LCD Rs.6,000/-
For Qty of 10 No's Rs.5,000/- per system
For Qty of 10 No's. without Monitor Rs.3,000/- per system
For Qty of 30 No's. without Monitor Rs.2,500/- per system
For Qty of 50 No's. without Monitor Rs.2,000/- per system
Core I 3/ 4GB Ram / 250GB HDD / 17"LCD Rs.10,000/-
For Qty of 10 No's. Rs.9,000/- per system
For Qty of 10 No's. without Monitor Rs.7,000/- per system
For Qty of 40 No's. without Monitor Rs.6,000/- per system
LAPTOP
Core I 3/ 4GB Ram / 500GB HDD / Adaptor Rs.12,000/-
Courier Charges: Rs.1,000/- per system
COMPUTER HOUSE
L-81, SECTOR 11, 8th CROSS, 9th B MAIN, LIC COLONY, JEEVANBHIMA NAGAR, BANGALORE - 560075.
09886038331 / 080- 42076287

HEALTH SPECIAL ಕ್ಲಾಸಿಫೈಡ್ಸ್

ಶ್ರೇಯಾ ಹಿಯರಿಂಗ್ ಕ್ಲಿನಿಕ್ Dr. Sathya Ranna's
SHREYA HEARING CLINIC
SHREYA SURE SERVICE SAFE!
25 ANNIVERSARY 1997-2022
Never Before offer
Purchase between 13 to 18 May Additional two years Shreya Active Free 4 years warranty (SAFE)
1800 425 3435
25ನೇ ವರ್ಷದ ಆಚರಣೆಯ ಕೊಡುಗೆಗಳು ಬನ್ನಿ ನಮ್ಮ ಕುಟುಂಬದ ಭಾಗವಾಗಿರಿ
HOME VISITS 9945633115
We believe in sound relationship..
Indiranagar 9686449424/9686449426 | Jayanagar 2653 3055 /56/ 57 | Koramangala 2563 4411 /12/13 | Bannerghatta Road 2648 6034/9686449370
Sadashivanagar 2361 8037 /38/ 39 | Vijayanagar 9900044214 /23180012 | Kammanahalli 2545 5078 /79 | Marathahalli 9686449392
Centers at Hyderabad, Mangaluru and Mysuru
sathya@shreyahearingclinic.com www.shreyahearingclinic.com
signia

ಕೆಲವೆಡೆ ಮರದ ಕೊಂಬೆಗಳು ಬಿದ್ದು ಸಂಚಾರಕ್ಕೆ ಅಡಚಣೆ ● ನಗರದಲ್ಲಿ ಇನ್ನೂ ನಾಲ್ಕು ದಿನ ಮಳೆ ನಿರೀಕ್ಷೆ

ಅಲ್ಲಲ್ಲಿ ಜೋರು ಮಳೆ: ತಂಪಾದ ಇಳೆ

ಬಿಳೇಕಹಳ್ಳಿ ಜಂಕ್ಷನ್‌ನಲ್ಲಿ ಸಂಗ್ರಹಗೊಂಡಿದ್ದ ಮಳೆ ನೀರಿನಲ್ಲಿ ವಾಹನಗಳು ಸಾಗಿದವು.

ಮಳೆ ಪ್ರಮಾಣ (ಸೆಂ.ಮೀನಲ್ಲಿ)

ಬಿಳೇಕಹಳ್ಳಿ	4.2
ದೊರೆಸಾನಿಪಾಳ್ಯ	3.8
ಬಿಟಿಎಂ ಲೇಔಟ್	3.1
ಬೊಮ್ಮನಹಳ್ಳಿ	2.6
ಅರಕೆರೆ	2.55
ಸಿಂಗಸಂದ್ರ	2.2
ಗೊಟ್ಟಿಗೆರೆ	1.7
ವಿದ್ಯಾಪೀಠ	1.4
ನಾಯಂಡಹಳ್ಳಿ	1.3
ರಾಜರಾಜೇಶ್ವರಿ ನಗರ	1.1

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಭಾನುವಾರ ಸಂಜೆ ಹಾಗೂ ರಾತ್ರಿ ಗುಡುಗು ಸಹಿತ ಜೋರು ಮಳೆಯಾಗಿದೆ.

ಜೋರು ಮಳೆಯಿಂದ ರಸ್ತೆಗಳಲ್ಲಿ ಹೊಳೆಯಂತೆ ನೀರು ಹರಿಯಿತು. ಕೆಲವು ಕಡೆ ರಸ್ತೆಗೆ ಮರದ ಕೊಂಬೆಗಳು ಬಿದ್ದು ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು. ಸಂಚಾರ ಪೊಲೀಸರು ಬಿದ್ದ ಕೊಂಬೆಗಳನ್ನು ತೆರವುಗೊಳಿಸಿ, ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಬಿಳೇಕಹಳ್ಳಿ, ದೊರೆಸಾನಿಪಾಳ್ಯ, ಬಿಟಿಎಂ ಲೇಔಟ್, ಬೊಮ್ಮನಹಳ್ಳಿ, ಅರಕೆರೆ, ಸಿಂಗಸಂದ್ರ, ಗೊಟ್ಟಿಗೆರೆ, ವಿದ್ಯಾಪೀಠ, ನಾಯಂಡಹಳ್ಳಿ, ರಾಜರಾಜೇಶ್ವರಿ ನಗರ ಭಾಗದಲ್ಲಿ ಸಂಜೆ ವೇಳೆಯಲ್ಲಿ ಜೋರು ಮಳೆಯಾಗಿದೆ. ಕೆಂಗೇರಿ, ಕೆಂಗೇರಿ ಉಪನಗರ, ದೀಪಾಂಜಲಿನಗರ, ಜ್ಞಾನಭಾರತಿ ಭಾಗದ ಅಲ್ಲಲ್ಲಿ ಹಗುರ ಮಳೆ ಆಗಿದೆ.

ಪುಟ್ಟೇನಹಳ್ಳಿ ಕೆಳಸೇತುವೆ ಬಳಿ ಕೊಂಬೆ ಬಿದ್ದ ಕಾರಣ ಸಾರಕ್ಕಿ ಸಿಗ್ನಲ್ ಕಡೆಗೆ ತೆರಳುವ ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು. ಬಿಳೇಕಹಳ್ಳಿ ವೃತ್ತದಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹಗೊಂಡು ವಾಹನಗಳು ನಿಧಾನವಾಗಿ ಚಲಿಸಿದವು.

ಆರ್‌.ವಿ ಡೆಂಟಲ್ ಕಾಲೇಜು ಬಳಿ ಮರದ ಕೊಂಬೆ ಬಿದ್ದ ಪರಿಣಾಮ ಜೆ.ಪಿ.ನಗರಕ್ಕೆ ತೆರಳುವ ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಯಿತು. ರೂಪೇನ ಅಗ್ರಹಾರದ ರಸ್ತೆಯಲ್ಲಿ ಅಪಾರ ಪ್ರಮಾಣದ ನೀರು ನಿಂತಿತ್ತು.

ಇನ್ನೂ ನಾಲ್ಕು ದಿನ ಮಳೆ ಸಾಧ್ಯತೆ: ನಗರದಲ್ಲಿ ಇನ್ನೂ ನಾಲ್ಕು ದಿನ ಸಂಜೆ ಅಥವಾ ರಾತ್ರಿ ವೇಳೆ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ. ಹಗಲು ವೇಳೆ ಮೋಡ ಕವಿದ ವಾತಾವರಣ ಇರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮುಖ್ಯಾಂಶಗಳು

- ಕೊಂಬೆ ತೆರವುಗೊಳಿಸಿ ಸಂಚಾರಕ್ಕೆ ದಾರಿ ಮಾಡಿಕೊಟ್ಟ ಪೊಲೀಸರು
- 15 ನಿಮಿಷದ ಮಳೆ, ತಗ್ಗು ಪ್ರದೇಶದ ರಸ್ತೆಗಳಲ್ಲಿ ನೀರು
- ಅಂತರ್ಜಲ ಮರುಪೂರಣಕ್ಕೆ ನೆರವಾಗುವ ನಿರೀಕ್ಷೆ

ಪುಟ್ಟೇನಹಳ್ಳಿ ರಸ್ತೆಯಲ್ಲಿ ಮರದ ಕೊಂಬೆ ಬಿದ್ದು ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು.

ಬಿಳೇಕಹಳ್ಳಿಯಲ್ಲಿ ಚರಂಡಿ ನೀರು ರಸ್ತೆಗೆ ಹರಿದು ಸಂಚಾರಕ್ಕೆ ತೊಂದರೆ ಉಂಟಾಯಿತು.

ಮನೆಗಳಿಗೆ ನುಗ್ಗಿದ ನೀರು

ಬೊಮ್ಮನಹಳ್ಳಿ: ಬೊಮ್ಮನಹಳ್ಳಿ ಭಾಗದಲ್ಲಿ ಭಾನುವಾರ ಸುರಿದ ಮಳೆಯು ಸಾರ್ವಜನಿಕರಲ್ಲಿ ಖುಷಿ ತರಿಸಿತು. ಆದರೆ, ಕೇವಲ 15 ನಿಮಿಷ ಬಿರುಸಾಗಿ ಸುರಿದ ಮಳೆಯಿಂದ ತಗ್ಗು ಪ್ರದೇಶಗಳ ರಸ್ತೆಯಲ್ಲಿ ನೀರು ನಿಂತು ಸಂಚಾರಕ್ಕೆ ತೊಂದರೆಯಾಗಿದೆ.

ಬಿಳೇಕಹಳ್ಳಿಯ ತಗ್ಗು ಪ್ರದೇಶಗಳ ರಸ್ತೆಗಳು ಮಳೆಯಿಂದಾಗಿ ಜಲಾವೃತವಾಗಿದ್ದವು. ಸಾಧಾರಣ ಮಳೆಯಾದರೂ ಚರಂಡಿಗಳಲ್ಲಿ ಹೂಳು ತುಂಬಿದ್ದರಿಂದ ಮಳೆ ನೀರು ರಸ್ತೆಗಳಲ್ಲಿ ಹರಿದಿದೆ. ಬಂಡೇಪಾಳ್ಯದ ಕೊಳೆಗೇರಿ ಪ್ರದೇಶಗಳಲ್ಲಿ ಮನೆಗಳಿಗೆ ನೀರು ನುಗ್ಗಿ ಜನ ತೊಂದರೆ ಅನುಭವಿಸಿದರು.

‘ಚರಂಡಿ ನೀರು ಮನೆಗೆ ನುಗ್ಗಿ ಮನೆಯಲ್ಲಾ ಗಬ್ಬು ವಾಸನೆ, ಚರಂಡಿ ಹೂಳು ತೆಗೆದಿದ್ದರೆ ತೊಂದರೆ ಆಗುತ್ತಿರಲಿಲ್ಲ, ಆದರೆ, ಬಿಬಿಎಂಪಿಯವರು ಬಡವರು ವಾಸ ಮಾಡುವ ಕಾಲೊನಿ ಕಡೆ ಕಾಲಿಡೋದು ಅಪರೂಪ ಏನ್ಮಾಡೋದು’ ಎಂದು ಬಂಡೇಪಾಳ್ಯ ನಿವಾಸಿ ಗೌರಮ್ಮ ಅಸಹಾಯಕತೆ ವ್ಯಕ್ತಪಡಿಸಿದರು.

‘ಮಳೆ ಆರಂಭವಾದ ಹಿನ್ನೆಲೆಯಲ್ಲಿ ಒಂದು ವಾರದ ಹಿಂದೆಯೇ ಚರಂಡಿ ಹೂಳು ತೆಗೆಯುವಂತೆ ಅಧಿಕಾರಿಗಳ ಗಮನಕ್ಕೆ ತರಲಾಗಿತ್ತು. ಆದರೆ, ಯಾವುದೇ ಕ್ರಮವಹಿಸಲಿಲ್ಲ. ಹೀಗಾಗಿ ಸಣ್ಣ ಮಳೆ ಸುರಿದರೂ ತೊಂದರೆ ಅನುಭವಿಸುವಂತಾಗಿದೆ’ ಎಂದು ಬಂಡೇಪಾಳ್ಯ ನಿವಾಸಿ ರಾಮಚಂದ್ರ ಹೇಳಿದರು.

‘ಚರಂಡಿ ಹೂಳು ತೆಗೆಯಲು ಯಾವುದೇ ಕಾರ್ಯಾದೇಶ ಈವರೆಗೂ ಬಂದಿಲ್ಲ. ಹೀಗಾಗಿ ಕೆಲಸ ಕೈಗೆತ್ತಿಕೊಳ್ಳಲು ಆಗುತ್ತಿಲ್ಲ. ಮೇಲಧಿಕಾರಿಗಳ ಜತೆ ಚರ್ಚಿಸಿ ಕ್ರಮವಹಿಸುತ್ತೇವೆ’ ಎಂದು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ರಾಜು ಹೇಳಿದರು.

‘ಮಳೆ ಕೊರತೆಯಿಂದ ಈ ಭಾಗದಲ್ಲಿ ಅಂತರ್ಜಲ ಪೂರ್ತಿಯಾಗಿ ಕುಸಿದಿದೆ. ಇದೀಗ ಮಳೆ ಆರಂಭ ಆಗಿರುವುದರಿಂದ ಅಂತರ್ಜಲ ಮರುಪೂರಣ ಆಗುವ ನಿರೀಕ್ಷೆ ಹೊಂದಿದ್ದೇವೆ’ ಎನ್ನುತ್ತಾರೆ ಮೈಕೊ ಬಡಾವಣೆ ನಿವಾಸಿ ಮಹಮ್ಮದ್ ರಫೀಕ್.

ಲೋಕಸಭೆ 2024 ಚುನಾವಣೆಯ ಹಂತ ನಾಲ್ಕು!

ಶುಶ್ರೂಷಕರ ದಿನಾಚರಣೆ: ನಗರದಲ್ಲಿ ಬೃಹತ್ ರ‍್ಯಾಲಿ

ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ ಅಂಗವಾಗಿ ನಗರದಲ್ಲಿ ಭಾನುವಾರ ಬೃಹತ್ ರ‍್ಯಾಲಿ ನಡೆಯಿತು. – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಪ್ರದಾನ ಸಮಿತಿ, ಅಂತ-ರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ ಅಂಗವಾಗಿ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಬೃಹತ್ ರ‍್ಯಾಲಿಯಲ್ಲಿ ದೊಡ್ಡ ಸಂಖ್ಯೆಯಲ್ಲಿ ನರ್ಸಿಂಗ್ ವಿದ್ಯಾರ್ಥಿಗಳು ಹಾಗೂ ನರ್ಸಿಂಗ್ ಕಾಲೇಜಿಗಳ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಪಾಲ್ಗೊಂಡಿದ್ದರು. ರ‍್ಯಾಲಿಗೆ ಗಣ್ಯರು ಚಾಲನೆ ನೀಡಿದರು.

ವಿಧಾನಸೌಧದ ಮುಂಭಾಗದಿಂದ ಆರಂಭವಾದ ರ‍್ಯಾಲಿಯು, ಮಿಲ್ಲರ್ಸ್ ರಸ್ತೆಯ ಮೂಲಕ ಸಾಗಿ ಸೇಂಟ್ ಆನ್ಸ್ ಶಾಲೆಯ ಎದುರು ಮುಕ್ತಾಯಗೊಂಡಿತು. ‘ನಮ್ಮ ನರ್ಸ್‌ಗಳು; ನಮ್ಮ ಭವಿಷ್ಯ’ ಎಂಬ ಭಿತ್ತಿಪತ್ರ ಹಿಡಿದು ನರ್ಸಿಂಗ್ ವಿದ್ಯಾರ್ಥಿಗಳು ಸಾಗಿದರು. ಇದೇ ವೇಳೆ ವಿದ್ಯಾರ್ಥಿಗಳು ಪ್ರಮಾಣ ವಚನ ಸ್ವೀಕರಿಸಿದರು. ಶುಶ್ರೂಷಕರ ಸೇವೆ ಕುರಿತು ಕಿರು ನಾಟಕ ಪ್ರದರ್ಶಿಸಲಾಯಿತು.

ಗೃಹ ಸಚಿವ ಡಾ.ಜಿ.ಪರಮೇಶ್ವರ ಮಾತನಾಡಿ, ‘ಮುಂದಿನ ವರ್ಷ ರ‍್ಯಾಲಿಯನ್ನು ಮತ್ತಷ್ಟು ಬೃಹತ್ ಪ್ರಮಾಣದಲ್ಲಿ ಆಯೋಜಿಸಬೇಕು’ ಎಂದು ಕರೆ ನೀಡಿದರು.

‘ನರ್ಸಿಂಗ್ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕು. ಪ್ರಾಯೋಗಿಕ ಜ್ಞಾನ ಸಿಗಬೇಕು. ಕೋವಿಡ್ ಸಂದರ್ಭದಲ್ಲಿ ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳ ಶುಶ್ರೂಷಕರು ತಮ್ಮ ಜೀವವನ್ನೇ ಪಣಕ್ಕಿಟ್ಟು ಕೆಲಸ ಮಾಡಿದ್ದರು. ಅವರ ಸೇವೆ ಸ್ಮರಣೀಯ’ ಎಂದು ಹೇಳಿದರು.

‘ವಿದೇಶಗಳಲ್ಲೂ ಭಾರತೀಯ ನರ್ಸ್‌ಗಳು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ವಿದೇಶದಲ್ಲಿ ಭಾರತೀಯ ಶುಶ್ರೂಷಕರಿಗೆ ಬೇಡಿಕೆಯಿದೆ’ ಎಂದು ಹೇಳಿದರು. ವಿಧಾನ ಪರಿಷತ್‌ನ ಸಭಾಪತಿ ಬಸವರಾಜ ಹೊರಟ್ಟಿ ಹಾಜರಿದ್ದರು.

ಚಿಕ್ಕಮಗಳೂರು, ಬೆಳಗಾವಿ, ಹಾಸನದಲ್ಲಿ ವರ್ಷಧಾರೆ

ಗರಿಗೆದರಿದ ರೈತರ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಮಂಗಳೂರು/ ಮೈಸೂರು: ಚಿಕ್ಕಮಗಳೂರು ಜಿಲ್ಲೆಯ ವಿವಿಧೆಡೆ ಭಾನುವಾರ ಉತ್ತಮ ಮಳೆಯಾಗಿದ್ದರೆ ದಕ್ಷಿಣ ಕನ್ನಡದ ಕೆಲವೆಡೆ ಸಾಮಾನ್ಯ ಮಳೆಯಾಗಿದೆ.

ಮೈಸೂರು ಸುತ್ತಮುತ್ತ ಹಾಗೂ ಹಾಸನ ಜಿಲ್ಲೆಯಾದ್ಯಂತ ಸುಮಾರು ಅರ್ಧಗಂಟೆಗೂ ಹೆಚ್ಚು ಕಾಲ ಉತ್ತಮ ಮಳೆ ಸುರಿದಿದ್ದು, ರೈತರ ನಿರೀಕ್ಷೆಗಳು ಗರಿಗೆದರಿವೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಕಳಸ, ಎನ್‌.ಆರ್‌.ಪುರ ಮತ್ತು ಕೊಪ್ಪ ತಾಲ್ಲೂಕು ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆ ತಾಲ್ಲೂಕಿನ ವಿವಿಧೆಡೆ ಮಧ್ಯಾಹ್ನ ಗುಡುಗು ಸಹಿತ ಮಳೆಯಾಗಿದೆ. ಪುತ್ತೂರು ತಾಲ್ಲೂಕಿನಲ್ಲಿ ಸಂಜೆ ಗುಡುಗು, ಗಾಳಿಯೊಂದಿಗೆ ಭಾರಿ ಮಳೆಯಾಗಿದ್ದು, ಮರ ಬಿದ್ದು ಮನೆಗೆ ಹಾನಿಯಾಗಿದೆ.

ಮೈಸೂರು ನಗರದ ಹೊರವಲಯದಲ್ಲಿ ಹಾಗೂ ಹಾಸನ, ಅರಸೀಕೆರೆ, ಅರಕಲಗೂಡು, ಚನ್ನರಾಯಪಟ್ಟಣದಲ್ಲಿ ಹದ ಮಳೆಯಾಗಿದೆ. ಹಳೇಬೀಡು, ಬೇಲೂರು, ಕೊಣನೂರಿನ ಸುತ್ತ ಸಾಧಾರಣ ಮಳೆ ಸುರಿದಿದೆ.

ಸಕಲೇಶಪುರ ತಾಲ್ಲೂಕಿನಲ್ಲೂ ಉತ್ತಮ ಮಳೆಯಾಗಿದ್ದು, ತಾಲ್ಲೂಕಿನ ಹೆಗ್ಗೋವೆ, ಆದರವಳ್ಳಿಯಲ್ಲಿ ಮರ ಹಾಗೂ ವಿದ್ಯುತ್ ಕಂಬ ನೆಲಕ್ಕುರುಳಿವೆ.

ಬೆಳಗಾವಿ ವರದಿ: ನಗರವೂ ಸೇರಿದಂತೆ ಜಿಲ್ಲೆಯಾದ್ಯಂತ ಉತ್ತಮ ಮಳೆ ಸುರಿಯಿತು.

ಸತತ ಎರಡನೇ ದಿನವೂ ಗುಡುಗು–ಮಿಂಚು ಸಹಿತವಾಗಿ ವರುಣ ಅಬ್ಬರಿಸಿದ್ದರಿಂದ ವಾತಾವರಣ ತಂಪೇರಿತು. ಬೆಳಿಗ್ಗೆಯಿಂದ ಮೋಡ ಕವಿದಿತ್ತು. ಸಂಜೆ ಒಂದು ತಾಸಿಗೂ ಅಧಿಕ ಉತ್ತಮ ಮಳೆ ಸುರಿಯಿತು

ಕಲಬುರಗಿ ವರದಿ: ಕಲಬುರಗಿ ಜಿಲ್ಲೆಯ ಕಮಲಾಪುರ ತಾಲ್ಲೂಕಿನ ಹಲವೆಡೆ ಹಾಗೂ ಬೀದರ್ ಜಿಲ್ಲೆಯಾದ್ಯಂತ ಗುಡುಗು, ಸಿಡಿಲು ಸಹಿತ ಮಳೆಯಾಗಿದ್ದು, ವಾತಾವರಣ ತಂಪಾಗಿದೆ.

ಬೆಳಿಗ್ಗೆಯಿಂದ ಮಧ್ಯಾಹ್ನದ ವರೆಗೆ ಬಿಸಿಲು ಹೆಚ್ಚಿತ್ತು. ಮಧ್ಯಾಹ್ನದ ನಂತರ ಏಕಾಏಕಿ ಕಾರ್ಮೋಡ ಕವಿದು, ಭಾರಿ ಗುಡುಗಿನ ಸದ್ದಿನೊಂದಿಗೆ ಮಳೆಯಾಯಿತು. ಸಂಜೆಯವರೆಗೆ ಬಿಟ್ಟು ಬಿಟ್ಟು ಮಳೆ ಸುರಿಯಿತು. ಬಿಸಿಲಿನ ಝಳ ದೂರವಾಗಿ ತಂಗಾಳಿ ಬೀಸಲಾರಂಭಿಸಿತು.

ಹುಬ್ಬಳ್ಳಿ ವರದಿ: ಹೊಸಪೇಟೆ ನಗರ, ತಾಲ್ಲೂಕು ಹಾಗೂ ಜಿಲ್ಲೆಯ ಕೆಲವೆಡೆ ಶನಿವಾರ ರಾತ್ರಿ ರಭಸದ ಮಳೆ ಸುರಿದಿದೆ.

ಎರಡು ಸಾವು: ವಿಜಯನಗರಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಅಡವಿ ಮಲ್ಲಾಪುರ ಗ್ರಾಮದಲ್ಲಿ ಸಿಡಿಲು ಬಡಿದು ರೈತ ಚೌಡಪ್ಪ (33) ಮೃತಪಟ್ಟಿದ್ದಾರೆ. ರಾತ್ರಿ ಮೇವಿನ ಬಣವೆಗೆ ಹೊದಿಕೆ ಹಾಕುತ್ತಿದ್ದಾಗ ಅವರ ಮೇಲೆ ಸಿಡಿಲು ಎರಗಿದೆ.

ಚಿಕ್ಕಮಗಳೂರು ಜಿಲ್ಲೆ ಎನ್‌.ಆರ್‌.ಪುರ ತಾಲ್ಲೂಕಿನ ಕಾನೂರು ಗ್ರಾ.ಪಂ. ವ್ಯಾಪ್ತಿಯ ಕಟ್ಟಿನಮನೆ ಎಂಬಲ್ಲಿ ಮರವೊಂದು ಕಾರಿನ ಮೇಲೆ ಬಿದ್ದು, ಕಾರಿನಲ್ಲಿದ್ದ ಮೂವರು ಗಾಯಗೊಂಡಿದ್ದಾರೆ.

ಇನ್ನೊಂದೆಡೆ ನಡೆದು ಹೋಗುತ್ತಿದ್ದ ಕೊಪ್ಪದ ಸುನೀತಾ (48) ಎಂಬವರ ಮೇಲೆ ಮರ ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕೊಪ್ಪಳದಲ್ಲಿ ಭಾನುವಾರ ರಾತ್ರಿ ಸುರಿದ ಮಳೆಯಲ್ಲಿ ಕೊಡೆಹಿಡಿದು ಹೊರಟ ದಂಪತಿ
—ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಬಾಂಬ್ ಸ್ಫೋಟ: ಟಿಎಂಸಿ ಕಾರ್ಯಕರ್ತ ಸಾವು

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಪಶ್ಚಿಮ ಬಂಗಾಳದ ಪೂರ್ವ ಬರ್ಧಮಾನ್ ಜಿಲ್ಲೆ ಕೇತುಗ್ರಾಮ ಎಂಬಲ್ಲಿ ಭಾನುವಾರ ಸಂಭವಿಸಿದ ಬಾಂಬ್ ಸ್ಫೋಟದಲ್ಲಿ ಆಡಳಿತಾರೂಢ ಟಿಎಂಸಿಯ ಒಬ್ಬ ಕಾರ್ಯಕರ್ತ ಮೃತಪಟ್ಟಿದ್ದಾರೆ.

ಮಿಂಟು ಶೇಖ್ ಮೃತ ಕಾರ್ಯಕರ್ತ. ರಾಜ್ಯದ ಎಂಟು ಲೋಕಸಭಾ ಕ್ಷೇತ್ರಗಳಿಗೆ ಸೋಮವಾರ ಮತದಾನ ನಡೆಯಲಿದ್ದು, ಮುನ್ನಾದಿನ ಈ ಅವಘಡ ಸಂಭವಿಸಿದೆ.

‘ಮಿಂಟು ಶೇಖ್ ಬೈಕ್‌ನಲ್ಲಿ ಮನೆಗೆ ಮರಳುತ್ತಿದ್ದಾಗ ಅವರನ್ನೇ ಗುರಿಯಾಗಿಸಿ ಕೆಲ ಕಿಡಿಗೇಡಿಗಳು ಬಾಂಬ್ ಎಸೆದಿದ್ದಾರೆ. ಸ್ಫೋಟದಿಂದಾಗಿ ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಮಿಂಟು ಮೃತ-ಪಟ್ಟಿದ್ದಾಗಿ ವೈದ್ಯರು ಘೋಷಿಸಿದರು’ ಎಂದು ಪೊಲೀಸರು ತಿಳಿಸಿದ್ದಾರೆ.

ಮಿಂಟು ಮೇಲೆ ಸಿಪಿಎಂ ಕಾರ್ಯಕರ್ತರೇ ದಾಳಿ ನಡೆಸಿದ್ದಾರೆ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

ಸಿಪಿಎಂ, ಈ ಆರೋಪ ತಳ್ಳಿಹಾಕಿದೆ. ‘ಟಿಎಂಸಿಯಲ್ಲಿನ ಒಳಜಗಳದಿಂದಾ-ಗಿಯೇ ಮಿಂಟು ಶೇಖ್‌ನನ್ನು ಹತ್ಯೆ ಮಾಡಲಾಗಿದೆ’ ಎಂದೂ ಹೇಳಿದೆ.

ಸ್ವರಶ್ರೀ ಸಂಗೀತ ಶಾಲೆಯು ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸ್ವರಶ್ರೀ ತೃತೀಯ ವಾರ್ಷಿಕೋತ್ಸವ, ಪ್ರಶಸ್ತಿ ಪ್ರದಾನ ಹಾಗೂ ‘ಸ್ವರ ಸಂಕಲನ’ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಗಾಯಕ ಬಾಲಸುಬ್ರಹ್ಮಣ್ಯಂ ಗ್ರಂಥಿ ಅವರಿಗೆ ‘ಸ್ವರಶ್ರೀ ವಿಶೇಷ ಪ್ರಶಸ್ತಿ’, ನಿನಾದ ಸಂಸ್ಕೃತಿ ಕಲಾಕೇಂದ್ರದ ಸಂಸ್ಥಾಪಕ ಹರೀಶ್ ನರಸಿಂಹ ಅವರಿಗೆ ‘ಸ್ವರಶ್ರೀ ವಾರ್ಷಿಕ ಪ್ರಶಸ್ತಿ’, ಕವಯಿತ್ರಿ ನಾಗಲಕ್ಷ್ಮೀ ಭಾಸ್ಕರ ಅವರಿಗೆ ‘ಸ್ವರಶ್ರೀ ವೇದ ಪ್ರಶಸ್ತಿ’, ಭರತನಾಟ್ಯ ಕಲಾವಿದೆ ಭಾರತಿ ರಾಜಶೇಖರ ಹಾಗೂ ಹಾರ್ಮೋನಿಯಂ ವಾದಕಿ ಮನೋರಮಾ ಹೆಗಡೆ ಅವರಿಗೆ ‘ಸ್ವರಶ್ರೀ ಮೋದ ಪ್ರಶಸ್ತಿ’, ಗಾಯಕರಾದ ಶಾರದಾ ಆದಿಶೇಷ ಹಾಗೂ ಪದ್ಮಾ ಶ್ರೀಧರ್ ಅವರಿಗೆ ‘ಸ್ವರಶ್ರೀ ನಾದ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಸಂಸ್ಥೆಯ ಸಂಸ್ಥಾಪಕಿ ಸ್ನೇಹಾ ಹಂಪಿಹೊಳಿ, ಕವಿ ಬಾಗೂರು ಮಾರ್ಕಾಂಡೇಯ, ಆಧ್ಯಾತ್ಮ ಚಿಂತಕ ದಿನೇಶ ಗುರೂಜಿ, ಲೇಖಕಿ ವರದಾ ಶ್ರೀನಿವಾಸನ್, ವಿಮರ್ಶಕಿ ಶ್ರೀಲಕ್ಷ್ಮೀ ಬಿ. ರಾವ್ ಹಾಗೂ ಸಂಸ್ಥೆಯ ಗೌರವಾಧ್ಯಕ್ಷ ಮುಕುಂದ ಗಂಗೂರು ಪಾಲ್ಗೊಂಡಿದ್ದರು.

ಪರೀಕ್ಷಾ ಕ್ರಮ ಸುಧಾರಣೆಗೆ ಸುರೇಶ್ ಕುಮಾರ್ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೆಬ್‌ಕಾಸ್ಟಿಂಗ್ ಕಣ್ಗಾವಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಸುವ ಮೌಲ್ಯ ನಿರ್ಣಯ ಮಂಡಳಿ ನಿರ್ಧಾರದಿಂದ ವಿದ್ಯಾರ್ಥಿಗಳಿಗೆ ಸಂಕಷ್ಟವಾಗಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷಾ ವಿಧಾನದಲ್ಲಿ ವೈಜ್ಞಾನಿಕವಾಗಿ ಸುಧಾರಣೆ ತರಬೇಕು’ ಎಂದು ಒತ್ತಾಯಿಸಿ ಬಿಜೆಪಿ ಶಾಸಕ ಎಸ್‌. ಸುರೇಶ್ ಕುಮಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

‘ಈ ಬಾರಿ ಎಸ್‌ಎಸ್‌ಎಲ್‌ಸಿ ಫಲಿತಾಂಶವು ಶೇಕಡ 83ರಿಂದ ಶೇ 53ಕ್ಕೆ ಕುಸಿದಿದೆ. ಪರೀಕ್ಷಾ ವಿಧಾನದಲ್ಲಿ ದಿಢೀರ್ ಬದಲಾವಣೆಯು ಒಂದು ಇಡೀ ಪೀಳಿಗೆಯ ಮನೋಸ್ಥೈರ್ಯವನ್ನು ಕಂಗೆಡಿಸುವ ಸಂಗತಿ. ಇಂತಹ ಬದಲಾವಣೆಗೂ ಮುನ್ನ ಸಮಗ್ರ ಆಲೋಚನೆ ಇರಬೇಕಾಗಿತ್ತು. ಪರೀಕ್ಷೆಯಲ್ಲಿ ಬದಲಾವಣೆ ತಂದು, ನಂತರ ಕೃಪಾಂಕ ನೀಡಿ 1.79 ಲಕ್ಷ ವಿದ್ಯಾರ್ಥಿಗಳು ಉತ್ತೀರ್ಣರಾಗುವಂತೆ ಮಾಡಿರುವುದು ಆಡಳಿತ ವ್ಯವಸ್ಥೆಯ ಲೋಪದೋಷ ಮತ್ತು ನೀತಿ ನಿರೂಪಕರು ಜವಾಬ್ದಾರಿರಹಿತರಂತೆ ವರ್ತಿಸಿರುವುದನ್ನು ಬಯಲು ಮಾಡಿದೆ’ ಎಂದು ಟೀಕಿಸಿದ್ದಾರೆ.

‘ಸರ್ಕಾರ ಈ ಕುರಿತು ವಸ್ತುನಿಷ್ಠವಾಗಿ ಆಲೋಚಿಸಬೇಕು. ಪರೀಕ್ಷೆಯ ನೆಪದಲ್ಲಿ ಮಕ್ಕಳ ಮೇಲೆ ಹಿಂಸೆಯನ್ನು ಹೇರಬಾರದು. ಈ ಕುರಿತು ಸಂಬಂಧಿಸಿದವರಿಗೆ ನೀವು ಸೂಕ್ತ ಮತ್ತು ಕಠಿಣ ನಿರ್ದೇಶನಗಳನ್ನು ನೀಡಬೇಕು. ಆಗ ಮಾತ್ರ ಬದಲಾವಣೆ ಸಾಧ್ಯವಾಗುತ್ತದೆ’ ಎಂದು ಒತ್ತಾಯಿಸಿದ್ದಾರೆ.

‘ರೋಟರಿ: ಜಗತ್ತಿಗೆ ದೀಪವಿದ್ದಂತೆ’

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ‘ರೋಟರಿ ಸಂಸ್ಥೆಯು ಯಾವುದೇ ಅಧಿಕಾರ, ಅಂತಸ್ತಿನ ವ್ಯಾಮೋಹ, ಪ್ರತಿಫಲದ ಅಪೇಕ್ಷೆಯಿಲ್ಲದೆ ಜನಸೇವೆ ಸಲ್ಲಿಸುತ್ತಿದೆ’ ಎಂದು ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಹೇಳಿದರು.

ರೋಟರಿ ಡಿಸ್ಟ್ರಿಕ್ಟ್ 3192 ವತಿಯಿಂದ ಅಂತರರಾಷ್ಟ್ರೀಯ ಸೇವೆ ಮತ್ತು ಸಾರ್ವಜನಿಕ ವ್ಯಕ್ತಿತ್ವದ ಕುರಿತು ಹಮ್ಮಿಕೊಂಡಿದ್ದ ಉಪನ್ಯಾಸದಲ್ಲಿ ಅವರು ಮಾತನಾಡಿದರು.

ರೋಟರಿ ಸಂಸ್ಥೆ ವಿಶ್ವದಾದ್ಯಂತ ಹೆಮ್ಮರವಾಗಿ ಬೆಳೆದು ಸಮಾಜಮುಖಿ ಸೇವೆ ಸಲ್ಲಿಸುತ್ತಿರುವುದು ಆರೋಗ್ಯಕರ ಬೆಳವಣಿಗೆ ಎಂದು ಹೇಳಿದರು.

ಜಿಲ್ಲಾ ಗವರ್ನರ್ ಆರ್‌. ಶ್ರೀನಿವಾಸ್‌ಮೂರ್ತಿ ಮಾತನಾಡಿ, ‘ದಾನಿಗಳು, ಉಳ್ಳವರು ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಿದ್ದಾರೆ. ಇನ್ನಷ್ಟು ಮುಂದೆ ಬಂದು ಆರೋಗ್ಯ, ಹೃದಯ ಶಸ್ತ್ರ ಚಿಕಿತ್ಸೆ, ಕ್ಯಾನ್ಸರ್, ಸೀಳುತುಟಿ, ಶಿಕ್ಷಣ, ರಕ್ತದಾನ, ಪರಿಸರ, ನೇತ್ರ, ದಂತ ಪರೀಕ್ಷೆ, ಚಿಕಿತ್ಸೆಯಂತಹ ಸೇವೆಯಲ್ಲಿಯೂ ತೊಡಗಿಸಿಕೊಳ್ಳಬೇಕಾಗಿದೆ. ಅದನ್ನು ಚಾಚೂ ತಪ್ಪದೆ ರೋಟರಿಯನ್‌ಗಳು ಮಾಡುತ್ತಿದ್ದಾರೆ’ ಎಂದು ಹೇಳಿದರು.

ಜಿಲ್ಲಾ ರೋಟರಿ 3192 ನಿರ್ದೇಶಕ, ಮಾಧ್ಯಮ ಮುಖ್ಯಸ್ಥ ಕೆ.ಟಿ.ನಿರಂಜನ್, ‘ಪ್ರಪಂಚದಲ್ಲಿ ಪೋಲಿಯೊ ನಿರ್ಮೂಲನೆ ಮಾಡುವದಲ್ಲಿ ರೋಟರಿ ಸಂಸ್ಥೆ ಮುಂದಾಗಿದೆ. ಇಂಟ್ರಾಕ್ಟ್, ರೊಟ್ರಾಕ್ಟ್ ಸಂಸ್ಥೆ ಸ್ಥಾಪಿಸಿ ಸರ್ಕಾರಿ ಶಾಲೆಗಳ ಬದಲಾವಣೆ, ಅಡವಿ ಯೋಜನೆಯಲ್ಲಿ 1,200 ಎಕರೆಯಲ್ಲಿ ಅರಣ್ಯ ಬೆಳೆಸುವುದು, ಬಡ ರೈತರಿಗೆ ಸೀಮೆ ಹಸು ವಿತರಣೆ, ಚೆಕ್‌ಡ್ಯಾಂ ನಿರ್ಮಾಣ, ಕ್ಯಾನ್ಸರ್, ಮುಟ್ಟಿನ ಅರಿವಿನ ಬಗ್ಗೆ ಜನಜಾಗೃತಿ ಮೂಡಿಸುವ ಕೆಲಸವನ್ನು ಸಂಸ್ಥೆ ಮಾಡುತ್ತಿದೆ’ ಎಂದರು.

ನಿಯೋಜಿತ ಗವರ್ನರ್ ಮಹದೇವ ಪ್ರಸಾದ್, ರೋಟರಿಯನ್‌ಗಳಾದ ಎಸ್‌. ನಾಗೇಂದ್ರ, ಪ್ರಭುದೇವ ಆರಾಧ್ಯ, ಜಿತೇಂದ್ರ ಅನೇಜ, ಸುನಿಲ್ ಟೇಲ್ಕರ್, ಕಾರ್ಯದರ್ಶಿ ವಿನೋದ್ ಕುಮಾರ್, ರೋಟರಿ ವಿಶ್ವನೀಡಂ ಅಧ್ಯಕ್ಷ ಶಶಿಧರ್, ರೋಟರಿ ಜಂಕ್ಷನ್‌ನ ಅಧ್ಯಕ್ಷ ಸುರೇಶ್ ಅರಕೆರೆ, ಭರಣಿ ನಿರಂಜನ್ ಹಾಜರಿದ್ದರು.

ರಾಜರಾಜೇಶ್ವರಿ ನಗರದಲ್ಲಿ ರೋಟರಿ ಡಿಸ್ಟ್ರಿಕ್ಟ್ 3192 ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಮಾತನಾಡಿದರು. ಡಾ. ಎಸ್‌. ನಾಗೇಂದ್ರ ಭಾಗವಹಿಸಿದ್ದರು.

ಸಾಹಿತ್ಯ ಅಕಾಡೆಮಿಯ ನಿಯೋಜಿತ ಅಧ್ಯಕ್ಷ ಮುಕುಂದರಾಜ್ ಹೇಳಿಕೆ

‘ಹೋಮ ಮಾಡಿ ಜೈಲು ಸೇರಿದ ರೇವಣ್ಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಜ್ಞ–ಯಾಗ, ಹೋಮಗಳಿಂದ ಹೊರಹೊಮ್ಮುವ ಹೊಗೆಯು ವ್ಯಕ್ತಿಯನ್ನು ಕಳಂಕಿತನಾಗಿಸುತ್ತದೆ. ಜೆಡಿಎಸ್ ಶಾಸಕ ಎಚ್‌.ಡಿ.ರೇವಣ್ಣ ಅವರು ಹೊಳೆನರಸೀಪುರದ ತಮ್ಮ ನಿವಾಸದಲ್ಲಿ ಇತ್ತೀಚೆಗೆ ಬಹಳ ದೊಡ್ಡ ಹೋಮ ಮಾಡಿಸಿ, ಪರಪ್ಪನ ಅಗ್ರಹಾರ ಸೇರಿದರು. ಹೋಮ ಫಲ ಯಾವ ರೀತಿ ಇರುತ್ತದೆ ಎನ್ನುವುದಕ್ಕೆ ಇದು ಉತ್ತಮ ಉದಾಹರಣೆ’ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ನಿಯೋಜಿತ ಅಧ್ಯಕ್ಷ ಎಲ್‌.ಎನ್‌. ಮುಕುಂದರಾಜ್ ತಿಳಿಸಿದರು.

ರಾಜಮಾರ್ಗ ಸಾಹಿತ್ಯ ಸಂಸ್ಕೃತಿ ಸಂಸ್ಥೆ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸಾ.ನಾ. ರಮೇಶ ಅವರ ‘ನನಸುಗಾರನ ಸ್ವಗತ–ಸಾಗಿ ಸರಿದ ಬದುಕಿನ ಸ್ಮರಣೆಗಳು’ ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು.

‘ಹೋಮದ ಹೊಗೆಯಿಂದ ಕಪ್ಪಾಗುತ್ತಾರೆ ಎಂದು ಯಜ್ಞ ಫಲದ ಬಗ್ಗೆ ಸಾವಿರ ವರ್ಷಗಳ ಹಿಂದೆಯೇ ಪಂಪ ಹೇಳಿದ್ದ. ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಅವರು ತಮ್ಮ ನಿವಾಸದ ಜತೆಗೆ ರೇಸ್ ಕೋರ್ಸ್ ರಸ್ತೆಯಲ್ಲಿರುವ ಜೆಡಿಎಸ್ ಕೇಂದ್ರ ಕಚೇರಿಯಲ್ಲಿಯೂ ಶತ್ರು ಸಂಹಾರ ಸೇರಿ ವಿವಿಧ ಹೋಮಗಳನ್ನು ಮಾಡಿಸಿದ್ದರು. ಇದರ ಕಾರಣವಾಗಿಯೇ ಅವರು ಸಂಕಷ್ಟಕ್ಕೆ ಸಿಲುಕಿ, ಬಹಳ ಬೆಲೆ ಬಾಳುವ ಕಚೇರಿಯ ಜಾಗವನ್ನೂ ಸಿಟಿ ಸಿವಿಲ್ ನ್ಯಾಯಾಲಯದ ಆದೇಶದ ಅನ್ವಯ ಕಾಂಗ್ರೆಸ್ ಪಕ್ಷಕ್ಕೆ ನೀಡಬೇಕಾಯಿತು ಅನಿಸುತ್ತದೆ’ ಎಂದರು.

‘ಯಡಿಯೂರಪ್ಪ ಅವರೂ ಮೊದಲ ಬಾರಿ ಮುಖ್ಯಮಂತ್ರಿ ಆದಾಗ ಹೋಮ ಮಾಡಿಸಿದ್ದರು. ಅದರ ಫಲವಾಗಿ ಅವರು ಪರಪ್ಪನ ಅಗ್ರಹಾರ ಸೇರಬೇಕಾಯಿತು. ಹೋಮ, ಯಜ್ಞ ಮಾಡುವುದರಿಂದ ಬಹಳ ಅನಾಹುತಗಳಾಗುತ್ತವೆ’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಎಲ್‌.ಎನ್‌. ಮುಕುಂದರಾಜ್ ಅವರು (ಎಡದಿಂದ ನಾಲ್ಕನೆಯವರು) ಸಾ.ನಾ. ರಮೇಶ (ಎಡದಿಂದ ಐದನೆಯವರು) ಅವರ ‘ನನಸುಗಾರನ ಸ್ವಗತ–ಸಾಗಿ ಸರಿದ ಬದುಕಿನ ಸ್ಮರಣೆಗಳು’ ಪುಸ್ತಕ ಬಿಡುಗಡೆ ಮಾಡಿದರು. (ಎಡದಿಂದ) ಜಾನಪದ ಕಲಾವಿದ ಮೋಹನ್ ಕುಮಾರ್ ಎನ್‌., ಯೋಗೇಶ್ ಮಾಸ್ಟರ್, ಲೇಖಕಿ ಡಾ.ವಸುಂಧರಾ ಭೂಪತಿ ಮತ್ತು ಪ್ರಕಾಶಕಿ ಕೈವಲ್ಯ ಕೃಷ್ಣ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

- **ಪುಸ್ತಕ:** ‘ನನಸುಗಾರನ ಸ್ವಗತ–ಸಾಗಿ ಸರಿದ ಬದುಕಿನ ಸ್ಮರಣೆಗಳು’
- **ಪ್ರಕಾರ:** ಆತ್ಮಕಥೆ
- **ಲೇಖಕರು:** ಸಾ.ನಾ. ರಮೇಶ
- **ಪುಟಗಳು:** 300
- **ಬೆಲೆ:** ₹ 350
- **ಪ್ರಕಾಶನ:** ರಾಜಮಾರ್ಗ ಸಾಹಿತ್ಯ ಸಂಸ್ಕೃತಿ

ಶ್ರೀಕಂಠೇಶ್ವರ ದೇವಳ ಜೀರ್ಣೋದ್ಧಾರ

ಪ್ರಜಾವಾಣಿ ವಾರ್ತೆ

ಕೆ.ಆರ್‌.ಪುರ: ಸಿದ್ದಾಪುರದ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಮತ್ತು ಮಹಾ ಕುಂಭಾಭಿಷೇಕ ಕಾರ್ಯಕ್ರಮ ಅದ್ಧೂರಿಯಾಗಿ ನಡೆಯಿತು.

ಸುಮಾರು ಐವತ್ತು ವರ್ಷಗಳ ಹಿಂದೆ ನಿರ್ಮಾಣಗೊಂಡಿರುವ ದೇವಸ್ಥಾನ ಸಿದ್ದಾಪುರ ಮತ್ತು ಸುತ್ತಮುತ್ತಲಿನ ಗ್ರಾಮಗಳ ಆರಾಧ್ಯ ದೈವವಾಗಿತ್ತು. ಭಕ್ತರ ಆಶಯದಂತೆ ಜೀರ್ಣೋದ್ಧಾರ ಕಾರ್ಯ ನೆರವೇರಿತು.

ಶ್ರೀಮಹಾಗಣಪತಿ, ಶ್ರೀಕಂಠೇಶ್ವರ ಸ್ವಾಮಿ, ಶ್ರೀಪಾರ್ವತಿದೇವಿ, ಶ್ರೀಚಂಡಕೇಶ್ವರ, ಶ್ರೀನಂದಿ, ಶ್ರೀಕಾಲಭೈರೇಶ್ವರ ಸ್ವಾಮಿ, ಶ್ರೀಆಂಜನೇಯಸ್ವಾಮಿ, ಶ್ರೀನಾಗದೇವತಾ ದೇವರುಗಳ ಪ್ರತಿಷ್ಠಾಪನಾ ಕಾರ್ಯ ನಡೆಯಿತು.

ಭಾನುವಾರ ಬೆಳಿಗ್ಗೆ ಪಿಂಡಿಕಾಪೂಜೆ, ರತ್ನನ್ಯಾಸ ಮೂಲ ವಿಗ್ರಹಗಳ ಪ್ರತಿಷ್ಠೆ, ಅಷ್ಟಬಂಧನ, ಅಗ್ನಿ ಆರಾಧನೆ, ಮೂರ್ತಿ ಹೋಮ, ಮಹಾಸಂಕಲ್ಪ, ಮಹಾಪೂರ್ಣಾಹುತಿ, ಪಂಚಾಮೃತ ಅಭಿಷೇಕ, ಮಹಾ ಪ್ರಸಾದ ವಿನಿಯೋಗ ನೆರವೇರಿತು.

ಕಾರ್ಯಕ್ರಮದಲ್ಲಿ ಸಿದ್ದಗಂಗಾ ಮಠದ ಪೀಠಾಧ್ಯಕ್ಷ ಸಿದ್ದಲಿಂಗ ಸ್ವಾಮೀಜಿ, ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ, ಮಾಜಿ ಸಚಿವ ಅರವಿಂದ ಲಿಂಬಾವಳಿ, ಮುಖಂಡರಾದ ಗಿರಿರಾಜಗೌಡ, ಗಗನಗೌಡ, ಹನುಮಂತೇಗೌಡ ಮತ್ತಿತರರು ಪಾಲ್ಗೊಂಡಿದ್ದರು.

ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ

ಜೂನ್ 3ರಂದು ಆರು ಕ್ಷೇತ್ರಗಳಿಗೆ ಚುನಾವಣೆ • ರಾಜಕೀಯ ಪಕ್ಷಗಳಲ್ಲಿ ಚಟುವಟಿಕೆ ಚುರುಕು

ಪರಿಷತ್ ಚುನಾವಣೆ: ಸಚಿವರಿಗೆ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನ ಆರು ಕ್ಷೇತ್ರಗಳಿಗೆ ಜೂನ್ 3ರಂದು ನಡೆಯುವ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಗಳನ್ನು ಗೆಲುವಿನ ದಡ ಮುಟ್ಟಿಸುವ ಹೊಣೆಗಾರಿಕೆಯನ್ನು ಜಿಲ್ಲಾ ಉಸ್ತುವಾರಿ ಸಚಿವರಿಗೆ ನೀಡಲು ಕಾಂಗ್ರೆಸ್ ನಿರ್ಧರಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವಿಧಾನ ಪರಿಷತ್ ಚುನಾವಣಾ ಸಿದ್ಧತೆ ಕುರಿತು ಪಕ್ಷದ ಅಭ್ಯರ್ಥಿಗಳು, ಸಚಿವರು, ಮುಖಂಡರ ಜತೆ ಭಾನುವಾರ ಸುದೀರ್ಘ ಸಭೆ ನಡೆಸಿದರು.

ಆಯಾ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಿಗೆ ಮುನ್ನಡೆ ದೊರಕಿಸುವ ಹೊಣೆಯನ್ನು ಜಿಲ್ಲಾ ಉಸ್ತುವಾರಿ ಸಚಿವರಿಗೆ ವಹಿಸುವುದಾಗಿ ಮುಖ್ಯಮಂತ್ರಿಯವರು ಈ ಸಭೆಯಲ್ಲಿ ಹೇಳಿದ್ದಾರೆ.

‘ವಿಧಾನ ಪರಿಷತ್‌ನ ಮೂರು ಪದವೀಧರರ ಕ್ಷೇತ್ರಗಳು ಮತ್ತು ಮೂರು ಶಿಕ್ಷಕರ ಕ್ಷೇತ್ರಗಳಿಗೆ ಚುನಾವಣೆ ನಡೆಯುತ್ತಿದೆ. ಆರು ಕ್ಷೇತ್ರಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳು ಗೆಲ್ಲಲೇಬೇಕು. ಸಚಿವರು ಮತ್ತು ಶಾಸಕರು ತಮ್ಮ ಸ್ವಂತ ಚುನಾವಣೆ ಎದುರಿಸಿದಂತೆ ಈ ಚುನಾವಣೆಯಲ್ಲಿ ಕೆಲಸ ಮಾಡಬೇಕು’ ಎಂಬುದಾಗಿ ಸಿದ್ದರಾಮಯ್ಯ ಸಭೆಯಲ್ಲಿ ಸೂಚನೆ ನೀಡಿದರು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ತಕ್ಷಣದಿಂದ ಎಲ್ಲ ಕ್ಷೇತ್ರಗಳಲ್ಲೂ ಚುನಾವಣಾ ಪ್ರಚಾರ ಆರಂಭಿಸಬೇಕು. ಪಕ್ಷದ ಅಭ್ಯರ್ಥಿಗಳು ಎಲ್ಲ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲೂ ಮುನ್ನಡೆ ಪಡೆಯುವುದಕ್ಕೆ ಅನುಕೂಲವಾಗುವಂತೆ ಕಾರ್ಯತಂತ್ರ ರೂಪಿಸಬೇಕು. ಅಭ್ಯರ್ಥಿಗಳಿಗೆ ಹಿನ್ನಡೆಯಾದರೆ ಸಚಿವರು, ಶಾಸಕರನ್ನು ಹೊಣೆ ಮಾಡಲಾಗುವುದು ಎಂಬ ಎಚ್ಚರಿಕೆಯನ್ನೂ ನೀಡಿದರು ಎಂದು ಮೂಲಗಳು ಹೇಳಿವೆ.

ಲೋಕಸಭೆ ಚುನಾವಣೆಯ ಮಾದರಿ: ಸಭೆಯ ಬಳಿಕ ಪತ್ರಕರ್ತರ ಜತೆ ಮಾತನಾಡಿದ ಶಿವಕುಮಾರ್, ‘ಶಿಕ್ಷಕರ ಹಾಗೂ ಪದವೀಧರ ಕ್ಷೇತ್ರಗಳ ಚುನಾವಣೆಯನ್ನು ಲೋಕಸಭಾ ಚುನಾವಣೆ ಮಾದರಿಯಲ್ಲೇ ಎದುರಿಸುತ್ತೇವೆ’ ಎಂದರು.

‘ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರಿಂದ ಆರಂಭವಾಗಿ ಪಕ್ಷದ ಎಲ್ಲ ಮುಖಂಡರು ಸೇರಿ ಈ ಚುನಾವಣೆ ಎದುರಿಸಬೇಕು. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ನಿರ್ದೇಶನ ನೀಡಲಾಗಿದೆ. ಪಕ್ಷದ ಅಭ್ಯರ್ಥಿಗಳಿಗೆ ಬಿ ಫಾರ್ಮ್ ವಿತರಣೆ ಮಾಡಲಾಗಿದೆ’ ಎಂದು ತಿಳಿಸಿದರು.

ಪರಿಷತ್ ಚುನಾವಣೆಯಲ್ಲೂ ಬಿಜೆಪಿ-ಜೆಡಿಎಸ್ ಮೈತ್ರಿ ಮುಂದುವರಿದಿರುವ ಬಗ್ಗೆ ಕೇಳಿದಾಗ, ‘ಅವರು ಶಾಶ್ವತವಾಗಿ ಮೈತ್ರಿ ಮಾಡಿಕೊಳ್ಳಲಿ. ಅದಕ್ಕೆ ನಮ್ಮ ಅಭ್ಯಂತರ ವಿಲ್ಲ. ಮೈತ್ರಿಯಾದರೂ ಮಾಡಿಕೊಳ್ಳಲಿ, ವಿಲೀನವಾದರೂ ಮಾಡಿಕೊಳ್ಳಲಿ. ಅದು ಅವರ ಪಕ್ಷಗಳ ತೀರ್ಮಾನ. ಯಾರ ಭಾವಚಿತ್ರವನ್ನಾದರೂ ಹಾಕಿಕೊಂಡು ಮತ ಕೇಳಲಿ. ನಮಗೂ ಅದಕ್ಕೂ ಸಂಬಂಧವಿಲ್ಲ’ ಎಂದರು.

ಸಚಿವರಾದ ಕೆ.ಎನ್.ರಾಜಣ್ಣ, ಮಧು ಬಂಗಾರಪ್ಪ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಜಿ.ಸಿ.ಚಂದ್ರಶೇಖರ್, ತನ್ವೀರ್ ಸೇಠ್, ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಶಾಸಕ ಬೇಲೂರು ಗೋಪಾಲಕೃಷ್ಣ ಸೇರಿದಂತೆ ಹಲವು ಮುಖಂಡರು ಸಭೆಯಲ್ಲಿದ್ದರು.

ವಿಧಾನ ಪರಿಷತ್‌ನ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಮರಿತಿಬ್ಬೇಗೌಡ ಅವರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಭಾನುವಾರ ಬಿ ಫಾರಂ ವಿತರಿಸಿದರು. ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮರಿಸ್ವಾಮಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ತ್ಯಾಗರಾಜ್, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಜತೆಗಿದ್ದರು — ಪ್ರಜಾವಾಣಿ ಚಿತ್ರ

ಕಾಂಗ್ರೆಸ್ ಅಭ್ಯರ್ಥಿಯಾಗಿ ಮರಿತಿಬ್ಬೇಗೌಡ ಆಯ್ಕೆ

ವಿಧಾನ ಪರಿಷತ್‌ನ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯನ್ನಾಗಿ ವಿಧಾನ ಪರಿಷತ್‌ನ ಮಾಜಿ ಸದಸ್ಯ ಮರಿತಿಬ್ಬೇಗೌಡ ಅವರನ್ನು ಆಯ್ಕೆ ಮಾಡಲಾಗಿದೆ.

‘ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಯನ್ನಾಗಿ ಮರಿತಿಬ್ಬೇಗೌಡ ಅವರನ್ನು ಆಯ್ಕೆಮಾಡುವ ಪ್ರಸ್ತಾವಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅನುಮೋದನೆ ನೀಡಿದ್ದಾರೆ’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಭಾನುವಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮರಿತಿಬ್ಬೇಗೌಡ ಅವರು 2000ನೇ ವರ್ಷದಿಂದ ಸತತ ನಾಲ್ಕು ಬಾರಿ ದಕ್ಷಿಣ ಶಿಕ್ಷಕರ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಒಂದು ಬಾರಿ ಕಾಂಗ್ರೆಸ್‌ನಿಂದ, ಮತ್ತೊಮ್ಮೆ ಪಕ್ಷೇತರ ಅಭ್ಯರ್ಥಿಯಾಗಿ ಹಾಗೂ ಎರಡು ಬಾರಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು. ಲೋಕಸಭಾ ಚುನಾವಣೆಗೂ ಮುನ್ನ ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿ, ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ್ದರು.

ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಾಗಿರುವ ಮರಿತಿಬ್ಬೇಗೌಡ, ಕೆ.ಕೆ. ಮಂಜುನಾಥ್ ಕುಮಾರ್, ಆಯನೂರು ಮಂಜುನಾಥ್ ಮತ್ತು ಚಂದ್ರಶೇಖರ ಪಾಟೀಲ ಅವರಿಗೆ ಭಾನುವಾರ ಬಿ ಫಾರಂ ವಿತರಿಸಲಾಯಿತು.

ದಕ್ಷಿಣ ಶಿಕ್ಷಕರ ಕ್ಷೇತ್ರ: ಜೆಡಿಎಸ್‌ಗೆ ಬಿಟ್ಟುಕೊಟ್ಟ ಬಿಜೆಪಿ

ವಿಧಾನ ಪರಿಷತ್ ಚುನಾವಣೆಯ ಕ್ಷೇತ್ರ ಹಂಚಿಕೆ ವಿಚಾರದಲ್ಲಿ ನಿಲುವು ಬದಲಿಸಿರುವ ಬಿಜೆಪಿ, ದಕ್ಷಿಣ ಶಿಕ್ಷಕರ ಕ್ಷೇತ್ರವನ್ನು ಮಿತ್ರಪಕ್ಷ ಜೆಡಿಎಸ್‌ಗೆ ಬಿಟ್ಟುಕೊಡಲು ತೀರ್ಮಾನಿಸಿದೆ. ಅದರ ಬೆನ್ನಲ್ಲೇ ಜೆಡಿಎಸ್ ಅಭ್ಯರ್ಥಿ ಆಯ್ಕೆ ಪ್ರಕ್ರಿಯೆ ಆರಂಭಿಸಿದೆ.

ಪರಿಷತ್‌ನ ಶಿಕ್ಷಕರು ಮತ್ತು ಪದವೀಧರರ ತಲಾ ಮೂರು ಕ್ಷೇತ್ರಗಳಿಗೆ ಜೂನ್ 3ರಂದು ಚುನಾವಣೆ ನಡೆಯಲಿದೆ. ಈ ಪೈಕಿ ನೈರುತ್ಯ ಶಿಕ್ಷಕರ ಕ್ಷೇತ್ರವನ್ನು ಹೊರತುಪಡಿಸಿ ಉಳಿದ ಐದು ಕ್ಷೇತ್ರಗಳಿಗೂ ಬಿಜೆಪಿ ತನ್ನ ಅಭ್ಯರ್ಥಿಗಳ ಹೆಸರನ್ನು ಶನಿವಾರ ಪ್ರಕಟಿಸಿತ್ತು.

‘ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಮುಂದುವರಿಯಲಿದ್ದು, ಬಿಜೆಪಿ ನಾಲ್ಕು ಮತ್ತು ಜೆಡಿಎಸ್ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಲಿವೆ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಶನಿವಾರ ಬೆಳಿಗ್ಗೆ ಮೈಸೂರಿನಲ್ಲಿ ಹೇಳಿಕೆ ನೀಡಿದ್ದರು. ಆದರೆ, ಬಿಜೆಪಿ ರಾಷ್ಟ್ರೀಯ ಮುಖಂಡರು ಐದು ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿಯನ್ನು ಸಂಜೆ ಪ್ರಕಟಿಸಿದ್ದರು.

ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಪ್ರಕಟವಾದ ಬಳಿಕ ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಸಂಪರ್ಕಿಸಿದ್ದ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರು, ಬಿಜೆಪಿ–ಜೆಡಿಎಸ್ ಜಂಟಿ ಸಮನ್ವಯ ಸಮಿತಿಯಲ್ಲಿ ಮಾಡಿದ್ದ ತೀರ್ಮಾನದಂತೆ ಎರಡು ಕ್ಷೇತ್ರಗಳನ್ನು ಬಿಟ್ಟುಕೊಡಲು ಮನವಿ ಮಾಡಿದ್ದರು. ಆ ಬಳಿಕ ದಕ್ಷಿಣ ಶಿಕ್ಷಕರ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡಲು ಬಿಜೆಪಿ ವರಿಷ್ಠರು ಒಪ್ಪಿದ್ದಾರೆ. ದಕ್ಷಿಣ ಶಿಕ್ಷಕರ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯನ್ನಾಗಿ ಈ.ಸಿ. ನಿಂಗರಾಜು ಅವರನ್ನು ಆಯ್ಕೆ ಮಾಡಲಾಗಿತ್ತು. ಆದರೆ, ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಎರಡು ಅವಧಿಗೆ ಸತತವಾಗಿ ಜೆಡಿಎಸ್ ಅಭ್ಯರ್ಥಿಯೇ ಗೆಲುವು ಸಾಧಿಸಿದ್ದರು. ಈ ಕಾರಣದಿಂದ ಜೆಡಿಎಸ್ ಅಭ್ಯರ್ಥಿಯನ್ನೇ ಈ ಕ್ಷೇತ್ರದಲ್ಲಿ ಕಣಕ್ಕಿಳಿಸಲು ಬಿಜೆಪಿ ನಾಯಕರು ತೀರ್ಮಾನಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಅಭ್ಯರ್ಥಿ ಆಯ್ಕೆಗೆ ಸಭೆ: ಕ್ಷೇತ್ರ ಬಿಟ್ಟುಕೊಡಲು ಬಿಜೆಪಿ ಒಪ್ಪಿದ ಬೆನ್ನಲ್ಲೇ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರು ತಮ್ಮ ನಿವಾಸದಲ್ಲಿ ಪಕ್ಷದ ನಾಯಕರ ಸಭೆ ನಡೆಸಿ, ಅಭ್ಯರ್ಥಿ ಆಯ್ಕೆ ಕುರಿತು ಚರ್ಚಿಸಿದರು.

ಕುಮಾರಸ್ವಾಮಿ, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡ, ಶಾಸಕ ಎಚ್.ಡಿ. ಮಂಜುನಾಥ್, ಮಾಜಿ ಸಚಿವರಾದ ಸಿ.ಎಸ್. ಪುಟ್ಟರಾಜು, ಸಾ.ರಾ. ಮಹೇಶ್, ಮಾಜಿ ಶಾಸಕರಾದ ಕೆ. ಅನ್ನದಾನಿ, ಸುರೇಶ್ ಗೌಡ, ಟಿಕೆಟ್ ಆಕಾಂಕ್ಷಿಗಳಾದ ಕೆ.ಟಿ. ಶ್ರೀಕಂಠೇಗೌಡ ಮತ್ತು ವಿವೇಕಾನಂದ ಸಭೆಯಲ್ಲಿ ಭಾಗವಹಿಸಿದ್ದರು.‘ಅಭ್ಯರ್ಥಿ ಆಯ್ಕೆ ಕುರಿತು ಎಚ್.ಡಿ. ದೇವೇಗೌಡರು ಎಲ್ಲ ನಾಯಕರ ಅಭಿಪ್ರಾಯ ಆಲಿಸಿದ್ದಾರೆ. ಬುಧವಾರ (ಮೇ 15) ತಮ್ಮ ತೀರ್ಮಾನ ಪ್ರಕಟಿಸುವುದಾಗಿ ದೇವೇಗೌಡರು ತಿಳಿಸಿದ್ದಾರೆ’ ಎಂದು ಜಿ.ಟಿ. ದೇವೇಗೌಡ ‘ಪ್ರಜಾವಾಣಿ’ಗೆ ತಿಳಿಸಿದರು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸುವುದು ಕಡ್ಡಾಯ. ಆಧಾರ್/ಪ್ಯಾನ್ ಹೊಂದಿಲ್ಲದ ದಾನಿಗಳು ತಾವು ನೆಲಸಿರುವ ದೇಶದಲ್ಲಿನ ತೆರಿಗೆದಾತರ ಗುರುತಿನ ಸಂಖ್ಯೆ/ಪಾಸ್‌ಪೋರ್ಟ್ ಸಂಖ್ಯೆ/ಮತದಾರರ ಗುರುತಿನ ಸಂಖ್ಯೆ/ಚಾಲನಾ ಪರವಾನಗಿ ಸಂಖ್ಯೆ ಇದರಲ್ಲಿ ಯಾವುದಾದರೂ ಒಂದನ್ನು ನೀಡುವುದು ಕಡ್ಡಾಯ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2023-24ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ **‘ಶೈಕ್ಷಣಿಕ ನೆರವಿಗೆ ಅರ್ಜಿ’** ಎಂದು ಬರೆಯಬೇಕು.

ಕನಸಿಗೆ ಶಕ್ತಿ ತುಂಬಿದ ವಿದ್ಯಾರ್ಥಿವೇತನ

ಬಡ ಕುಟುಂಬದಿಂದ ಬಂದ ನನಗೆ, ‘ಪ್ರಜಾವಾಣಿ’ ಸಹಾಯ ಮಾಡಿ ನನ್ನ ಕನಸಿಗೆ ಶಕ್ತಿ ತುಂಬಿದೆ. ಇದನ್ನು ಎಂದಿಗೂ ಮರೆಯಲಾರೆ. ಪತ್ರಿಕೆ ನೀಡಿದ ವಿದ್ಯಾರ್ಥಿವೇತನವನ್ನು ಪ್ರಥಮ ಪಿಯು ಕಾಲೇಜು ಶುಲ್ಕ ಕಟ್ಟಲು ಬಳಸಿಕೊಂಡಿದ್ದು, ಉಳಿದಿದ್ದನ್ನು ಪುಸ್ತಕ ಖರೀದಿಗೆ ಬಳಸಿದ್ದೇನೆ

ಮೋನಿಶಾ, ಚಿಕ್ಕಮಗಳೂರು

ಪ್ರಜಾವಾಣಿ

ಪತ್ರಿಕೆ ಚಂದಾದಾರಿಕೆ/ವಿತರಣೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಸಂಪರ್ಕಿಸಿ

(ವಿಳಂಬವಾಗಿ ಪತ್ರಿಕೆ ತಲುಪುವುದು, ಪತ್ರಿಕೆ ತಲುಪದೇ ಇರುವುದು, ನಿಯಮಿತವಾಗಿ ಪತ್ರಿಕೆ ಪೂರೈಕೆ ಆಗದಿರುವುದು)

: 9008366666

: support@deccanherald.co.in

ದೇಶದಲ್ಲಿ 7– 9 ಕೋಟಿ ಜನ: ಭಾಷಾ ಚಿಂತಕರ ಅಭಿಪ್ರಾಯ

‘ಲಂಬಾಣಿ ಜನಾಂಗದ ಜನಸಂಖ್ಯೆ 35 ಲಕ್ಷ’

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ವಿವಿಧ ಅಧ್ಯಯನಗಳು ಹಾಗೂ ಲಭ್ಯವಿರುವ ಮಾಹಿತಿಗಳ ಪ್ರಕಾರ ರಾಜ್ಯದಲ್ಲಿ ಬಂಜಾರ, ಲಂಬಾಣಿ ಜನಾಂಗದ ಜನಸಂಖ್ಯೆ ಪ್ರಸ್ತುತ 35 ಲಕ್ಷಕ್ಕೂ ಹೆಚ್ಚು ಮತ್ತು ದೇಶದಲ್ಲಿ 7ರಿಂದ 9 ಕೋಟಿ ಇದೆ. ನಿಖರವಾದ ಅಂಕಿ ಅಂಶ ಸರ್ಕಾರದ ಜಾತಿ ಜನಗಣತಿಯಿಂದ ಬರಬೇಕಿದೆ’ ಎಂದು ಭಾಷಾ ಹಾಗೂ ಸಾಂಸ್ಕೃತಿಕ ಚಿಂತಕರಾದ ಎ.ಆರ್. ಗೋವಿಂದಸ್ವಾಮಿ, ಪ್ರೊ.ಶಾಂತ ನಾಯಕ್, ಡಿ. ಪರಮೇಶ ನಾಯಕ ತಿಳಿಸಿದ್ದಾರೆ.

‘ಪ್ರಜಾವಾಣಿ’ಯ ಶನಿವಾರದ ಸಂಚಿಕೆಯಲ್ಲಿ ಪ್ರಕಟವಾದ ‘ಕಲ್ಯಾಣ ಕರ್ನಾಟಕದಲ್ಲಿ ಲಂಬಾಣಿ ಭಾಷಾ ವೈವಿಧ್ಯ’ ಕುರಿತ ವಿಶೇಷ ವರದಿಯಲ್ಲಿ ರಾಜ್ಯದಲ್ಲಿ 10 ಲಕ್ಷ ಜನಸಂಖ್ಯೆ ಇದೆ ಎಂಬ ಅಂಶದ ಕುರಿತು ಅವರು ಈ ಹೇಳಿಕೆ ನೀಡಿದ್ದಾರೆ.

‘ಲೇಖನದಲ್ಲಿ ರಾಜ್ಯ ಹಾಗೂ ದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಲಂಬಾಣಿ ಭಾಷೆ ಮಾತನಾಡುವ ಜನರಿದ್ದು ಈ ಭಾಷೆಗೆ ರಾಜ್ಯಭಾಷಾ ಸ್ಥಾನಮಾನ ಲಭಿಸಬೇಕು ಎಂಬ ಒಳ್ಳೆಯ ಉದ್ದೇಶವನ್ನು ಸಂಶೋಧಕರು ಹೊಂದಿದ್ದಾರೆ. ವರದಿಯಲ್ಲಿನ ಸಮುದಾಯದ ಜನಸಂಖ್ಯೆ 2011ರ ಜನಗಣತಿಯನ್ನು ಆಧರಿಸಿದೆ. ಜಾತಿ ಅಂಕಿ ಅಂಶವು ಸಂಶೋಧಕರು ಹೇಳುವಂತೆ ಭಾಷೆಗೆ ಸೀಮಿತವಾದ ಅಧ್ಯಯನವಾಗಿದೆಯೇ ಹೊರತು ರಾಜ್ಯ ಮತ್ತು ದೇಶದಲ್ಲಿ ಬಂಜಾರ ಜನಸಂಖ್ಯೆಗೆ ಸಂಬಂಧಿಸಿದ ಅಧ್ಯಯನವಲ್ಲ. ಹೀಗಾಗಿ, ಸಮುದಾಯದವರು ಆತಂಕ ಪಡುವ ಅಗತ್ಯವಿಲ್ಲ’ ಎಂದಿದ್ದಾರೆ.

ಮುಸ್ಲಿಂ ಮಹಿಳೆಗೆ ಡ್ರಾಪ್: ಚಾಲಕನಿಗೆ ಥಳಿತ

ಪ್ರಜಾವಾಣಿ ವಾರ್ತೆ

ಬೀದರ್: ಮುಸ್ಲಿಂ ಮಹಿಳೆಯನ್ನು ಆಟೊದಲ್ಲಿ ಕರೆದೊಯ್ದ ಹಿಂದೂ ಧರ್ಮೀಯ ಚಾಲಕನನ್ನು ಹಿಗ್ಗಾಮುಗ್ಗಾ ಥಳಿಸಿ, ನಿಂದಿಸಿ, ಜೀವ ಬೆದರಿಕೆ ಹಾಕಿರುವ ಘಟನೆ ಸಂಬಂಧ ಮೂವರನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಸೈಯದ್ ಬಿಲಾಲ್, ತೌಸಿಫ್ ಅಯೂಬ್ ಚಾವುಸ್ ಹಾಗೂ ಸೈಯದ್ ಇಬ್ರಾಹಿಂ ಎಂಬವವರನ್ನು ಪೊಲೀಸರು ಬಂಧಿಸಿದ್ದಾರೆ. ಖದೀರ್ ಖುರೇಶಿ ಹಾಗೂ ಮಗದೂಮ್ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ.

ಬಸವಕಲ್ಯಾಣ ತಾಲ್ಲೂಕಿನ ನಾರಾಯಣಪುರದ ನಿವಾಸಿ ಅಶೋಕ ರೆಡ್ಡಿ ಪಾಂಡುರಂಗ ರೆಡ್ಡಿ ಪಿಚಾರೆ (42) ಪ್ಯಾಸೆಂಜರ್ ಆಟೊ ಓಡಿಸಿ ಜೀವನ ಸಾಗಿಸುತ್ತಾರೆ. ಏಪ್ರಿಲ್ 17ರಂದು ಪ್ರಯಾಣಿಕರನ್ನು ಬಸವಕಲ್ಯಾಣದಿಂದ ಕೌಡಿಯಾಳ ಗ್ರಾಮಕ್ಕೆ ಕರೆದೊಯ್ಯುವಾಗ ಅವರದೇ ಊರಿನ ಹಜರತ್‌ಬೀ ಹನ್ನುಮಿಯ್ಯಾ ಎಂಬುವವರು ಕೂಡ ಆಟೋ ಹತ್ತಿದ್ದಾರೆ.

ಸಾಲು ಮರದ ತಿಮ್ಮಕ್ಕ ಉದ್ಯಾನದ ಹತ್ತಿರ ಇಳಿದುಕೊಂಡಿದ್ದಾರೆ. ವಾಪಸ್ ಹೋಗುವಾಗ ಪುನಃ ಅದೇ ಆಟೊದಲ್ಲಿಯೇ ಬರುವುದಾಗಿ ತಿಳಿಸಿದ್ದಾರೆ. ಅದರಂತೆ ಅಶೋಕ ರೆಡ್ಡಿ ಮಧ್ಯಾಹ್ನ 1ಕ್ಕೆ ಹಜರತ್‌ಬೀ ಅವರನ್ನು ಆಟೊದಲ್ಲಿ ಹತ್ತಿಸಿಕೊಂಡು ಕರೆದೊಯ್ಯುವಾಗ ಐವರು ಮುಸ್ಲಿಂ ಯುವಕರು ಅಡ್ಡಗಟ್ಟಿ, ಮನಬಂದಂತೆ ಥಳಿಸಿ, ನಿಂದಿಸಿ, ಜೀವ ಬೆದರಿಕೆ ಹಾಕಿ ಹೋಗಿದ್ದಾರೆ ಎಂದು ಬಸವಕಲ್ಯಾಣ ನಗರ ಠಾಣೆಗೆ ಕೊಟ್ಟಿರುವ ದೂರಿನಲ್ಲಿ ತಿಳಿಸಲಾಗಿದೆ.

‘ಏಪ್ರಿಲ್ 17ರಂದು ನಡೆದ ಈ ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಭಾನುವಾರ (ಮೇ 12) ಹರದಾಡಿದೆ. ಅನೈತಿಕ ಪೊಲೀಸ್‌ಗಿರಿ ಮಾಡಿದ ಮೂವರನ್ನು ಬಂಧಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚನ್ನಬಸವಣ್ಣ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.



ಗುಡುಗು ಸಹಿತ ಮಳೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಇನ್ನೂ ನಾಲ್ಕು ದಿನಗಳು ಗುಡುಗು–ಮಿಂಚು ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮೇ 13ರಂದು ಹಾವೇರಿ, ಧಾರವಾಡ, ಬೆಳಗಾವಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ರಾಮನಗರ, ಮಂಡ್ಯ, ದಾವಣಗೆರೆ ಜಿಲ್ಲೆಗಳಲ್ಲಿ ಧಾರಾಕಾರ ಮಳೆಯಾಗುವ ಸಾಧ್ಯತೆಯಿದ್ದು, ಈ ಎಲ್ಲ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಸೂಚನೆ ನೀಡಲಾಗಿದೆ. ಗಾಳಿಯು 40 ರಿಂದ 50 ಕಿ.ಮೀ ವೇಗದಲ್ಲಿ ಬೀಸುವ ಸಾಧ್ಯತೆಯಿದೆ.

ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ 30 ರಿಂದ 40 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದ್ದು ಮಳೆಯೂ ಆಗಲಿದೆ ಎಂದು ಸೂಚನೆ ನೀಡಿದೆ. ಅದೇ ದಿನ ಸಂಜೆ ಅಥವಾ ರಾತ್ರಿ ವೇಳೆ ಬೀದರ್, ಕಲಬುರಗಿ, ರಾಯಚೂರು, ವಿಜಯಪುರ, ಯಾದಗಿರಿ, ಬಳ್ಳಾರಿ, ಚಾಮರಾಜನಗರ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಲಿದೆ ಎಂದು ತಿಳಿಸಿದೆ.

ಮೇ 14ರಂದು ದಕ್ಷಿಣ ಕನ್ನಡ, ಉಡುಪಿ, ಬಾಗಲಕೋಟೆ, ಧಾರವಾಡ, ಗದಗ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ಕೊಪ್ಪಳ, ಹಾವೇರಿ, ಹಾಸನ, ಬೆಳಗಾವಿ, ಬೀದರ್, ಕಲಬುರಗಿ, ರಾಯಚೂರು, ವಿಜಯಪುರ, ಯಾದಗಿರಿ, ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರದಲ್ಲಿ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ. ಈ ಜಿಲ್ಲೆಗಳಲ್ಲಿ ಮಳೆಯೊಂದಿಗೆ ಬಿರುಗಾಳಿ ಬೀಸುವ ಸಾಧ್ಯತೆಯಿದೆ ಎಂದು ತಿಳಿಸಿದೆ. ರಾಜ್ಯದಲ್ಲೇ ಗರಿಷ್ಠ ಉಷ್ಣಾಂಶ 40.4 ಡಿಗ್ರಿ ಸೆಲ್ಸಿಯಸ್ ಕಲಬುರಗಿ ಜಿಲ್ಲೆಯಲ್ಲಿ ಭಾನುವಾರ ದಾಖಲಾಗಿತ್ತು.

ಭಾನುವಾರ ಬೆಳಿಗ್ಗೆ 8.30ಕ್ಕೆ ಕೊನೆಯಾದಂತೆ ಕಳೆದ 24 ಗಂಟೆಗಳ ಅವಧಿಯಲ್ಲಿ ಹುಬ್ಬಳ್ಳಿ 8 ಸೆಂ.ಮೀ, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದಲ್ಲಿ 6, ಉತ್ತರ ಕನ್ನಡದ ಹಳಿಯಾಳ ಹಾಗೂ ಬೆಳಗಾವಿಯ ಸಂಕೇಶ್ವರ 5, ಚಿಕ್ಕಮಗಳೂರಿನಲ್ಲಿ 5, ಬೆಳಗಾವಿಯಲ್ಲಿ 4, ಕೊಪ್ಪಳದ ಕುಕನೂರು ಹಾಗೂ ಮುನಿರಾಬಾದ್‌ನಲ್ಲಿ 3 ಸೆಂ.ಮೀ ಮಳೆಯಾಗಿದೆ.

ಬೆಂಗಳೂರು ನಗರದ ದಕ್ಷಿಣ ವಲಯ ವ್ಯಾಪ್ತಿಯ ಬಿಟಿಎಂ ಲೇಔಟ್, ಬೊಮ್ಮನಹಳ್ಳಿ ವಲಯದ ಬಿಳೇಕಹಳ್ಳಿ, ಬೊಮ್ಮನಹಳ್ಳಿ ಸೇರಿದಂತೆ ಹಲವು ಕಡೆ ಭಾನುವಾರ ಸಂಜೆ ಉತ್ತಮ ಮಳೆಯಾಗಿದೆ. ಬಿಳೇಕಹಳ್ಳಿಯಲ್ಲಿ 4.25 ಸೆಂ.ಮೀ, ದೊರೆಸಾನಿಪಾಳ್ಯ, ಬಿ.ಟಿ.ಎಂ ಲೇಔಟ್‌ನಲ್ಲಿ 3.0 ಸೆಂ.ಮೀಗೂ ಹೆಚ್ಚು ಮಳೆಯಾದ ವರದಿಯಾಗಿದೆ.

ಜೋರು ಮಳೆಯಿಂದ ಕೋಲಾರ ತಾಲ್ಲೂಕಿನ ಜಂಗಂಬಸಾಪುರ ಗ್ರಾಮದಲ್ಲಿ ನೆಲಕ್ಕೊರಗಿದ ಬಾಳೆ ಬೆಳೆ

ಕೋಲಾರ: ಅರ್ಧ ತಾಸು ಮಳೆ ಅಬ್ಬರ

ಕೋಲಾರ: ಜಿಲ್ಲೆಯ ವಿವಿಧೆಡೆ ಭಾನುವಾರ ಮಧ್ಯಾಹ್ನ ಅರ್ಧ ತಾಸು ಬಿರುಗಾಳಿ, ಗುಡುಗು ಸಮೇತ ಧಾರಾಕಾರ ಮಳೆ ಸುರಿದಿದೆ.

ಮಧ್ಯಾಹ್ನದಿಂದಲೇ ಮೋಡ ಕವಿದ ವಾತಾವರಣವಿತ್ತು. 3 ಗಂಟೆ ಸುಮಾರಿಗೆ ಗುಡುಗು ಸಮೇತ ಮಳೆ ಅಬ್ಬರ ಶುರುವಾಯಿತು. ವಾರದಿಂದ ಜಿಲ್ಲೆಯಲ್ಲಿ ಮಳೆ ಆಗುತ್ತಿದ್ದು ತಾಪಮಾನ ಕೊಂಚ ತಗ್ಗಿದೆ.

ಮುಂದಿನ ಎರಡು ದಿನ ಜಿಲ್ಲೆಯ ವಿವಿಧೆಡೆ ಮಳೆಯಾಗುವ ಮುನ್ಸೂಚನೆ ಇದೆ.ಶ್ರೀನಿವಾಸಪುರ ತಾಲ್ಲೂಕಿನ ಹೊದಲಿಯಲ್ಲಿ 3.6 ಸೆ.ಮೀ. (36 ಮಿ.ಮೀ.) ಮಳೆಯಾಗಿದ್ದು, ಜಿಲ್ಲೆಯಲ್ಲಿ ಅತ್ಯಧಿಕ ಮಳೆ ಬಿದ್ದ ಪ್ರದೇಶವಾಗಿದೆ ಎಂದು ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮೂಲಗಳು ತಿಳಿಸಿವೆ.

ಕೋಲಾರ ನಗರದಲ್ಲಿ ಕೆಲವೆಡೆ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ. ಹಲವೆಡೆ ವಿದ್ಯುತ್ ಸ್ಥಗಿತಗೊಂಡಿತ್ತು.

ಆಂಧ್ರದಲ್ಲಿ ರಸ್ತೆ ಅಪಘಾತ: ಕಿರುತೆರೆ ನಟಿ ಪವಿತ್ರಾ ಜಯರಾಂ ಸಾವು

ಪ್ರಜಾವಾಣಿ ವಾರ್ತೆ

ಮಂಡ್ಯ: ಕನ್ನಡ ಹಾಗೂ ತೆಲುಗು ಕಿರುತೆರೆಯಲ್ಲಿ ಪ್ರಸಿದ್ಧಿ ಪಡೆದಿದ್ದ, ತಾಲ್ಲೂಕಿನ ಹನಕೆರೆ ಗ್ರಾಮದ ನಟಿ ಪವಿತ್ರಾ ಜಯರಾಂ (35) ಅವರು ಆಂಧ್ರಪ್ರದೇಶದ ಮೆಹಬೂಬ ನಗರದ ಬಳಿ ಭಾನುವಾರ ನಸುಕಿನಲ್ಲಿ ನಡೆದ ಅಪಘಾತದಲ್ಲಿ ಮೃತಪಟ್ಟರು.

ಪವಿತ್ರಾ ಅವರು ಪ್ರಯಾಣಿಸುತ್ತಿದ್ದ ಕಾರು ಹಾಗೂ ಬಸ್ ನಡುವೆ ಡಿಕ್ಕಿಯಾಗಿ, ಅವರು ಸ್ಥಳದಲ್ಲೇ ಮೃತಪಟ್ಟರು. ಚಾಲಕ ಸೇರಿ ಮೂವರು ತೀವ್ರವಾಗಿ ಗಾಯಗೊಂಡರು. ಗ್ರಾಮದಲ್ಲಿರುವ ಸಂಬಂಧಿಕರು ಘಟನೆಯನ್ನು ದೃಢಪಡಿಸಿದ್ದಾರೆ.

ಹೈದರಾಬಾದ್‌ನಲ್ಲಿ ನೆಲಸಿದ್ದ ಪವಿತ್ರಾ ಅವರು ತಮ್ಮ ತಾಯಿ ಹಾಗೂ ಇಬ್ಬರು ಮಕ್ಕಳನ್ನು ಮದ್ದೂರಿನ ಬಾಡಿಗೆ ಮನೆಯಲ್ಲಿ ಇರಿಸಿದ್ದರು. ರಜೆಯ ಕಾರಣ ಮಕ್ಕಳನ್ನು ಹೈದರಾಬಾದ್‌ಗೆ ಕರೆದೊಯ್ದಿದ್ದರು, ನಂತರ ಮದ್ದೂರಿಗೆ ವಾಪಸ್ ಬಿಟ್ಟು ಶನಿವಾರ ರಾತ್ರಿ ಹೈದರಾಬಾದ್‌ಗೆ ಹೊರಟಿದ್ದರು, ಭಾನುವಾರ ನಸುಕಿನಲ್ಲಿ ಘಟನೆ ನಡೆದಿದೆ ಎಂದು ಅವರ ಸಂಬಂಧಿಕರು ತಿಳಿಸಿದರು.

ಪವಿತ್ರಾ ಅವರು ಕನ್ನಡದಲ್ಲಿ ‘ಜೋಕಾಲಿ’, ‘ರೋಬೊ ಫ್ಯಾಮಿಲಿ’, ‘ರಾಧಾ ರಮಣ’, ‘ನೀಲಿ’ ಧಾರಾವಾಹಿಗಳಲ್ಲಿ ನಟಿಸಿದ್ದರು. ತೆಲುಗಿನ ‘ತ್ರಿನಯನಿ’ ಧಾರಾವಾಹಿಯಲ್ಲಿ ತಿಲೋತ್ತಮೆ ಪಾತ್ರದ ಮೂಲಕ ಪ್ರಸಿದ್ಧಿ ಪಡೆದಿದ್ದರು.

‘ಸಾಮಾನ್ಯ ಕುಟುಂಬದಿಂದ ಬಂದಿದ್ದ ಪವಿತ್ರಾ ಕಷ್ಟಪಟ್ಟು ಬಣ್ಣದ ಲೋಕದಲ್ಲಿ ಗುರುತಿಸಿಕೊಂಡಿದ್ದರು. ಆಂಧ್ರದಲ್ಲಿ ಯಶಸ್ವಿ ನಟಿಯಾಗಿ, ಮನೆಮಾತಾಗಿದ್ದರು. ನನ್ನ ಪುಸ್ತಕ ಬಿಡುಗಡೆ ಸಮಾರಂಭಕ್ಕೆ ಆಹ್ವಾನಿಸಲು ನಿರ್ಧರಿಸಿದ್ದೆ. ಆದರೆ ಈಗ ಅಗಲಿಕೆಯ ನೋವಷ್ಟೇ ಉಳಿದಿದೆ’ ಎಂದು ಅವರ ಗೆಳತಿ, ಲೇಖಕಿ ಭವಾನಿ ಲೋಕೇಶ್ ಹೇಳಿದರು.

ರಕ್ಷಿತಾರಣ್ಯದಲ್ಲಿ ಕಾಡುಬೆಕ್ಕು ಗೋಚರ

ನಾಗ್ಪುರ(ಪಿಟಿಐ): ಮಹಾರಾಷ್ಟ್ರದ ಪೆಂಚ್ ಹುಲಿ ರಕ್ಷಿತಾರಣ್ಯದಲ್ಲಿ ಮೊದಲ ಬಾರಿಗೆ ಕಾಡು ಬೆಕ್ಕು ಕಾಣಿಸಿಕೊಂಡಿದೆ ಎಂದು ಅರಣ್ಯ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

‘ಪ್ರಿಯೊನೇಲರಸ್ ಬೆಂಗಾಲೆನ್ಸಿಸ್’ ಎಂಬ ವೈಜ್ಞಾನಿಕ ಹೆಸರಿನಿಂದ ಕರೆಯಲಾಗುವ ಈ ಬೆಕ್ಕು ‘ಫೆಲಿಡೆ’ ಕುಟುಂಬಕ್ಕೆ ಸೇರಿದ್ದು. ಇದರ ಮೈಬಣ್ಣ ಚಿರತೆಯ ಬಣ್ಣದಂತೆ ಇರುತ್ತದೆ. ‘ಕ್ಯಾಮೆರಾ ಟ್ರ್ಯಾಪಿಂಗ್ ಮೂಲಕ ಇವುಗಳ ಚಿತ್ರಗಳನ್ನು ಸೆರೆ ಹಿಡಿಯಲಾಗಿದೆ. ನಾಗ್ಪುರ ಜಿಲ್ಲೆಯ ಪೆಂಚ್ ಬಳಿಯ ನರಹರ ಗ್ರಾಮದ ಬಳಿ ಕಾಡುಬೆಕ್ಕು ಪತ್ತೆಯಾಗಿದೆ’ ಎಂದು ರಕ್ಷಿತಾರಣ್ಯದ ಉಪನಿರ್ದೇಶಕ ಪ್ರಭುನಾಥ ಶುಕ್ಲಾ ಹೇಳಿದ್ದಾರೆ.

‘ಈ ಪ್ರದೇಶದಲ್ಲಿ ಸಾಮಾನ್ಯವಾಗಿ ಕಂಡುಬರುವ ತೊರೆಯೊಂದರ ಬಳಿ ಕಾಡು ಬೆಕ್ಕು ಪತ್ತೆಯಾಗಿದೆ. ದೇಶದ ಕೇಂದ್ರ ಭಾಗದಲ್ಲಿ ಇದೇ ಮೊದಲ ಬಾರಿಗೆ ಇದು ಕಾಣಿಸಿಕೊಂಡಿದೆ’ ಎಂದು ಹೇಳಿದ್ದಾರೆ.

ಕಳ್ಳತನಕ್ಕೆ ಕಳುಹಿಸುವ ಮುನ್ನ ಮಗನಿಗೆ ಡ್ರಗ್ಸ್ ನೀಡುತ್ತಿದ್ದ ತಾಯಿ!

ಮುಂಬೈ(ಪಿಟಿಐ): ಕಳ್ಳತನ ಮಾಡುತ್ತಿದ್ದ ಎನ್ನಲಾದ ಆರೋಪಿ, ಈ ರೀತಿಯ ಅಪರಾಧಗಳನ್ನು ಎಸಗುವುದಕ್ಕೂ ಮುನ್ನ ತಾಯಿಯೇ ಆತನಿಗೆ ಡ್ರಗ್ಸ್ ನೀಡುತ್ತಿದ್ದಳು ಎಂಬ ಸಂಗತಿ ಮುಂಬೈ ಪೊಲೀಸರಿಗೆ ಅಚ್ಚರಿ ಮೂಡಿಸಿದೆ.

ಕೃಷ್ಣ ರವಿ ಮಹೇಸ್ಕರ್ (24) ಬಂಧಿತ ಆರೋಪಿ. ಆತನ ತಾಯಿ ವಿಜೇತಾ ಮಹೇಸ್ಕರ್ (50) ತಲೆ ಮರೆಸಿಕೊಂಡಿದ್ದಾರೆ. ಮನೆಗಳ ಬೀಗ ಮುರಿದು ಕಳವು ಸೇರಿದಂತೆ ಆತನ ವಿರುದ್ಧ ಮುಂಬೈನ ವಿವಿಧ ಠಾಣೆಗಳಲ್ಲಿ 22 ಪ್ರಕರಣಗಳಿವೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

‘ಮಹೇಸ್ಕರ್, ಕಳ್ಳತನ ಸೇರಿದಂತೆ ಅಪರಾಧ ಕೃತ್ಯಗಳನ್ನು ಎಸಗುವಲ್ಲಿ ಆತನ ತಾಯಿ ವಿಜೇತಾ ಮಹೇಸ್ಕರ್ ಪಾತ್ರವಿದೆ. ಮನೆಗಳ ಬೀಗ ಮುರಿದು ಕಳ್ಳತನಕ್ಕೆ ಕಳುಹಿಸುವ ಮುನ್ನ ಆತನಿಗೆ ವಿಜೇತಾ ಡ್ರಗ್ಸ್ ನೀಡುತ್ತಿದ್ದಳು. ಕಳುವು ಮಾಡಿ ತಂದ ವಸ್ತುಗಳನ್ನು ಆಕೆ ಮಾರಾಟ ಮಾಡುತ್ತಿದ್ದಳು’ ಎಂದು ಕಾಲಾಚೌಕಿ ಠಾಣೆ ಪೊಲೀಸ್ ಅಧಿಕಾರಿ ರಾಜೇಂದ್ರ ಚವಾಣ್ ತಿಳಿಸಿದ್ದಾರೆ.

ಬ್ರೇಕ್ ಬದಲು ಆ್ಯಕ್ಸಲರೇಟರ್ ಒತ್ತಿದ್ದ ಯುವಕ • ಸರಣಿ ಅಪಘಾತ

ಕಾರು ಗುದ್ದಿ ಬಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವಕನೊಬ್ಬ ಕಾರಿನ ಬ್ರೇಕ್ ಬದಲು ಆ್ಯಕ್ಸಲರೇಟರ್ ಒತ್ತಿದ್ದರಿಂದ ಸರಣಿ ಅಪಘಾತ ಸಂಭವಿಸಿದ್ದು, ಐದು ವರ್ಷದ ಬಾಲಕ ಆರವ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

‘ಜೀವನ್‌ಭಿಮಾನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿರುವ ಮುರುಗೇಶ್ ಪಾಳ್ಯದ ಕಾಳಪ್ಪ ಬಡಾವಣೆಯಲ್ಲಿ ಭಾನುವಾರ ಬೆಳಿಗ್ಗೆ ಈ ಅವಘಡ ಸಂಭವಿಸಿದೆ. ತಾಮರೈಕಣ್ಣನ್ ಅವರ ಪುತ್ರ ಆರವ್ ಮೃತಪಟ್ಟಿದ್ದು, ಇನ್ನೊಬ್ಬ ಬಾಲಕ ಧನರಾಜ್ (5) ಗಾಯಗೊಂಡಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ಅಪಘಾತಕ್ಕೆ ಕಾರಣ ಎನ್ನಲಾದ ಆರೋಪಿ ದೇವರಾಜ್ (18) ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಯನ್ನು ಬಂಧಿಸಿ ಕಾರು ಜಪ್ತಿ ಮಾಡಲಾಗಿದೆ’ ಎಂದು ತಿಳಿಸಿದರು.

ಕಾರು ತೊಳೆಯುವಾಗ ಅವಘಡ: ‘ಆರೋಪಿ ದೇವರಾಜ್ ಹಾಗೂ ಕುಟುಂಬದವರು, ದೇವಸ್ಥಾನವೊಂದಕ್ಕೆ ಹೊರಟಿದ್ದರು. ದೇವರಾಜ್ ಅವರ ತಂದೆ, ತಮ್ಮ ಸ್ನೇಹಿತರೊಬ್ಬರ ಕಾರು ತಂದಿದ್ದರು. ಕಾರು ತೊಳೆ ಯುವಂತೆ ಮಗ ದೇವರಾಜ್‌ಗೆ ಹೇಳಿದ್ದರು’ ಎಂದು ಪೊಲೀಸರು ಮಾಹಿತಿ ನೀಡಿದರು.

ಆರವ್

‘ಕಾರಿನ ಹೊರ ಭಾಗವನ್ನೆಲ್ಲ ತೊಳೆದಿದ್ದ ಆರೋಪಿ, ಒಳಗಿನ ಭಾಗ ತೊಳೆಯಲು ಕಾರಿನೊಳಗಿನ ಚಾಲಕನ ಸೀಟಿನಲ್ಲಿ ಕುಳಿತಿದ್ದ. ವೈಪರ್ ಸ್ವಚ್ಛಗೊಳಿಸಲು ಕಾರಿನ ಕೀ ಆನ್ ಮಾಡಿದ್ದ. ಇದೇ ಸಂದರ್ಭದಲ್ಲಿ ಕಾರು ಮುಂದಕ್ಕೆ ಚಲಿಸಿತ್ತು. ಅವಾಗಲೇ ಆರೋಪಿ, ಗಾಬರಿಯಾಗಿ ಬ್ರೇಕ್ ಒತ್ತುವ ಬದಲು ಆ್ಯಕ್ಸಲರೇಟರ್ ಒತ್ತಿದ್ದ’ ಎಂದು ಪೊಲೀಸರು ಹೇಳಿದರು.

‘ಅತೀ ವೇಗದಲ್ಲಿ ಚಲಿಸಿದ್ದ ಕಾರು, ರಸ್ತೆಯಲ್ಲಿ ಆಟವಾಡುತ್ತಿದ್ದ ಆರವ್ ಹಾಗೂ ಧನರಾಜ್‌ಗೆ ಗುದ್ದಿತ್ತು. ಬಳಿಕ, ರಸ್ತೆ ಪಕ್ಕದಲ್ಲಿ ನಿಲ್ಲಿಸಿದ್ದ ದ್ವಿಚಕ್ರ ವಾಹನಗಳು ಹಾಗೂ ಕಾರುಗಳಿಗೂ ಡಿಕ್ಕಿ ಹೊಡೆದಿತ್ತು’ ಎಂದರು.

ಮಗನ ರಕ್ಷಿಸಲು ಕಾರಿನಲ್ಲಿ ಕುಳಿತಿದ್ದ ತಂದೆ: ‘ದೇವರಾಜ್ ತಂದೆ ಅಪಘಾತ ಸ್ಥಳಕ್ಕೆ ಬಂದಿದ್ದರು. ಮಗನನ್ನು ಕಾರಿನಿಂದ ಇಳಿಸಿ, ಚಾಲಕನ ಆಸನದಲ್ಲಿ ತಾವೇ ಕುಳಿತಿದ್ದರು. ಮಗನನ್ನು ರಕ್ಷಿಸುವುದಕ್ಕಾಗಿ ತಾವೇ ಅಪಘಾತ ಮಾಡಿರುವುದಾಗಿ ಹೇಳಿಕೊಳ್ಳುತ್ತಿದ್ದರು. ಅಪಘಾತ ನೋಡಿದ್ದ ಜನರು ದೇವರಾಜ್‌ನೇ ಆರೋಪಿ ಎಂಬುದಾಗಿ ಹೇಳಿಕೆ ನೀಡಿದ್ದರು’ ಎಂದು ಹೇಳಿದರು.

‘ಆರವ್ ಪೋಷಕರಿಂದ ಹೇಳಿಕೆ ಪಡೆಯಲಾಗಿದೆ. ನಿರ್ಲಕ್ಷ್ಯದ ಆರೋಪದಡಿ ಪ್ರಕರಣ ದಾಖಲಿಸಿಕೊಂಡು ದೇವರಾಜ್‌ನನ್ನು ಬಂಧಿಸಲಾಗಿದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿದರು.

ವಿಶೇಷ ಕಾರ್ಯಾಚರಣೆ: 3,667 ಪ್ರಕರಣ ದಾಖಲು

ಅಪರಾಧ ಸುದ್ದಿ

ಬೆಂಗಳೂರು: ಕಾನೂನು ಬಾಹಿರ ಚಟುವಟಿಕೆ ತಡೆಯಲು ಹಾಗೂ ನಿಯಮ ಉಲ್ಲಂಘಿಸುವವರ ವಿರುದ್ಧ ಕ್ರಮ ಕೈಗೊಳ್ಳಲು ನಗರದ ಪೊಲೀಸರು ಶನಿವಾರ ವಿಶೇಷ ಕಾರ್ಯಾಚರಣೆ ನಡೆಸಿದ್ದು, ತಪ್ಪಿತಸ್ಥರ ವಿರುದ್ಧ 3,667 ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ಮದ್ಯದಂಗಡಿಗಳು, ಬಾರ್ ಆ್ಯಂಡ್ ರೆಸ್ಟೊರೆಂಟ್, ಚಹಾ ಅಂಗಡಿ, ಲಾಡ್ಜ್, ಪೇಯಿಂಗ್ ಗೆಸ್ಟ್ (ಪಿ.ಜಿ) ಕಟ್ಟಡಗಳು ಹಾಗೂ ಇತರೆಡೆ ಶೋಧ ನಡೆಸಲಾಯಿತು. ಕಾನೂನು ಉಲ್ಲಂಘಿಸಿದ್ದವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ನೋಟಿಸ್ ನೀಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘734 ರೌಡಿಗಳು ಹಾಗೂ ಅಪರಾಧ ಹಿನ್ನೆಲೆಯುಳ್ಳ 434 ಮಂದಿಯನ್ನೂ ವಿಚಾರಣೆಗೆ ಒಳಪಡಿಸಲಾಯಿತು. ಅಪರಾಧಗಳಲ್ಲಿ ತೊಡಗದಂತೆ ಎಚ್ಚರಿಕೆ ನೀಡಲಾಯಿತು. ಮದ್ಯ ಕುಡಿದು ವಾಹನ ಚಲಾಯಿಸುತ್ತಿದ್ದ 196 ಚಾಲಕರ ವಿರುದ್ಧವೂ ಪ್ರಕರಣ ದಾಖಲಿಸಿಕೊಂಡು, ವಾಹನ ಜಪ್ತಿ ಮಾಡಲಾಗಿದೆ’ ಎಂದರು.

ಸಹೋದ್ಯೋಗಿಗೆ ಲೈಂಗಿಕ ಕಿರುಕುಳ ವ್ಯವಸ್ಥಾಪಕನ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರಿಯರ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಯುವತಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ಅದೇ ಕಂಪನಿಯ ವ್ಯವಸ್ಥಾಪಕನ ವಿರುದ್ಧ ಅಶೋಕನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಕೋರಮಂಗಲದ ಪೇಯಿಂಗ್ ಗೆಸ್ಟ್ (ಪಿ.ಜಿ) ಕಟ್ಟಡದಲ್ಲಿ ವಾಸವಿರುವ 27 ವರ್ಷ ವಯಸ್ಸಿನ ಯುವತಿ ದೂರು ನೀಡಿದ್ದಾರೆ. ಅದರನ್ವಯ ಕಂಪನಿ ವ್ಯವಸ್ಥಾಪಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದೂರುದಾರ ಯುವತಿ, ಮೂರು ತಿಂಗಳ ಹಿಂದೆಯಷ್ಟೇ ಕೊರಿಯರ್ ಕಂಪನಿ ಕೆಲಸಕ್ಕೆ ಸೇರಿದ್ದರು. ಆರೋಪಿಯ ತಂಡದಲ್ಲಿ ಕೆಲಸ ಮಾಡುತ್ತಿದ್ದರು. ರಾತ್ರಿ 10 ಗಂಟೆಯವರೆಗೂ ಯುವತಿಯನ್ನು ಕಚೇರಿಯಲ್ಲಿ ಕೂರಿಸಿಕೊಳ್ಳುತ್ತಿದ್ದ ಆರೋಪಿ, ಹೆಚ್ಚುವರಿ ಕೆಲಸ ಮಾಡಿಸುತ್ತಿದ್ದ. ನಂತರ, ತನ್ನ ಕಾರಿನಲ್ಲಿಯೇ ಯುವತಿಯನ್ನು ಪೇಯಿಂಗ್ ಗೆಸ್ಟ್ ಕಟ್ಟಡಕ್ಕೆ ಕರೆದೊಯ್ದು ಬಿಟ್ಟು ಬರುತ್ತಿದ್ದ’ ಎಂದು ತಿಳಿಸಿದರು.

‘ಮೇ 4ರಂದು ಯುವತಿಯನ್ನು ಕಾರಿನಲ್ಲಿ ಕರೆದೊಯ್ಯುತ್ತಿದ್ದ ವೇಳೆ ಆರೋಪಿ ಅಸಭ್ಯವಾಗಿ ವರ್ತಿಸಿದ್ದ. ಅಂಗಾಂಗಗಳನ್ನು ಮುಟ್ಟಿ ಲೈಂಗಿಕ ಕಿರುಕುಳ ನೀಡಿದ್ದ. ತಾನು ಹೇಳಿದಂತೆ ಕೇಳದಿದ್ದರೆ, ಕೆಲಸದಿಂದ ತೆಗೆದು ಹಾಕುವುದಾಗಿ ಬೆದರಿಸಿದ್ದ. ಇದರಿಂದ ನೊಂದ ಯುವತಿ, ಠಾಣೆಗೆ ದೂರು ನೀಡಿದ್ದಾರೆ’ ಎಂದು ಹೇಳಿದರು.

‘ಯುವತಿಗೆ ಸಂಬಂಧಪಟ್ಟ ಲೈಂಗಿಕ ಕಿರುಕುಳ ಪ್ರಕರಣವಾಗಿರುವುದರಿಂದ, ಅವರ ಹೆಸರು ಹಾಗೂ ವಿಳಾಸ ಬಹಿರಂಗಪಡಿಸಲಾಗದು. ಜೊತೆಗೆ, ಆರೋಪಿಯ ಹೆಸರನ್ನು ಸಹ ಗೌಪ್ಯವಾಗಿರಿಸಲಾಗಿದೆ’ ಎಂದರು.

ಯುವತಿಗೆ ಕಿರುಕುಳ ನೀಡಿದ್ದಕ್ಕೆ ಥಳಿತ

ಬೆಂಗಳೂರು: ಮೆಜೆಸ್ಟಿಕ್‌ನಲ್ಲಿ ಬಿಎಂಟಿಸಿ ಬಸ್ ನಿಲ್ದಾಣದಿಂದ ಮೆಟ್ರೊ ನಿಲ್ದಾಣದತ್ತ ಹೊರಟಿದ್ದ ಯುವತಿಯನ್ನು ಹಿಂಬಾಲಿಸಿ ಲೈಂಗಿಕ ಕಿರುಕುಳ ನೀಡಿದ್ದ ಆರೋಪಿಯನ್ನು ಜನರೇ ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ.

‘ಮೇ 5ರಂದು ಸಂಜೆ ನಡೆದಿರುವ ಕೃತ್ಯದ ಬಗ್ಗೆ 23 ವರ್ಷ ವಯಸ್ಸಿನ ಯುವತಿ ದೂರು ನೀಡಿದ್ದಾರೆ. ಕೃತ್ಯ ಎಸಗಿದ್ದ ಆರೋಪಿ ಹನುಮಂತ ಎಂಬುದು ಗೊತ್ತಾಗಿದ್ದು, ಈತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

‘ದೂರುದಾರ ಯುವತಿ, ಕಾಲೇಜೊಂದರಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಬಿಎಂಟಿಸಿ ನಿಲ್ದಾಣದಿಂದ ಮೆಟ್ರೊ ನಿಲ್ದಾಣದತ್ತ ನಡೆದುಕೊಂಡು ಹೊರಟಿದ್ದರು. ಅವರನ್ನು ಹಿಂಬಾಲಿಸಿದ್ದ ಆರೋಪಿ, ಅಂಗಾಂಗಗಳನ್ನು ಮುಟ್ಟಿ ಕಿರುಕುಳ ನೀಡಿದ್ದ. ಗಾಬರಿಗೊಂಡು ಯುವತಿ ಕೂಗಾಡಿದ್ದರು. ಸ್ಥಳದಲ್ಲಿ ಸೇರಿದ್ದ ಜನರು, ಆರೋಪಿಯನ್ನು ಹಿಡಿದು ಥಳಿಸಿದ್ದರು’ ಎಂದು ತಿಳಿಸಿದರು.

‘ಕೃತ್ಯದ ಬಗ್ಗೆ ನಿಯಂತ್ರಣ ಕೊಠಡಿಗೆ ಕರೆ ಬಂದಿತ್ತು. ಸ್ಥಳಕ್ಕೆ ಹೋಗಿದ್ದ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದರು’ ಎಂದು ಹೇಳಿದರು.

ಅಪಘಾತ

ನಗರದ ಟಿ.ಸಿ. ಪಾಳ್ಯ– ಹೊಸಕೋಟೆ ಮುಖ್ಯರಸ್ತೆಯಲ್ಲಿರುವ ಭಟ್ಟರಹಳ್ಳಿ ಜಂಕ್ಷನ್ ಬಳಿ ಬ್ಯಾರಿಕೇಡ್‌ಗೆ ಕಾರು ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದ್ದು, ಅದೃಷ್ಟವಶಾತ್ ಚಾಲಕ ಹಾಗೂ ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ. ಅಪಘಾತದಿಂದ ಕೆಲ ಹೊತ್ತು ಸಂಚಾರ ದಟ್ಟಣೆ ಉಂಟಾಗಿತ್ತು

ಭ್ರೂಣ ಹತ್ಯೆ ಮಹಿಳೆ ಬಂಧನ

ಶ್ರುತಿ

ಪಾಂಡವಪುರ (ಮಂಡ್ಯ ಜಿಲ್ಲೆ): ಪಟ್ಟಣದ ಆರೋಗ್ಯ ಇಲಾಖೆಯ ವಸತಿ ಗೃಹದಲ್ಲಿ ಈಚೆಗೆ ನಡೆದಿದ್ದ ಹೆಣ್ಣು ಭ್ರೂಣ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಮಹಿಳೆಯೊಬ್ಬರನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಕೆ.ಆರ್.ಪೇಟೆಯ ಶ್ರುತಿ ಬಂಧಿತ ಆರೋಪಿ. ‘ಅವರು ಸ್ಕ್ಯಾನಿಂಗ್ ಯಂತ್ರವನ್ನಿಟ್ಟುಕೊಂಡು ಭ್ರೂಣಲಿಂಗ ಪತ್ತೆ ಮಾಡುತ್ತಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಕರಣ ಸಂಬಂಧ ಇಲ್ಲಿಯವರೆಗೆ 9 ಆರೋಪಿಗಳನ್ನು ಬಂಧಿಸಲಾಗಿದೆ.

ಪ್ರತಿಷ್ಠಿತ ಆಸ್ಪತ್ರೆಗಳಿಗೆ ಬಾಂಬ್ ಬೆದರಿಕೆ

ಬೆಂಗಳೂರು: ದೆಹಲಿಯ ಕೆಲವು ಆಸ್ಪತ್ರೆಗಳಿಗೆ ಬಾಂಬ್ ಬೆದರಿಕೆ ಇ-ಮೇಲ್ ಸಂದೇಶ ಬಂದ ಬೆನ್ನಲ್ಲೇ ನಗರದ ಪ್ರತಿಷ್ಠಿತ ಆಸ್ಪತ್ರೆಗಳಿಗೂ ಕಿಡಿಗೇಡಿಗಳು ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಹಾಕಿದ್ದಾರೆ.

ನಗರ ಪೊಲೀಸ್ ಇಲಾಖೆಯ ವಿಶೇಷ ಘಟಕದ(ಸ್ಪೆಷಲ್ ಬ್ರ್ಯಾಂಚ್) ಇ-ಮೇಲ್ ವಿಳಾಸಕ್ಕೆ ಬೆದರಿಕೆ ಕರೆ ಬಂದಿದ್ದು, ಪೊಲೀಸರು ಆಸ್ಪತ್ರೆಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಆದರೆ, ಯಾವುದೇ ರೀತಿಯ ಸ್ಫೋಟಕ ವಸ್ತುಗಳು ಪತ್ತೆ ಆಗಿಲ್ಲ. ಇದು ಹುಸಿ ಬಾಂಬ್ ಬೆದರಿಕೆ ಎಂಬುದು ಗೊತ್ತಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಭಾನುವಾರ ರಾತ್ರಿ 8 ಗಂಟೆ ಸುಮಾರಿಗೆ ವಿಶೇಷ ಘಟಕದ ಇ-ಮೇಲ್ ಪರಿಶೀಲನೆ ವೇಳೆ ನಗರದ ಸೇಂಟ್ ಫಿಲೋಮಿನಾ, ಸೇಂಟ್ ಮಾರ್ಥಸ್, ಜೆಎಂಜೆ ಸೇರಿ ನಗರದ ಆರೇಳು ಆಸ್ಪತ್ರೆಗಳ ಹೆಸರುಗಳನ್ನು ಉಲ್ಲೇಖಿಸಿರುವ ಕಿಡಿಗೇಡಿಗಳು, ಕೆಲವೇ ಕ್ಷಣಗಳಲ್ಲಿ ಈ ಆಸ್ಪತ್ರೆಗಳಲ್ಲಿ ಇಡಲಾಗಿರುವ ಬಾಂಬ್ ಸ್ಫೋಟಗೊಳ್ಳಲಿದೆ ಎಂದು ಇ–ಮೇಲ್‌ನಲ್ಲಿ ಬರೆದಿದ್ದರು.

ಶ್ವಾನದಳ, ಬಾಂಬ್ ನಿಷ್ಕ್ರಿಯ ದಳವನ್ನು ಸ್ಥಳಕ್ಕೆ ಕರೆದೊಯ್ದು ಎಲ್ಲೆಡೆ ತಪಾಸಣೆ ನಡೆಸಲಾಗಿದೆ. ಈ ಸಂಬಂಧ ಸದ್ಯಕ್ಕೆ ಯಾವುದೇ ಪ್ರಕರಣ ದಾಖಲಾಗಿಲ್ಲ ಎಂದು ಪೊಲೀಸರು ಮಾಹಿತಿ ನೀಡಿದರು.

8 ಆಸ್ಪತ್ರೆಗಳಿಗೆ ಬೆದರಿಕೆ ಕರೆ(ನವದೆಹಲಿ ವರದಿ): ರಾಷ್ಟ್ರ ರಾಜಧಾನಿ ದೆಹಲಿಯ 8 ಆಸ್ಪತ್ರೆಗಳು ಹಾಗೂ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ (ಐಜಿಐ) ಭಾನುವಾರ ಬಾಂಬ್ ಬೆದರಿಕೆ ಇ–ಮೇಲ್ ಸಂದೇಶ ಬಂದಿದ್ದವು.

ಮಧ್ಯಾಹ್ನ 3 ಗಂಟೆ ಹೊತ್ತಿಗೆ ಬೈರಾರಿ ಆಸ್ಪತ್ರೆಗೆ ಬಾಂಬ್ ಬೆದರಿಕೆ ಸಂದೇಶದ ಮಾಹಿತಿ ಬಂತು. ನಂತರ ಇತರ ಆಸ್ಪತ್ರೆಗಳಿಂದಲೂ ಈ ಕುರಿತು ಮಾಹಿತಿ ಲಭ್ಯವಾದ ಕೂಡಲೇ, ಪೊಲೀಸರ ತಂಡಗಳನ್ನು ಆಯಾ ಸ್ಥಳಗಳಿಗೆ ಕಳುಹಿಸಿಕೊಡಲಾಯಿತು. ಪರಿಶೀಲನೆ ನಂತರ ಯಾವುದೇ ಶಂಕಾಸ್ಪದ ವಸ್ತು ಕಂಡುಬರಲಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ಗಂಡನಿಂದ ಜೀವ ಬೆದರಿಕೆ: ಪತ್ನಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನನ್ನ ಗಂಡ ನಿತ್ಯವೂ ಜಗಳ ಮಾಡಿ ಹೊಡೆಯುತ್ತಿದ್ದಾನೆ. ಅದನ್ನು ಪ್ರಶ್ನಿಸಿದ ಮಗನ ಮೇಲೂ ಹಲ್ಲೆ ಮಾಡುತ್ತಿದ್ದಾನೆ. ಗಂಡನಿಂದ ನನಗೆ ಜೀವ ಬೆದರಿಕೆಯಿದೆ’ ಎಂದು ಆರೋಪಿಸಿ ಮಹಿಳೆಯೊಬ್ಬರು ಅಶೋಕನಗರ ಠಾಣೆಗೆ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ.

‘ಶಾಂತಿನಗರದ ಲ್ಯಾಂಗ್‌ಫೋರ್ಡ್ ರಸ್ತೆಯ 54 ವರ್ಷ ವಯಸ್ಸಿನ ಮಹಿಳೆ ಇತ್ತೀಚೆಗೆ ದೂರು ನೀಡಿದ್ದಾರೆ. ಹಲ್ಲೆ ಹಾಗೂ ಜೀವ ಬೆದರಿಕೆ ಆರೋಪದಡಿ ಪತಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದೂರುದಾರ ಮಹಿಳೆ ಹಾಗೂ ಆರೋಪಿ, 26 ವರ್ಷಗಳ ಹಿಂದೆ ಮದುವೆಯಾಗಿದ್ದಾರೆ. ದಂಪತಿಗೆ ಇಬ್ಬರು ಹೆಣ್ಣು ಮಕ್ಕಳು ಹಾಗೂ ಮಗ ಇದ್ದಾರೆ. ಹೆಣ್ಣು ಮಕ್ಕಳಿಗೆ ಮದುವೆಯಾಗಿದೆ. ದಂಪತಿ ಸದ್ಯ ಮಗನ ಜೊತೆ ನೆಲೆಸಿದ್ದಾರೆ’ ಎಂದು ತಿಳಿಸಿದರು.

‘ಹಣಕ್ಕಾಗಿ ನಿತ್ಯವೂ ಪೀಡಿಸುತ್ತಿದ್ದ ಆರೋಪಿ, ಮಹಿಳೆ ಮೇಲೆ ಹಲ್ಲೆ ಮಾಡುತ್ತಿದ್ದ. ಕೊಲೆ ಮಾಡುವುದಾಗಿಯೂ ಬೆದರಿಕೆಯೊಡ್ಡುತ್ತಿದ್ದ. ಮೇ 8ರಂದು ಜಗಳ ಮಾಡಿದ್ದ ಆರೋಪಿ, ಪ್ರಶ್ನಿಸಲು ಬಂದಿದ್ದ ಮಗನ ಕೈಗೆ ಚಾಕುವಿನಿಂದ ಇರಿದಿದ್ದ. ಮಹಿಳೆ ಹಾಗೂ ಮಗ ಕೂಗಾಡುತ್ತಿದ್ದಂತೆ, ಆರೋಪಿ ಸ್ಥಳದಿಂದ ಓಡಿಹೋಗಿದ್ದಾನೆ. ಗಾಯಗೊಂಡಿರುವ ಮಗ ಚಿಕಿತ್ಸೆ ಪಡೆದು, ಚೇತರಿಸಿಕೊಳ್ಳುತ್ತಿದ್ದಾರೆ’ ಎಂದು ಪೊಲೀಸರು ಹೇಳಿದರು.

ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಆನೇಕಲ್: ಆರ್.ವಿ. ಕಾಲೇಜಿನಲ್ಲಿ ಓದುತ್ತಿದ್ದ ಬಿಹಾರ ಮೂಲದ ಎಂಜಿನಿಯರಿಂಗ್ ವಿದ್ಯಾರ್ಥಿಯೊಬ್ಬ ಶುಕ್ರವಾರ ಜಿಗಣಿ ಕೆರೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಅಮೃತೇಶ್ ಪಾಂಡೆ

ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದ ಅಮೃತೇಶ್ ಪಾಂಡೆ (21) ಈ ವಿಷಯ ಪೋಷಕರಿಗೆ ತಿಳಿಯುತ್ತದೆ ಎಂದು ಹೆದರಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಆರ್.ವಿ ಕಾಲೇಜಿನಲ್ಲಿ ಮೂರನೇ ವರ್ಷದ ಎಂಜಿನಿಯರಿಂಗ್ ಪದವಿ ಓದುತ್ತಿದ್ದ ಆತ ಎರಡು ವಿಷಯದಲ್ಲಿ ಅನುತ್ತೀರ್ಣನಾಗಿದ್ದ. ಕಾಲೇಜಿಗೂ ಸರಿಯಾಗಿ ಹೋಗುತ್ತಿರಲಿಲ್ಲ. ಕಾಲೇಜು ಹಾಸ್ಟೆಲ್‌ನಲ್ಲಿ ವಾಸವಾಗಿದ್ದ ಅಮೃತೇಶ್ ಮತ ಹಾಕುವ ಸಲುವಾಗಿ ಈಚೆಗೆ ಪೋಷಕರು ವಾಸವಾಗಿರುವ ಜಿಗಣಿಗೆ ಬಂದಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

₹15 ಕೋಟಿ ಮೌಲ್ಯದ ಗಾಂಜಾ ಜಪ್ತಿ

ಪ್ರಜಾವಾಣಿ ವಾರ್ತೆ

ಔರಾದ್ (ಬೀದರ್ ಜಿಲ್ಲೆ): ಇಲ್ಲಿಗೆ ಸಮೀಪದ ವನಮಾರಪಳ್ಳಿ ಚೆಕ್ ಪೋಸ್ಟ್ ಬಳಿ ಪೊಲೀಸರು ಭಾನುವಾರ ₹15 ಕೋಟಿ ಮೌಲ್ಯದ 15 ಕ್ವಿಂಟಲ್ ಗಾಂಜಾವನ್ನು ಜಪ್ತಿ ಮಾಡಿದ್ದು, ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಬೆಂಗಳೂರಿನ ಮಾದಕ ವಸ್ತು ನಿಯಂತ್ರಣ ಸಂಸ್ಥೆ (ಎನ್‌ಸಿಬಿ) ಹಾಗೂ ಜಿಲ್ಲಾ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಒಡಿಶಾದಿಂದ ಮಹಾರಾಷ್ಟ್ರದ ಕಡೆ ಗಾಂಜಾ ಸಾಗಿಸುತ್ತಿದ್ದ ಲಾರಿ ಜಪ್ತಿ ಮಾಡಿದ್ದಾರೆ.

ಲಾರಿ ಹಾಗೂ ವಶಪಡಿಸಿಕೊಂಡ ಗಾಂಜಾ ಪ್ಯಾಕೆಟ್

ಜಪ್ತಿ ಮಾಡಲಾಗಿರುವ ಲಾರಿಯಲ್ಲಿ ತುಂಬಿದ ಸಿಮೆಂಟ್ ಇಟ್ಟಿಗೆ ಒಳಗೆ ಸೀಕ್ರೆಟ್ ಚೇಂಬರ್ ಮಾಡಿ ಅದರಲ್ಲಿ ಗಾಂಜಾ ಪ್ಯಾಕೆಟ್ ಇಡಲಾಗಿತ್ತು. ಬೆಂಗಳೂರಿನ ಎನ್‌ಸಿಬಿ ಯವರು ತನಿಖೆ ನಡೆಸುತ್ತಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚನ್ನಬಸವಣ್ಣ ಎಸ್.ಎಲ್. ತಿಳಿಸಿದ್ದಾರೆ.

‘ಎಲ್ಲರ ನಡುವೆ ಬದುಕಿರುವ ಬಸವಣ್ಣ’

ಬಸವಶ್ರೀ, ವಚನ ಸಾಹಿತ್ಯಶ್ರೀ ಪ್ರಶಸ್ತಿ ಪ್ರದಾನ ಮಾಡಿದ ಬಸವರಾಜ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೂಢನಂಬಿಕೆ, ತಾರತಮ್ಯಗಳನ್ನು ಸಮಾಜದಿಂದ ತೆಗೆದು ಹಾಕಲು ಬಸವಣ್ಣ ಕಲ್ಯಾಣ ಕ್ರಾಂತಿ ಮಾಡಿದರು. ಅದರ ಪರಿಣಾಮ ಅವರು ಪ್ರಾಣ ಕಳೆದುಕೊಳ್ಳಬೇಕಾಯಿತು. ಅಂದು ಪ್ರಾಣ ಕಳೆದುಕೊಂಡರೂ ಇಂದಿಗೂ ಎಲ್ಲರ ನಡುವೆ ಬದುಕಿರುವ ಜೀವಾತ್ಮ ಅವರು’ ಎಂದು ಶಾಸಕ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬಸವ ವೇದಿಕೆ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬಸವಶ್ರೀ ಪ್ರಶಸ್ತಿ ಮತ್ತು ವಚನ ಸಾಹಿತ್ಯಶ್ರೀ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ಬಸವಣ್ಣ ಹೊಂದಾಣಿಕೆ ಮಾಡಿಕೊಂಡಿದ್ದರೆ ಬಿಜ್ಜಳನ ಮಂತ್ರಿಯಾಗಿ ಮುಂದುವರಿಯಬಹುದಿತ್ತು. ಅಲ್ಪಾಯುಷಿಯಾಗದೇ ದೀರ್ಘ ಕಾಲ ಬದುಕಬಹುದಿತ್ತು. ಆದರೆ, ತತ್ವ, ಸಿದ್ಧಾಂತಕ್ಕಾಗಿ, ಜನರಿಗಾಗಿ ಅವರು ರಾಜೀ ಮಾಡಿಕೊಳ್ಳಲಿಲ್ಲ. ಅಂಥ ಬಸವಣ್ಣ ಸಮಾಜದಲ್ಲಿರುವ ಎಲ್ಲ ಅನಿಷ್ಟಗಳು ದೂರವಾಗುವವರೆಗೆ ನಮ್ಮ ನಡುವೆ ಇರಬೇಕು’ ಎಂದು ಆಶಿಸಿದರು.

‘ಜಗತ್ತಿನಲ್ಲಿ ಮೂರು ಬಗೆಯ ಹೋರಾಟಗಾರರು ಇದ್ದಾರೆ. ಪ್ರತಿಕ್ರಿಯೆ ನೀಡುವವರು ಮೊದಲನೆಯವರು. ಅವರು ಯಾವಾಗಲೂ ಭೂತಕಾಲದಲ್ಲಿ ಇರುತ್ತಾರೆ. ಆ ಕಾಲದಲ್ಲಿ ನಮ್ಮ ಭೂಮಿ, ನಮ್ಮ ಸ್ವತ್ತು ಆಗಿತ್ತು ಎಂದು ಈ ಕಾಲದಲ್ಲಿ ಹೋರಾಟ ಮಾಡುತ್ತಿರುತ್ತಾರೆ. ಇಸ್ರೇಲ್ ಇದಕ್ಕೆ ಉದಾಹರಣೆ’ ಎಂದು ವಿಶ್ಲೇಷಿಸಿದರು.

‘ವ್ಯವಸ್ಥೆಯನ್ನು ಬದಲಾಯಿಸಲು ಒಂದಾಗುವ ಕ್ರಾಂತಿಕಾರಿಗಳು ಎರಡನೆಯವರು. ರಕ್ತಸಿಕ್ತ ಅಥವಾ ಅಹಿಂಸಾತ್ಮಕ ಯಾವುದೇ ಮಾರ್ಗವಾದರೂ ಬದಲಾವಣೆ ಮಾಡುತ್ತಾರೆ. ಬದಲಾವಣೆಯ ಬಳಿಕ ಅವರಲ್ಲಿ ಒಗ್ಗಟ್ಟು ಉಳಿಯುವುದಿಲ್ಲ. ಹಾಗಾಗಿ ಫ್ರಾನ್ಸ್ ಕ್ರಾಂತಿ, ರಷ್ಯಾಕ್ರಾಂತಿ, ಚೀನಾಕ್ರಾಂತಿ ಸಹಿತ ಎಲ್ಲವೂ ವಿಫಲವಾದವು’ ಎಂದರು.

‘ಬಂಡಾಯಗಾರರು ಮೂರನೇ ಗುಂಪು. ಅವರು ಒಬ್ಬರೇ ಇದ್ದರೂ ತತ್ವ, ಸಿದ್ಧಾಂತಕ್ಕಾಗಿ ಬದುಕುತ್ತಾರೆ. ಪ್ರಾಣ ಹೋದರೂ ಸಿದ್ಧಾಂತ ಬಿಡಲ್ಲ. ಜನರ ಮನಸ್ಸನ್ನು ಪರಿವರ್ತಿಸಲು ನಿರಂತರ ಕೆಲಸ ಮಾಡುತ್ತಾರೆ. ಬುದ್ಧ, ಬಸವಣ್ಣ, ಯೇಸು, ಮಹಮ್ಮದ್ ಪೈಗಂಬರ್ ಈ ಸಾಲಿಗೆ ಸೇರಿದವರು’ ಎಂದರು.

ಬಸವಣ್ಣ, ದೇವರು ಮತ್ತು ಭಕ್ತರ ನಡುವೆ ಮಧ್ಯವರ್ತಿಗಳನ್ನು ತೆಗೆದು ಹಾಕಿ ಇಷ್ಟಲಿಂಗ ನೀಡಿದರು. ಆದರೆ, ಇಂದು ಮಧ್ಯವರ್ತಿಗಳು ಇಲ್ಲದೇ ಯಾವ ಕಾರ್ಯವೂ ಆಗದಷ್ಟು ಮೌಢ್ಯ ಬೆಳೆದಿದೆ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಅವರಿಗೆ ‘ಬಸವಶ್ರೀ’ ಪ್ರಶಸ್ತಿ ಹಾಗೂ ಹಿಂದೂಸ್ತಾನಿ ಸಂಗೀತ ಗಾಯಕ ಪಂಡಿತ್ ಅಂಬಯ್ಯ ನುಲಿ ಅವರಿಗೆ ‘ವಚನ ಸಾಹಿತ್ಯಶ್ರೀ’ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ರತ್ನಕಲಾ ಅಧ್ಯಕ್ಷತೆ ವಹಿಸಿದ್ದರು. ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್, ಬಸವ ವೇದಿಕೆ ಅಧ್ಯಕ್ಷ ಸಿ. ಸೋಮಶೇಖರ್, ಉಪಾಧ್ಯಕ್ಷ ಎಸ್. ಷಡಕ್ಷರಿ ಉಪಸ್ಥಿತರಿದ್ದರು.

ಬೆಂಗಳೂರು ಬಸವ ವೇದಿಕೆ ವತಿಯಿಂದ ‘ವಚನ ಸಾಹಿತ್ಯಶ್ರೀ’ ಪ್ರಶಸ್ತಿಯನ್ನು ಹಿಂದೂಸ್ತಾನಿ ಸಂಗೀತ ಗಾಯಕ ಅಂಬಯ್ಯ ನುಲಿ ಅವರಿಗೆ ಮತ್ತು ಬಸವಶ್ರೀ ಪ್ರಶಸ್ತಿಯನ್ನು ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಅವರಿಗೆ ಭಾನುವಾರ ಪ್ರದಾನ ಮಾಡಲಾಯಿತು —ಪ್ರಜಾವಾಣಿ ಚಿತ್ರ

‘ಸಾವಿರಾರು ಕೋಟಿ ಉಳಿತಾಯ’

‘ನಾನು ಮುಖ್ಯಮಂತ್ರಿಯಾಗಿದ್ದಾಗ ಕೆಲವರು 40 ಪರ್ಸೆಂಟ್ ಆರೋಪ ಮಾಡಿದ್ದರು. ಈಗ ಅವರೆಲ್ಲಿದ್ದಾರೋ ಗೊತ್ತಿಲ್ಲ. ನಾನು ಈ ಬಗ್ಗೆ ಪಾರದರ್ಶಕತೆ ಕಾಪಾಡಲು ಯಾವುದೇ ಟೆಂಡರ್ ನೀಡುವ ಮೊದಲು ಪರಿಶೀಲನೆಗೆ ನ್ಯಾ. ರತ್ನಕಲಾ ಅವರ ನೇತೃತ್ವದಲ್ಲಿ ಸಮಿತಿ ಮಾಡಿದೆ. ಈ ಸಮಿತಿ ಉತ್ತಮ ಕೆಲಸ ಮಾಡಿದ್ದರಿಂದ ರಾಜ್ಯಕ್ಕೆ ಸಾವಿರಾರು ಕೋಟಿ ರೂಪಾಯಿ ಉಳಿಯಿತು’ ಎಂದು ಶಾಸಕ ಬಸವರಾಜ ಬೊಮ್ಮಾಯಿ ನೆನಪು ಮಾಡಿಕೊಂಡರು.

ಹಿರಿಯರಿಗೆ ಜೀವನೋತ್ಸಾಹ ತುಂಬಿದ ಕ್ರಿಕೆಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಣಿಪಾಲ್ ಆಸ್ಪತ್ರೆಗಳ ಸಮೂಹದ ನೆರವಿನಿಂದ ಆಯ್ದ 20 ಹಿರಿಯ ನಾಗರಿಕರು ತಮ್ಮ ಆಪ್ತರೊಂದಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ನಡುವಿನ ಐಪಿಎಲ್ ಪಂದ್ಯವನ್ನು ಭಾನುವಾರ ವೀಕ್ಷಿಸಿ, ಸಂಭ್ರಮಿಸಿದರು.

ಆಸ್ಪತ್ರೆಗಳ ಸಮೂಹವು ವೈದ್ಯಕೀಯ ಸೇವೆಗೆ ಸಂಬಂಧಿಸಿದಂತೆ ಆರ್‌ಸಿಬಿ ಫ್ರಾಂಚೈಸಿಯೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ಹಿರಿಯ ನಾಗರಿಕರಿಗೆ ಜೀವನೋತ್ಸಾಹ ತುಂಬುವ ಉದ್ದೇಶದೊಂದಿಗೆ ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯ ವೀಕ್ಷಣೆಗೆ ಅವಕಾಶ ಕಲ್ಪಿಸಿತ್ತು.

ಆರ್‌ಸಿಬಿ ಫ್ರಾಂಚೈಸಿ ನೆರವಿನಿಂದ ವಿಶೇಷ ಪ್ರವೇಶ ವ್ಯವಸ್ಥೆಯನ್ನು ಅವರಿಗೆ ಕಲ್ಪಿಸಲಾಗಿತ್ತು.

‘ಹಿರಿಯ ನಾಗರಿಕರಿಗೆ ಐಪಿಎಲ್ ಪಂದ್ಯ ವೀಕ್ಷಣೆಗೆ ಅವಕಾಶ ಕಲ್ಪಿಸುವ ಮೂಲಕ ವಿಶೇಷ ಅನುಭವ ಒದಗಿಸಿರುವುದು ಸಂತೋಷವನ್ನುಂಟು ಮಾಡಿದೆ. ಯಾವುದೇ ಚಿಂತೆಯಿಲ್ಲದೆ ಪಂದ್ಯವನ್ನು ವೀಕ್ಷಿಸುವ ಜತೆಗೆ ಯೌವನವನ್ನು ಮೆಲುಕು ಹಾಕಿದರು. ನಮ್ಮ ಎಲ್ಲ ರೋಗಿಗಳಿಗೆ ಉತ್ತಮ ಆರೈಕೆಯನ್ನು ಒದಗಿಸುವುದು ನಮ್ಮ ಗುರಿಯಾಗಿದೆ’ ಎಂದು ಮಣಿಪಾಲ್ ಆಸ್ಪತ್ರೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕಾರ್ತಿಕ್ ರಾಜಗೋಪಾಲ್ ತಿಳಿಸಿದರು.

ಅಂತರರಾಷ್ಟ್ರೀಯ ತಾಯಂದಿರ ದಿನದ ಪ್ರಯುಕ್ತ ಪಾರ್ಕಿನ್ಸನ್ ಕಾಯಿಲೆಯಿಂದ ಚೇತರಿಸಿಕೊಳ್ಳುತ್ತಿರುವ ನವಜ್ಯೋತಿ ಎಂಬುವವರಿಗೂ ಪಂದ್ಯ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿತ್ತು. ಅವರು ಹಳೆ ವಿಮಾನ ನಿಲ್ದಾಣ ರಸ್ತೆಯ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದರು.

ಐಪಿಎಲ್ ಪಂದ್ಯ ವೀಕ್ಷಿಸಿದ ಹಿರಿಯ ನಾಗರಿಕರು

ಸಿದ್ಧಾರೂಢ ಮಿಷನ್ ಆಶ್ರಮದ ರಜತ ಮಹೋತ್ಸವದಲ್ಲಿ ಆರೂಢಭಾರತಿ ಸ್ವಾಮೀಜಿ, ಶಿವಗಂಗೆ ಮಹಾಲಕ್ಷ್ಮೀ ಮಹಾಸಂಸ್ಥಾನದ ಜ್ಞಾನಾನಂದಪುರಿ ಸ್ವಾಮೀಜಿ, ಕಲ್ಯಾಣಸ್ವಾಮಿಮಠ ಸ್ವಾಮೀಜಿ ಪಾಲ್ಗೊಂಡಿದ್ದರು

ಸಿದ್ಧಾರೂಢ ಆಶ್ರಮ: ರಜತ ಸಂಭ್ರಮ

ಪ್ರಜಾವಾಣಿ ವಾರ್ತೆ

ಕೆಂಗೇರಿ: ‘ಬದುಕಿನ ಮಗ್ಗುಲನ್ನು ಬದಲಿಸುವ ಆಧ್ಯಾತ್ಮಿಕ ಕಾರ್ಯಕ್ರಮಗಳಿಗೆ ಜನ ಸಾಮಾನ್ಯರಿಂದ ಸೂಕ್ತ ಸ್ಪಂದನೆ ದೊರಕಬೇಕಿದೆ’ ಎಂದು ರಾಮೋಹಳ್ಳಿ ಸಿದ್ದಾರೂಢ ಮಿಷನ್ ಆಶ್ರಮದ ಆರೂಢಭಾರತಿ ಸ್ವಾಮೀಜಿ ಹೇಳಿದರು.

ಸಿದ್ದಾರೂಢ ಮಿಷನ್ ಆಶ್ರಮದ ರಜತ ಮಹೋತ್ಸವ ಹಾಗೂ ‘ಸಾಂಸ್ಕೃತಿಕ ಭವನ’ ಉದ್ಘಾಟನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸಿದ್ದಾರೂಢ ಮಿಷನ್, ಕಳೆದ 25 ವರ್ಷಗಳಿಂದ ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದೆ. ಆ ಮೂಲಕ ಸಮಾಜದಲ್ಲಿ ಏಕತೆ ಹಾಗೂ ಸೌಹಾರ್ದತೆ ತರಲು ತನ್ನದೇ ಆದ ರೀತಿಯಲ್ಲಿ ಶ್ರಮಿಸುತ್ತಿದೆ’ ಎಂದು ಹೇಳಿದರು.

ಮಾನಸಿಕ ಸ್ಥಿಮಿತ ಕಳೆದುಕೊಂಡ ಕೇಜ್ರಿವಾಲ್: ಅಶೋಕ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭ್ರಷ್ಟಾಚಾರ ಪ್ರಕರಣದಲ್ಲಿ ಜೈಲು ಸೇರಿದ್ದರಿಂದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಈಗ ಹುಚ್ಚರಂತೆ ವರ್ತಿಸುತ್ತಿದ್ದಾರೆ. ಬಿಜೆಪಿ ವಿರುದ್ಧ ಅವರು ಮಾನಸಿಕ ಸ್ಥಿಮಿತ ಕಳೆದುಕೊಂಡವರಂತೆ ಹೇಳಿಕೆಗಳನ್ನು ನೀಡುತ್ತಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ವಾಗ್ದಾಳಿ ನಡೆಸಿದರು.

‘ನಮ್ಮ ಪಕ್ಷದಲ್ಲಿ ವಯಸ್ಸಿನ ಆಧಾರದ ಮೇಲೆ ಟಿಕೆಟ್ ನೀಡುವ ಅಥವಾ ನೀಡದಿರುವ ಕುರಿತು ತೀರ್ಮಾನ ಆಗಿಲ್ಲ. ಆದರೆ, ಅಂತಹದ್ದೊಂದು ಸುಳ್ಳುಗಳನ್ನು ಹಬ್ಬಿಸಿರುವುದು ಕಾಂಗ್ರೆಸ್. ಅದನ್ನು ಉಲ್ಲೇಖಿಸಿ ಕೇಜ್ರಿವಾಲ್ ಮಾತನಾಡುತ್ತಿದ್ದಾರೆ’ ಎಂದು ಅವರು ಭಾನುವಾರ ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

‘ಈ ಬಾರಿ ಬಿಜೆಪಿ ಅಧಿಕಾರಕ್ಕೆ ಬಂದರೂ ಮೋದಿ ಅವರಿಗೆ 75 ವರ್ಷ ಆದ ಬಳಿಕ ಪ್ರಧಾನಿ ಹುದ್ದೆಯನ್ನು ಅಮಿತ್ ಶಾ ಅವರಿಗೆ ನೀಡಲಾಗುತ್ತದೆ ಎಂದು ಕೇಜ್ರಿವಾಲ್ ಹೇಳಿದ್ದಾರೆ. ಇದು ತಲೆಬುಡ ಇಲ್ಲದ ಹುಚ್ಚು- ಹುಚ್ಚಾದ ಹೇಳಿಕೆ. ಎನ್‌ಡಿಎ ಪ್ರಧಾನಿ ಬಗ್ಗೆ ಯಾವುದೇ ಸಂಶಯವಿಲ್ಲ. ಮೋದಿ ಅವರೇ ಮೂರನೇ ಬಾರಿಗೆ ಪ್ರಧಾನಿ ಆಗುತ್ತಾರೆ. ಇಂಡಿಯಾ ಒಕ್ಕೂಟದ ಪ್ರಧಾನಿ ಅಭ್ಯರ್ಥಿ ಯಾರು ಎಂಬುದು ಅವರಿಗೇ ಗೊತ್ತಿಲ್ಲ. ಕೇಜ್ರಿವಾಲ್ ಮತ್ತೆ ಜೈಲಿಗೆ ಹೋಗಬೇಕಾಗಿದೆ. ಬಿಡುಗಡೆ ಆಗುವುದಿಲ್ಲ. ಹೀಗಾಗಿ ಏನೇನೋ ಮಾತನಾಡುತ್ತಿದ್ದಾರೆ’ ಎಂದರು.

ಎಸ್‌ಎಂಕೆ ಆರೋಗ್ಯ ವಿಚಾರಣೆ: ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಆರೋಗ್ಯವನ್ನು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ವಿಚಾರಿಸಿದರು.

ರಾಹುಕಾಲದಲ್ಲಿ ಗೃಹ ಪ್ರವೇಶ

ಕೆ.ಆರ್.ನಗರ (ಮೈಸೂರು ಜಿಲ್ಲೆ): ಇಲ್ಲಿನ ಈಶ್ವರ ನಗರದಲ್ಲಿ ಭಾನುವಾರ ಲೇಖಕ, ಹೊಳೆನರಸೀಪುರದ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್ ವಿಜ್ಞಾನ ವಿಭಾಗದ ಮುಖ್ಯಸ್ಥ ಎನ್.ಆರ್.ಶಿವರಾಂ ತಮ್ಮ ‘ಆದರ್ಶ ನಿಲಯ’ದ ಗೃಹ ಪ್ರವೇಶವನ್ನು ರಾಹುಕಾಲದಲ್ಲಿ ನೆರವೇರಿಸಿದರು.

‘ರಾಹುಕಾಲ, ಗುಳಿಕಕಾಲ, ಯಮಗಂಡ ಕಾಲ ಎಂದು ನಾವೇ ನಿರ್ಧರಿಸಿದ್ದೇವೆ. ರಾಹುಕಾಲ ಕೆಟ್ಟದ್ದೆಂದು ಬಹುತೇಕರ ನಂಬಿಕೆ. ಒಳ್ಳೆಯ ಕೆಲಸ ಮಾಡಿದರೆ ಒಳ್ಳೆಯದಾಗುತ್ತದೆ. ಕೆಟ್ಟ ಕೆಲಸ ಮಾಡಿದರೆ ಕೆಟ್ಟದ್ದಾಗುತ್ತದೆ’ ಎಂದು ಅವರು ಹೇಳಿದರು.

ನೃತ್ಯ ವೈಭವ... ಮಲ್ಲೇಶ್ವರದ ಸೇವಾಸದನ ಆಡಿಟೋರಿಯಂನಲ್ಲಿ ಹಿತೈಷಿ ಮಹಿಳಾ ಮಂಡಳಿ ಆಯೋಜಿಸಿದ್ದ ತ್ರಿಂಶತಿ ವೈಭವ ಸಾಂಸ್ಕೃತಿಕ ಹಾಗೂ ಆಟೋಟ ಸ್ಪರ್ಧೆ ಕಾರ್ಯಕ್ರಮದಲ್ಲಿ ನೃತ್ಯಗಾರ್ತಿ ರೋಹಿಣಿ ಮತ್ತು ತಂಡದವರು ದಶಾವತಾರ ನೃತ್ಯ ರೂಪಕ ಪ್ರಸ್ತುತಪಡಿಸಿದರು

ಗೊಲ್ಲಹಳ್ಳಿಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ

‘ಸಮಸ್ಯೆ ಬಂದಾಗ ಧೈರ್ಯದಿಂದ ಎದುರಿಸಿ’

ಪ್ರಜಾವಾಣಿ ವಾರ್ತೆ

ನೆಲಮಂಗಲ: ‘ಸಾಧನೆ ಮಾಡಲು ಅಂಗ ವೈಕಲ್ಯ ಅಡ್ಡಿ ಬರುವುದಿಲ್ಲ. ಸಮಸ್ಯೆಗಳು ಬಂದಾಗ ಧೈರ್ಯದಿಂದ ಎದುರಿಸಬೇಕು’ ಎಂದು ‘ಬೆಳಕು’ ಅಕಾಡೆಮಿ ಅಧ್ಯಕ್ಷೆ ಅಶ್ವಿನಿ ಅಂಗಡಿ ತಿಳಿಸಿದರು.

ತಾಲ್ಲೂಕಿನ ಗೊಲ್ಲಹಳ್ಳಿಯಲ್ಲಿ ಹಿತಚಿಂತನ ಚಾರಿಟಬಲ್ ಟ್ರಸ್ಟ್‌ನಿಂದ ವಿಶ್ವ ತಾಯಂದಿರ ದಿನದ ಪ್ರಯುಕ್ತ ಹಮ್ಮಿಕೊಂಡಿದ್ದ ಸ್ತನ ಕ್ಯಾನ್ಸರ್ ತಪಾಸಣೆ ಹಾಗೂ ಉಚಿತ ಆರೋಗ್ಯ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಕ್ಯಾನ್ಸರ್ ತಜ್ಞೆ ಪೂವಮ್ಮ ಮಾತನಾಡಿ, ‘ಹೆಣ್ಣು ಮಕ್ಕಳ ಆರೋಗ್ಯ ಕೆಟ್ಟರೆ ಇಡೀ ಕುಟುಂಬದ ವಾತಾವರಣ ಹದಗೆಡುತ್ತದೆ. ತಾಯಂದಿರ ಆರೋಗ್ಯದ ಬಗ್ಗೆ ಕಾಳಜಿ ಇರಲಿ’ ಎಂದು ಸಲಹೆ ನೀಡಿದರು.

ಹಿತಚಿಂತನ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿ.ರಾಮಸ್ವಾಮಿ ಮಾತನಾಡಿ, ಈಗಾಗಲೇ ಉಚಿತ ಔಷಧಿಗಳನ್ನು ಅಶಕ್ತರಿಗೆ ಮನೆ ಬಾಗಿಲಿಗೆ ತಲುಪಿಸುವ ಕೆಲಸ ಮಾಡುತ್ತಿದ್ದೇವೆ’ ಎಂದರು.

ಶ್ವಾಸಕೋಶ ತಜ್ಞ ಗಣೇಶ್ ಮಾತನಾಡಿ, ವ್ಯಾಯಾಮ, ಮಿತ ಆಹಾರವೇ ರೋಗಗಳು ಬರದಂತೆ ತಡೆಯುವ ದಿವ್ಯ ಔಷಧವಾಗಿವೆ ಎಂದರು.

ಇದೇ ವೇಳೆ ಟ್ರಸ್ಟಿ ಪುಟ್ಟಮ್ಮ ₹10 ಲಕ್ಷವನ್ನು ಟ್ರಸ್ಟ್‌ನ ಸೇವಾ ಕಾರ್ಯಗಳಿಗೆ ನೀಡಿದರು. ₹ 5 ಲಕ್ಷ ಮೌಲ್ಯದ ಔಷಧಗಳನ್ನು ಉಚಿತವಾಗಿ ವಿತರಿಸಲಾಯಿತು.

ವಿಸಿಎನ್‌ಆರ್ ಆಸ್ಪತ್ರೆಯ ವಿನಯ್, ಮೂಳೆತಜ್ಞ ಅರುಣ್, ಸ್ತ್ರೀರೋಗ ತಜ್ಞೆ ನೇಹಾ, ನೇತ್ರ ತಜ್ಞೆ ಮಾನಸಾ, ಸಾಯಿದತ್ತ ಆರೋಗ್ಯ ತಪಾಸಣೆ ನಡೆಸಿದರು.

ನೆಲಮಂಗಲ ತಾಲ್ಲೂಕಿನ ಗೊಲ್ಲಹಳ್ಳಿಯಲ್ಲಿ ಹಿತಚಿಂತನ ಚಾರಿಟಬಲ್ ಟ್ರಸ್ಟ್‌ನಿಂದ ವಿಶ್ವ ತಾಯಂದಿರ ದಿನದ ಪ್ರಯುಕ್ತ ಹಮ್ಮಿಕೊಂಡಿದ್ದ ಸ್ತನ ಕ್ಯಾನ್ಸರ್ ತಪಾಸಣೆ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಬೆಳಕು ಅಕಾಡೆಮಿ ಅಧ್ಯಕ್ಷೆ ಅಶ್ವಿನಿ ಅಂಗಡಿ ಉದ್ಘಾಟಿಸಿದರು

ಶಿಕ್ಷಣ

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ಗಣಿತ

ಅಧ್ಯಾಯ1 :ಸಮಾಂತರ ಶ್ರೇಢಿ

2) ಒಂದು ಸಮಾಂತರ ಶ್ರೇಢಿಯ 2ನೇ ಮತ್ತು 4ನೇ ಪದಗಳ ಮೊತ್ತ 54 ಹಾಗೂ ಅದರ ಮೊದಲ 11 ಪದಗಳ ಮೊತ್ತ 693 ಆದರೆ, ಸಮಾಂತರ ಶ್ರೇಢಿಯನ್ನು ಕಂಡುಹಿಡಿಯಿರಿ ಮತ್ತು ಈ ಶ್ರೇಢಿಯ ಎಷ್ಟನೇ ಪದವು ಅದರ 54ನೇ ಪದಕ್ಕಿಂತ 132 ಹೆಚ್ಚಾಗಿರುತ್ತದೆ?

ಪರಿಹಾರ: (..........ಹಿಂದಿನ ಸಂಚಿಕೆಯಿಂದ)

$$2a + 10d = 126$$
$$a + 5d = 63 \text{ .... (ii)}$$

(i) ರಲ್ಲಿ (ii) ಅನ್ನು ಕಳೆದಾಗ

$$a + 2d = 27$$
$$a + 5d = 63$$
$$-3d = -36$$
$$\therefore d = 12$$

ಈಗ ಇರುವ ಜಾಗದಲ್ಲಿ 12ನ್ನು ಹಾಕಿದಾಗ

$a + 2(12) = 27 \Rightarrow a = 27 - 24$

$\therefore a = 3$

ಸಾಮಾನ್ಯ AP ಯು ಹೀಗಿದೆ

$$a,\ a+d,\ a+2d,\ a+3, \ldots$$
$$3,\ 3+12,\ 3+24,\ 3+36, \ldots$$
$$3,\ 15,\ 27,\ 39, \ldots$$

ಆದ್ದರಿಂದ ಸಮಾಂತರ ಶ್ರೇಢಿ = 3, 15, 27, 39, ...

$$x_n = 132 + a_{54}$$
$$x_n = 132 + a + 53d$$
$$x_n = 132 + 3 + 636$$
$$x_n = 771$$
$$a + (n-1) = 771$$
$$3 + (n-1)12 = 771$$
$$12(n-1) = 768$$
$$n - 1 = 64$$
$$n = 65$$

65 ಪದವು ಅದರ 54ನೇ ಪದಕ್ಕಿಂತ 132 ಹೆಚ್ಚಾಗಿರುತ್ತದೆ

ಸಮಸ್ಯೆ ಮತ್ತು ಪರಿಹಾರ

1) $\frac{3}{2}, \frac{1}{2}, \frac{1}{2}, -\frac{1}{2}, -\frac{3}{2}$............... ಈ ಸಮಾಂತರ ಶ್ರೇಢಿಯ ಮೊದಲ ಪದ a ಮತ್ತು ಸಾಮಾನ್ಯ ವ್ಯತ್ಯಾಸ d ಗಳನ್ನು ಕಂಡುಹಿಡಿಯಿರಿ.

ಪರಿಹಾರ: ಇಲ್ಲಿ $a = \frac{3}{2}$, $d = \frac{1}{2} - \frac{3}{2} = -1$

2) ಈ ಕೆಳಗಿನವುಗಳಲ್ಲಿ ಯಾವ ಸಂಖ್ಯಾ ಪಟ್ಟಿಗಳು ಸಮಾಂತರ ಶ್ರೇಢಿಯನ್ನುಂಟು ಮಾಡುತ್ತವೆ? ಅವುಗಳು ಸಮಾಂತರ ಶ್ರೇಢಿಯನ್ನುಂಟು ಮಾಡಿದರೆ ಅದರ ಮುಂದಿನ ಎರಡು ಪದಗಳನ್ನು ಕಂಡುಹಿಡಿಯಿರಿ.

i) 4, 10, 16, 22 .... ii) 1, -1, -3, -5 ....
iii) -2, 2, -2, 2 .... iv) 1, 1, 1, 2, 2, 2, 3, 3, 3 ....

ಪರಿಹಾರ: (i) $a_2 - a_1 = 10 - 4 = 6$

$$a_3 - a_2 = 16 - 10 = 6$$
$$a_4 - a_3 = 22 - 16 = 6$$

ಅಂದರೆ $a_{k+1} - a_k$ ಎಲ್ಲಾ ಸಂದರ್ಭಗಳಲ್ಲಿ ಒಂದೇ ಆಗಿದೆ.

ಆದ್ದರಿಂದ ಮೇಲಿನ ಸಂಖ್ಯಾ ಪಟ್ಟಿಯು ಸಾಮಾನ್ಯ ವ್ಯತ್ಯಾಸ d=6 ಇರುವ ಸಮಾಂತರ ಶ್ರೇಢಿಯನ್ನು ಉಂಟು ಮಾಡಿದೆ

ಅದರ ಮುಂದಿನ ಎರಡು ಪದಗಳು 22+6 = 28ಮತ್ತು28+6= 34

ii) $a_2 - a_1 = -1 - 1 = -2$

$$a_3 - a_2 = -3 - (-1) = -3 + 1 = -2$$
$$a_4 - a_3 = -5 - (-3) = -5 + 3 = -2$$

ಅಂದರೆ $a_{k+1} - a_k$ ಯು ಎಲ್ಲಾ ಸಂದರ್ಭಗಳಲ್ಲಿ ಒಂದೇ ಆಗಿದೆ ಆದ್ದರಿಂದ ಕೊಟ್ಟಿರುವ ಸಂಖ್ಯಾ ಪಟ್ಟಿಯು ಸಾಮಾನ್ಯ ವ್ಯತ್ಯಾಸd= -2 ಇರುವ ಸಮಾಂತರ ಶ್ರೇಢಿಯನ್ನುಂಟು ಮಾಡಿದೆ. ಅದರ ಮುಂದಿನ ಎರಡು ಪದಗಳು -5 + (-2) = -7 ಮತ್ತು -7 + (-2) = -9

iii) $a_2 - a_1 = 2 - (-2) = 2 + 2 = 4$

$$a_3 - a_2 = -2 - 2 = -4$$

$\therefore a_2 - a_1 \neq a_3 - a_2$ ಕೊಟ್ಟಿರುವ ಸಂಖ್ಯಾ ಪಟ್ಟಿಯು ಸಮಾಂತರ ಶ್ರೇಢಿಯನ್ನುಂಟು ಮಾಡುವುದಿಲ್ಲ.

iv) $a_2 - a_1 = 1 - 1 = 0$

$$a_3 - a_2 = 1 - 1 = 0$$
$$a_4 - a_3 = 2 - 1 = 1$$

ಇಲ್ಲಿ $a_2 - a_1 = a_3 - a_2 \neq a_4 - a_3$ ಆದ್ದರಿಂದ ಕೊಟ್ಟ ಸಂಖ್ಯಾಪಟ್ಟಿಯು ಸಮಾಂತರ ಶ್ರೇಢಿಯನ್ನು ಉಂಟುಮಾಡುವುದಿಲ್ಲ.

ಅಭ್ಯಾಸ 1.1

1. ಈ ಕೆಳಗಿನ ಯಾವ ಸಂದರ್ಭಗಳಲ್ಲಿ ಕೊಟ್ಟಿರುವ ಸಂಖ್ಯಾ ಪಟ್ಟಿಯು ಸಮಾಂತರ ಶ್ರೇಢಿಯನ್ನುಂಟು ಮಾಡುತ್ತದೆ ಮತ್ತು ಏಕೆ?

i) ಒಂದು ಟ್ಯಾಕ್ಸಿಯ ಬಾಡಿಗೆ ಮೊದಲ ಕಿಲೋಮೀಟರ್‌ಗೆ ರೂ.. 15/– ಆಗಿದ್ದು ನಂತರದ ಪ್ರತಿ ಕಿಲೋಮೀಟರ್‌ಗೆ ರೂ.. 8/–ರಂತೆ ಇರುತ್ತದೆ.

ii) ಒಂದು ನಿರ್ವಾತಗೊಳಿಸುವ ವಾಯು ರೇಚಕ ಯಂತ್ರವು ಪ್ರತಿಸಲ ಸಿಲಿಂಡರಿನಲ್ಲಿರುವ ಅನಿಲದ 1/4ರಷ್ಟು ಅನಿಲವನ್ನು ಹೊರತೆಗೆದರೆ ಉಳಿಯುವ ಅನಿಲದ ಪ್ರಮಾಣಗಳು.

iii) ಬಾವಿಯನ್ನು ತೋಡುವಾಗ ಮೊದಲ ಮೀಟರ್‌ಗೆ ರೂ.150/– ನಂತರದ ಪ್ರತಿ ಮೀಟರ್‌ಗೆ ರೂ. 50/–ರಂತೆ ಹೆಚ್ಚಾಗುತ್ತಾ ಹೋಗುತ್ತದೆ.

iv) ಆರಂಭಿಕ ಠೇವಣಿ ರೂ. 10000ಕ್ಕೆ 8% ಚಕ್ರಬಡ್ಡಿಯಂತೆ ಪ್ರತಿವರ್ಷ ಆಗುವ ಮೊತ್ತ

ಪರಿಹಾರ:

(i)ಟ್ಯಾಕ್ಸಿಯ ಬಾಡಿಗೆ ಮೊದಲ ಕಿಲೋಮೀಟರ್‌ಗೆ ರೂ. 15/–= a_1

ಟ್ಯಾಕ್ಸಿಯ ಬಾಡಿಗೆ 2kms = Rs15 + Rs8 = Rs 23 = a_2

ಟ್ಯಾಕ್ಸಿಯ ಬಾಡಿಗೆ 3kms = Rs23 + Rs8 = Rs 31 = a_3

ಟ್ಯಾಕ್ಸಿಯ ಬಾಡಿಗೆ 4kms = Rs31 + Rs8 = Rs 39 = a_4

ಹೀಗೆಯೇ ಮುಂದುವರಿಯುತ್ತದೆ

$a_2 - a_1$ = Rs 23 - Rs 15 = Rs 8

$a_3 - a_2$ = Rs 31 - Rs 23 = Rs 8

$a_4 - a_3$ = Rs 39 - Rs 31 = Rs 8

ಅಂದರೆ $a_{k+1} - a_k$ ಯು ಎಲ್ಲಾ ಸಂದರ್ಭಗಳಲ್ಲಿ ಒಂದೇ ಆಗಿದೆ. ಆದ್ದರಿಂದ ಸಾಮಾನ್ಯ ವ್ಯತ್ಯಾಸ d = 8 ಇರುವ ಸಮಾಂತರ ಶ್ರೇಢಿಯನ್ನುಂಟು ಮಾಡಿದೆ.

ಪರಿಹಾರ: (ii) ಒಂದು ನಿರ್ವಾತಗೊಳಿಸುವ ವಾಯುರೇಚಕ ಯಂತ್ರವು ಪ್ರತಿಸಲ ಸಿಲಿಂಡರಿನಲ್ಲಿರುವ ಅನಿಲದ 1/4ರಷ್ಟು ಅನಿಲವನ್ನು ಹೊರತೆಗೆದರೆ ಉಳಿಯುವ ಅನಿಲದ ಪ್ರಮಾಣಗಳು.

ಸಿಲಿಂಡರಿನಲ್ಲಿರುವ ಅನಿಲದ ಪ್ರಮಾಣ x ಆಗಿರಲಿ = a_1

ಒಂದು ನಿರ್ವಾತಗೊಳಿಸುವ ವಾಯು ರೇಚಕ ಯಂತ್ರವು ಒಂದು ಸಲ ಸಿಲಿಂಡರಿನಲ್ಲಿರುವ ಅನಿಲದ 1/4ರಷ್ಟು ಅನಿಲವನ್ನು ಹೊರತೆಗೆದರೆ ಉಳಿಯುವ ಅನಿಲದ ಪ್ರಮಾಣಗಳು =

$$= x - \frac{x}{4} = \frac{3x}{4}\ unit = a_2$$

ಒಂದು ನಿರ್ವಾತಗೊಳಿಸುವ ವಾಯು ರೇಚಕ ಯಂತ್ರವು ಮೂರನೇ ಸಲ ಸಿಲಿಂಡರಿನಲ್ಲಿರುವ ಅನಿಲದ 1/4ರಷ್ಟು ಅನಿಲವನ್ನು ಹೊರತೆಗೆದರೆ ಉಳಿಯುವ ಅನಿಲದ ಪ್ರಮಾಣಗಳು

(ಮುಂದುವರಿಯುವುದು)

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

II PUC PHYSICS

Chapter – 2

ELECTROSTATIC POTENTIAL AND CAPACITANCE

35. Two point charge 4 μC and – 2 μ C are separated by a distance of 1 m in air. Calculate at what point on the line joining the two charge, the electric potential is zero.

Ans:- Let P be the point at a distance x from 4 μC, at which the potential is zero.

$$\therefore \frac{1}{4\pi\epsilon_0}\frac{4\times10^{-6}}{x} - \frac{1}{4\pi\epsilon_0}\frac{2\times10^{-6}}{(1-x)} = 0$$

$$\Rightarrow \frac{2}{x} = \frac{1}{1-x} \Rightarrow x = \frac{2}{3} = 0.67\ \text{m}$$

36. What is the electrostatic potential due to an electric dipole at an equatorial point?

Ans:- Zero.

37. What is electron volt?

Ans:- Energy acquired by electron while passing through a potential difference of 1 volt.

38. What is the value of electron-volt?

Ans:- 1 eV = 1.6×10^{-19} J.

39. Give expression for work done on a test charge q_0 in electrostatic field due to a set of charges q_1, q_2, q_3, q_4, q_5, shown in the figure along paths PIQ, PIIA, PIIIQ, PIVQ and PVQ. Let U be the potential energy and V be potential.



Ans:- The required expression for work done is same for all paths because work done is independent of the path and depends upon initial and final positions i.e., P and Q only. Thus work done is given by,

$$\frac{W_{QP}}{q_0} = \frac{U_Q - U_P}{q_0} = V_Q - V_P$$

i.e., $W_{QP} = q_0(V_Q - V_P)$

40. Find the electric potential at a point, when a work of 2.4 x 10^{-5} J is done to carry charge of 5 x 10^{-19} C to that point.

Soln :– Using, $V = \frac{W}{q}$,

we get, $V = \frac{2.4\times10^{-5}}{5\times10^{-19}} = 4.8 \times 10^{13}$ V

41. Work is done in taking a positive charge from the outer surface of a metallic sphere to another point outside the sphere but no work is done in taking the charge inside the sphere from one point to other. Why?

Ans:- Electric potential is same at all points inside the metallic sphere so no work is done in moving the charge inside the sphere. But outside the sphere potential is different at different distances so work is done in moving the charge from one point to the other out-side the sphere.

42. If 100 joule of work must be done move electric charge of 4C from a place where potential is -10 volt to another place, where potential is 'V' volt, find the value of V.

Soln:- To find potential at a point is -

$V_A = -10\,V$; $V_B = V$;

and $W_{AB} = 100\,J$ and $q = 4C$

Using relation, $V_B - V_A = \frac{W_{AB}}{q_0}$,

we get, $V - (-10) = \frac{100}{4} = 25$

(or) V = 15 volt

43. Arrange three charges +q, +q and –q using distances r, 2r and 2r to get a system with zero potential energy.



Here potential energy,

$$U = k\left(\frac{q^2}{r} - \frac{q^2}{2r} - \frac{q^2}{2r}\right) = 0$$

44. Draw three equipotential surfaces corresponding to a field that uniformly increases in magnitude but remains constant along Z - direction. How are the surfaces different from that of a constant electric field along Z - direction?

Ans:-



increases field x-y directions



Constant field

Equipotential surfaces will be equidistant for some potential difference in constant electric field. They narrow down for some potential difference in the case of increasing field.

45. Depict the equipotential surfaces for a system of two identical positive point charges placed at distance *d* apart.

Ans:- *(Contd……..)*

ಮಕ್ಕಳ ಶಾಲೆಯ ಆಯ್ಕೆಗೆ ಮುನ್ನ...

ಭಾರತಿ.ಎ.ಕೊಪ್ಪ

ಕೆಲವು ಪುಟ್ಟ ಮಕ್ಕಳು ಹಾಗೂ ಅವರ ಪಾಲಕರು ಕೂಡ ನಾನಾ ಕಾರಣಗಳಿಂದಾಗಿ ಶಾಲೆ ಬದಲಾವಣೆ ಬಗ್ಗೆ ಯೋಚಿಸುತ್ತಿರುತ್ತಾರೆ. ನಮ್ಮ ಮಕ್ಕಳು ಓದುವ ಶಾಲೆ ಹೇಗಿರಬೇಕು ಎಂಬುದೇ ಒಂದಿಷ್ಟು ಗೊಂದಲದ ಗೂಡಾಗುವ ಸನ್ನಿವೇಶ ಎದುರಾಗುತ್ತದೆ. ನಮ್ಮ ಮಕ್ಕಳು ಓದುವ ಶಾಲೆ ಹೇಗಿರಬೇಕು? ಎಂದು ಹಲವು ದಿಕ್ಕಿನಲ್ಲಿ ಯೋಚಿಸಿ ತೀರ್ಮಾನ ಕೈಗೊಳ್ಳಬೇಕಾಗುತ್ತದೆ.

ಮಂಡಳಿಯ ಆಯ್ಕೆ: ಕರ್ನಾಟಕ ರಾಜ್ಯ ಶಾಲಾ ಮಂಡಳಿ, ICSE, CBSE, SSC, IG, ಕೇಂಬ್ರಿಡ್ಜ್ ಆಯ್ಕೆಗಳಿವೆ. ಯಾವ ಬೋರ್ಡ್ ನಮ್ಮ ಮಗುವಿನ ಗ್ರಹಿಕಾ ಶಕ್ತಿಗೆ ಸೂಕ್ತ ಎಂಬುದನ್ನು ಗಮನಿಸಿ, ಶಾಲೆಗಳ ಹುಡುಕಾಟವನ್ನು ಆರಂಭಿಸಬೇಕಾಗುತ್ತದೆ.

ಶಾಲೆಯ ದೂರ: ನಮ್ಮ ಮಕ್ಕಳು ವಿದ್ಯಾಭ್ಯಾಸ ಮಾಡುವ ಶಾಲೆ ಮನೆಯಿಂದ ಹತ್ತಿರ ಇರುವುದು ಸೂಕ್ತವೋ ಅಥವಾ ಶಾಲಾ ವಾಹನದಲ್ಲಿ ಬಹಳ ದೂರ ಪ್ರಯಾಣ ಮಾಡಲು ಮಕ್ಕಳು ಸಿದ್ಧರಿದ್ದಾರೆಯೇ ಎಂಬುದು ಕೂಡ ಮುಖ್ಯವಾಗಿರುತ್ತದೆ. ದೂರದ ಶಾಲೆಗಳಿಗೆ ತೆರಳುವಾಗ ಬೆಳಿಗ್ಗೆ ಬೇಗ ಎದ್ದೇಳುವ, ಸಂಜೆ ಪ್ರಯಾಣಿಸಿ ಬಂದು ಗೃಹ ಪಾಠಗಳನ್ನು ನಿರ್ವಹಿಸುವ ದೈಹಿಕ ಶಕ್ತಿ ಮತ್ತು ಮಾನಸಿಕ ಸಾಮರ್ಥ್ಯ ಎಷ್ಟಿದೆ ಎಂಬುದನ್ನು ಪಾಲಕರು ಗಮನಿಸಬೇಕು. ಓರಗೆಯ ಮಕ್ಕಳ ಜೊತೆಗೆ ಹೋಲಿಸಿದರೆ ಕಲಿಕೆಯ ಮೇಲೆ ದುಷ್ಪರಿಣಾಮ ಬೀರುತ್ತದೆ.

ಆರ್ಥಿಕ ಪರಿಸ್ಥಿತಿ: ಖಾಸಗಿ ಶಾಲೆಗಳಲ್ಲಿ ನಮ್ಮ ಮಕ್ಕಳನ್ನು ಓದಿಸುವ ತೀರ್ಮಾನ ತೆಗೆದುಕೊಂಡಿದ್ದಲ್ಲಿ, ಅಲ್ಲಿನ ಶುಲ್ಕ ನಮ್ಮ ಆರ್ಥಿಕ ಪರಿಸ್ಥಿತಿಗೆ ಸರಿ ಹೊಂದುತ್ತದೆಯೇ ಎಂದು ಯೋಚಿಸಿ. ಶುಲ್ಕ ಮಾತ್ರ ಭರಿಸದೆ, ಸಮವಸ್ತ್ರ, ಕಲಿಕಾ ಸಾಮಗ್ರಿಗಳು, ಶಾಲಾ ವಾಹನದ ಅಗತ್ಯ ಇದ್ದರೆ ಅದರ ಶುಲ್ಕ...ಹೀಗೆ ಎಲ್ಲವೂ ಹಣದ ಆಧಾರದಲ್ಲಿ ನಡೆಯುವುದರಿಂದ ನಮ್ಮ ಬಜೆಟ್‌ಗೆ ತಕ್ಕಂತೆ ಇದ್ದು, ಗುಣಮಟ್ಟದ ಶಿಕ್ಷಣ ನೀಡುವ ಶಾಲೆಯನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ.

ಅಂಕಗಳಿಕೆಯೇ ಶಾಲಾ ಆಯ್ಕೆಯ ಮಾನದಂಡ ಆಗದಿರಲಿ

ಸರ್ಕಾರಿ ಶಾಲೆಯಲ್ಲಿ ಓದಿಸುವ ಯೋಚನೆ ಮಾಡಿದಲ್ಲಿ ಆರ್ಥಿಕವಾಗಿ ಹೊರೆ ಎನಿಸಲಾರದು. ಕಲಿಕಾ ಸಾಮಗ್ರಿಗಳನ್ನು ವ್ಯವಸ್ಥೆ ಮಾಡುವ, ಶಾಲಾ ವಾರ್ಷಿಕೋತ್ಸವ, ಪ್ರವಾಸ ಇಂಥ ವಿಶೇಷ ಚಟುವಟಿಕೆಗಳಿಗೆ ಅಗತ್ಯವಾದ ಹಣ ಹೊಂದಿಸುವ ಜವಾಬ್ದಾರಿ ಪೋಷಕರದಾಗಿರುತ್ತದೆ. ಸರ್ಕಾರಿ ಶಾಲೆಗಳಲ್ಲಿ ಸರ್ಕಾರದ ಅನೇಕ ಯೋಜನೆಗಳ ಜೊತೆಗೆ, ದಾನಿಗಳು , ವಿವಿಧ ಸಂಘ ಸಂಸ್ಥೆಗಳು ಕೂಡ ಸಹಭಾಗಿಯಾಗುತ್ತಾರೆಂಬುದನ್ನು ಪೋಷಕರು ಗಮನಿಸಬೇಕು. ಶೈಕ್ಷಣಿಕ ಅಭಿವೃದ್ಧಿಗೆ ಸೂಕ್ತ ಶಾಲೆಯ ಆಯ್ಕೆ ನಮ್ಮ ಆರ್ಥಿಕ ಪರಿಸ್ಥಿತಿಗೂ ಪೂರಕವಾಗಿರುವಂತಿರಬೇಕು.

ವಿದ್ಯಾರ್ಥಿ - ಶಿಕ್ಷಕರ ಅನುಪಾತ: ಕೇವಲ ಭೌತಿಕ ಸೌಲಭ್ಯಗಳು ನಮ್ಮ ಮಕ್ಕಳ ಕಲಿಕಾ ಪ್ರಗತಿಗೆ ಪೂರಕವಾಗಲಾರವು. ಮಕ್ಕಳ ಕಲಿಕೆಗೆ ಹೆಚ್ಚು ಗಮನ ನೀಡಲು, ಪ್ರತಿ ಹಂತದಲ್ಲೂ ಮಾರ್ಗದರ್ಶನ ನೀಡಲು ವಿದ್ಯಾರ್ಥಿ- ಶಿಕ್ಷಕರ ಅನುಪಾತವು ಪ್ರಮುಖವಾಗುತ್ತದೆ. ಒಂದು ಉತ್ತಮ ಕಲಿಕಾ ಪರಿಸರ ಮೂಡಲು 30:1 ಅಥವಾ 40:1 ಇದ್ದರೆ ಅನುಕೂಲ. ಅದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ತರಗತಿಯಲ್ಲಿ ಮಕ್ಕಳು ಇದ್ದರೆ ಒಬ್ಬರು ಶಿಕ್ಷಕರು ಬೋಧನಾ ಅವಧಿಯಲ್ಲಿ ಪ್ರತಿ ಮಗುವಿಗೆ ವೈಯಕ್ತಿಕ ಗಮನ ಕೊಡುವುದು ಕಷ್ಟವಾಗುತ್ತದೆ ಎಂಬುದನ್ನು ಪೋಷಕರು ಮನಗಾಣಬೇಕು. ಶಿಕ್ಷಕರ ವಿದ್ಯಾರ್ಹತೆ ಮತ್ತು ಬೋಧನಾ ಅನುಭವವನ್ನು ಕೂಡ ಗಣನೆಗೆ ತೆಗೆದುಕೊಳ್ಳಬಹುದು.

ಶಾಲೆಯ ಸಾಧನೆಗಳು: ಪ್ರತಿ ಶೈಕ್ಷಣಿಕ ವರ್ಷದ ಪರೀಕ್ಷಾ ಫಲಿತಾಂಶಗಳು, ಮಕ್ಕಳ ಕಲಿಕಾ ಗ್ರೇಡ್‌ಗಳು ಆ ಶಾಲೆಯ ಪಠ್ಯ ವಿಷಯದ ಸಾಧನೆಯ ಕೈಗನ್ನಡಿಯಾಗಿರುತ್ತದೆ. ನಿಧಾನ ಕಲಿಕೆಯ ಮಕ್ಕಳ ಶೈಕ್ಷಣಿಕ ಉನ್ನತೀಕರಣಕ್ಕೆ ಶಿಕ್ಷಕರು ತೆಗೆದುಕೊಳ್ಳುವ ವಿಶೇಷ ಕಾಳಜಿ ಮತ್ತು ಮಕ್ಕಳಿಗೆ ಕಲಿಕೆಗೆ ನೀಡುವ ಪ್ರೋತ್ಸಾಹ ಮುಖ್ಯವಾಗುತ್ತದೆ.

ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರ ಅಥವಾ ಕ್ರೀಡಾ ಕ್ಷೇತ್ರದಲ್ಲಿ ವಿಶೇಷ ಆಸಕ್ತಿ ಹೊಂದಿದ್ದರೆ ಮಗುವನ್ನು ದಾಖಲಾತಿ ಮಾಡುವ ಶಾಲೆಗೆ ಈ ರೀತಿಯ ಸಹಪಠ್ಯ ಚಟುವಟಿಕೆಗೆ ನೀಡುವ ಅವಕಾಶ ಮತ್ತು ಪ್ರೋತ್ಸಾಹವನ್ನು ಗಮನಿಸಿ. ಡಾ.ರಾಜ್ ಕುಮಾರ್,ಡಿ.ವಿ.ಗುಂಡಪ್ಪ , ಸಚಿನ್ ತೆಂಡೂಲ್ಕರ್ ಹೀಗೆ ಮೇರು ಪ್ರತಿಭೆಗಳು ಅಂಕ ಗಳಿಕೆಯ ಆಚೆಗೂ ಯಶಸ್ಸು ಕಂಡವರು.

ನಮ್ಮ ಮಕ್ಕಳು ಶೈಕ್ಷಣಿಕ ಸಾಧನೆ ಮಾಡುವ ಜೊತೆಗೆ ಉತ್ತಮ ಸುಸಂಸ್ಕೃತ ನಾಗರಿಕರಾಗಬೇಕು ಎಂಬುದು ನಮ್ಮ ಆದ್ಯತೆಯಾಗಬೇಕು. ಗುರು - ಹಿರಿಯರ ಮೇಲೆ ಗೌರವ, ದೇಶ - ಭಾಷೆಯ ಬಗ್ಗೆ ಆತ್ಮಾಭಿಮಾನ ಎಲ್ಲವೂ ಶಿಕ್ಷಣದ ಜತೆಯಲ್ಲಿಯೇ ಮೈಗೂಡಿಸಿಕೊಂಡು ಸಾಗಬೇಕು. ಭವಿಷ್ಯದ ತಾರೆಗಳಂತಿರುವ ಮಕ್ಕಳೊಂದಿಗೆ ಚರ್ಚಿಸಿ ಆಯ್ಕೆ ಮಾಡುವುದು ಕೂಡ ನಮ್ಮ ಕರ್ತವ್ಯವಾಗಿದೆ. ❖

ಎಂಟೆಕ್‌ಗೆ ಯಾವ ವಿಷಯ ಸೂಕ್ತ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

ನಾನು ಬಿ.ಟೆಕ್ (ಕಂಪ್ಯೂಟರ್ ಸೈನ್ಸ್) ಮಾಡುತ್ತಿದ್ದು, ಮುಂದೆ ಯಾವ ವಿಷಯದಲ್ಲಿ ಎಂಟೆಕ್ ಮಾಡಬಹುದು?

ಹೆಸರು, ಊರು ತಿಳಿಸಿಲ್ಲ.

ಎಂಟೆಕ್ ಕೋರ್ಸ್ ಅನ್ನು ಕಂಪ್ಯೂಟರ್ ಸೈನ್ಸ್, ಐಟಿ, ರೊಬಾಟಿಕ್ಸ್, ಆರ್ಟಿಫಿಷಿಯಲ್ ಇಂಟಲಿಜೆನ್ಸ್, ಡೇಟಾ ಸೈನ್ಸ್, ಸೈಬರ್ ಸೆಕ್ಯೂರಿಟಿ, ಮೆಷಿನ್ ಲರ್ನಿಂಗ್ ಮುಂತಾದ ವಿಷಯಗಳಲ್ಲಿ ಮಾಡಬಹುದು. ಯಾವ ವಿಷಯದಲ್ಲಿ ನಿಮಗೆ ಹೆಚ್ಚಿನ ಆಸಕ್ತಿ ಮತ್ತು ಸ್ವಾಭಾವಿಕ ಪ್ರತಿಭೆಯಿದೆ ಎನ್ನುವುದನ್ನು ಗುರುತಿಸಿ, ಮುಂದಿನ ನಿರ್ಧಾರವನ್ನು ಮಾಡಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://youtu.be/AwlDno1YduQ. ಹೆಚ್ಚಿನ ಪ್ರಶ್ನೋತ್ತರಗಳಿಗೆ https://www.prajavani.net/education-career/guide ನೋಡಿ.

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್‌ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.inಕ್ಕೆ ಕಳಿಸಬಹುದು.

CMR UNIVERSITY
Private University Estd in Karnataka State by Act No. 45 of 2013
BENGALURU

Create The Future

Registrations Open CMRUAT | Providing opportunities to get scholarship worth 12 Crores

CMRU Accelerated Credits
STAY AHEAD OF THE COMPETITION
APPLY TODAY
to get trained and certified for FREE in niche courses
SCAN AND GET 25% OFF IN APPLICATION FEES

SCHOOL OF ARCHITECTURE
B.Arch.
SCHOOL OF ENGINEERING & TECHNOLOGY
B.Tech.
• CSE • CSE (AI & ML) • CSE(Data Science) • CE NEW
• CST NEW • IT • ECE
M.Tech. (For Regular and Professionals) • CSE • AI
Ph.D. CSE (AI & ML, Networking and Cloud Computing, Data Analytics, Cyber Security, Data Science and Internet of Things) • ECE • Mechanical Engineering
SCHOOL OF DESIGN
B.Des.
• Communication Design • Product Design
• Fashion Design • Interior Design
SCHOOL OF LIBERAL STUDIES
(Formerly School of Social Science & Humanities)
B.A. / B.A (Hons)* (Major + Minor)
• Psychology • English • Journalism • Economics
• Political Science • History • Sociology
• Media Studies • Travel & Tourism NEW
B.Sc. | Psychology
M.Sc. | Psychology • Clinical • Counselling • Human Resource Development and Management
Ph.D. | Psychology
SCHOOL OF ECONOMICS & COMMERCE
B.Com. / B.Com. (Hons.)*
• General • International Accounting & Finance
• Professional - CA Integrated • Data Science NEW
• Certified Management Accountant (US CMA) NEW
Ph.D. | Economics • Commerce
SCHOOL OF LEGAL STUDIES
B.A., LL.B. (Hons.) / B.B.A., LL.B. (Hons.)
LL.B.
LL.M. | Constitutional Law • Commercial Law
• Criminal Law NEW / Ph.D. | Law
SCHOOL OF SCIENCE & COMPUTER STUDIES
(Formerly School of Science Studies)
BCA / BCA (Hons)* • General • Cloud Computing
• Data Science • Game Development
B.Sc. | Sound Engineering • Visual Effects & Animation • Information Technology NEW
M.Sc. | Information Technology in Data Science NEW
MCA
Ph.D. | Computer Application
SCHOOL OF MANAGEMENT
BBA / BBA (Hons.)*
• General • Digital Marketing • Business Analytics
MBA with Dual Specialisation in • Marketing • HR
• Finance • Business Analytics • Digital Marketing
• Supply Chain Management
MBA | Business Analytics & Business Intelligence NEW
Executive MBA | Product Leadership
Ph.D. | Management
*Honours degree is 4 years and optional, subjected to government norms.

PGCET code: MBA (City Campus) - B150
MBA (OMBR Campus) - B149 | MBA (Lakeside Campus) - B395
MCA (OMBR Campus) - C527 | MCA (Lakeside Campus) - C521
CET codes: B.Tech. - E257 | B.Arch. - E245
We honour JEE, Comedk, and all National-level tests.

CELEBRATING 30 YEARS
CMRIT
CMR INSTITUTE OF TECHNOLOGY, BENGALURU.
A++ NAAC
NBA NATIONAL BOARD OF ACCREDITATION
nirf RANKED
CMR INSTITUTE OF TECHNOLOGY
Permanently affiliated to VTU | Approved by AICTE
Recognised by the Govt. of Karnataka | Accredited by NAAC with A++ grade NBA Accredited | NIRF Ranked.
B.E. | CSE | CSE (AI & ML) | AI & DS | AI & ML
CSE (Data Science) | ISE | ECE
MBA | MCA
Ph.D. | CSE | ECE | EEE | Mechanical | Civil
Physics | Mathematics | Chemistry
Business Administration | Computer Applications
B.E : CET code - E097
ComedK code - E032
PGCET code : MCA - C420MC
MBA - B151MB
www.cmrit.ac.in
admission@cmrit.ac.in
SCAN FOR DETAILS

+91 93429 00666
admissions@cmr.edu.in
www.cmr.edu.in
Lakeside Campus: Off Hennur-Bagalur Main Road, Chagalahatti, Bengaluru - 562 149
City Campus: #2, 3rd Cross, 6th A Main, HRBR Layout, Bengaluru - 560 043
OMBR Campus: No.5, Bhuvanagiri, OMBR Layout, Bengaluru - 560 043
CMRIT Campus: 132, AECS Layout, ITPL Main Road, Kundalahalli, Bengaluru - 560 037



ಸುಭಾಷಿತ

ನಾಲಿಗೆಯ ಮೇಲೆ ಇರುವ ಜೇನನ್ನು ನೋಡಿ ಮೋಸ ಹೋಗಬೇಡ. ಹೃದಯದಲ್ಲಿ ಇರುವ ವಿಷವನ್ನು ಗ್ರಹಿಸು.
-ಚಾಣಕ್ಯ

ಕೇಜ್ರಿವಾಲ್‌ಗೆ ಮಧ್ಯಂತರ ಜಾಮೀನು ಮಹತ್ವದ ಪಾಠ ಹೇಳಿದ ಆದೇಶ

ದೆಹಲಿ ಮುಖ್ಯಮಂತ್ರಿ ಹಾಗೂ ಆಮ್ ಆದ್ಮಿ ಪಕ್ಷದ ನಾಯಕ ಅರವಿಂದ ಕೇಜ್ರಿವಾಲ್ ಅವರಿಗೆ ಮಧ್ಯಂತರ ಜಾಮೀನು ಮಂಜೂರು ಮಾಡುವ ಮೂಲಕ ಸುಪ್ರೀಂ ಕೋರ್ಟ್ ಒಂದು ತಪ್ಪನ್ನು ಸರಿಪಡಿಸುವ ಕೆಲಸ ಮಾಡಿದೆ. ಜೊತೆಯಲ್ಲೇ, ಚುನಾವಣೆಯ ಅಭಿಯಾನಗಳಲ್ಲಿ ಭಾಗಿಯಾಗುವ ಅವರ ರಾಜಕೀಯ ಮತ್ತು ಪ್ರಜಾತಾಂತ್ರಿಕ ಹಕ್ಕನ್ನು ರಕ್ಷಿಸುವ ಕೆಲಸವನ್ನೂ ಮಾಡಿದೆ. ನ್ಯಾಯಾಲಯವು ಕೇಜ್ರಿವಾಲ್ ಅವರ ಬಂಧನದ ಹಿಂದಿನ ಕಾನೂನಿನ ಆಯಾಮಗಳನ್ನು ಹಾಗೂ ರಾಜಕೀಯ ಆಯಾಮಗಳನ್ನು ಪ್ರತ್ಯೇಕವಾಗಿಸಿದೆ. ಬಂಧನದ ಕಾನೂನು ಆಯಾಮಗಳ ಬಗ್ಗೆ ಕೋರ್ಟ್ ಯಾವುದೇ ತೀರ್ಮಾನ ಹೇಳಿಲ್ಲವಾದರೂ ತಮ್ಮ ಪಕ್ಷದ ಪರವಾಗಿ ಪ್ರಚಾರ ಕೈಗೊಳ್ಳುವ ಅವರ ಹಕ್ಕನ್ನು ನಿರಾಕರಿಸಲು ಆಗುವುದಿಲ್ಲ ಎಂಬುದನ್ನು ಅದು ಸ್ಪಷ್ಟಪಡಿಸಿದೆ. ಲೋಕಸಭಾ ಚುನಾವಣೆಯ ಮತದಾನ ಪ್ರಕ್ರಿಯೆ ಕೊನೆಗೊಳ್ಳುವ ದಿನವಾದ ಜೂನ್ 1ರವರೆಗೆ ಕೋರ್ಟ್ ಅವರಿಗೆ ಜಾಮೀನು ಮಂಜೂರು ಮಾಡಿದೆ. ಜಾಮೀನು ನೀಡುವ ಸಂದರ್ಭದಲ್ಲಿ ಒಂದಿಷ್ಟು ಷರತ್ತುಗಳನ್ನು ಕೂಡ ವಿಧಿಸಲಾಗಿದೆ. ಕೇಜ್ರಿವಾಲ್ ಅವರು ಮುಖ್ಯಮಂತ್ರಿ ಕಚೇರಿಗೆ ಭೇಟಿ ನೀಡುವಂತಿಲ್ಲ, ದಿನನಿತ್ಯದ ಕೆಲಸಗಳ ವಿಚಾರದಲ್ಲಿ ಯಾವುದೇ ಕಡತಕ್ಕೆ ಸಹಿ ಹಾಕುವಂತಿಲ್ಲ. ಅಂದರೆ, ಇಲ್ಲಿ ಜಾಮೀನು ದೊರೆತಿರುವುದು ಎಎಪಿ ನಾಯಕ ಕೇಜ್ರಿವಾಲ್ ಅವರಿಗೇ ವಿನಾ ದೆಹಲಿಯ ಮುಖ್ಯಮಂತ್ರಿ ಕೇಜ್ರಿವಾಲ್ ಅವರಿಗಲ್ಲ ಎನ್ನಬಹುದು.



ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಯ ಮಹತ್ವವನ್ನು ಕೋರ್ಟ್ ಸರಿಯಾಗಿಯೇ ಗುರುತಿಸಿದೆ

ಲೋಕಸಭಾ ಚುನಾವಣೆಯಲ್ಲಿ ಎಲ್ಲರಿಗೂ ನ್ಯಾಯಸಮ್ಮತವಾದ ಅವಕಾಶಗಳು ಸಿಗಬೇಕು ಎಂಬುದರ ಕಡೆ ಕೋರ್ಟ್‌ನ ಗಮನ ಇತ್ತು. ಕೇಜ್ರಿವಾಲ್ ಅವರಿಗೆ ಮಧ್ಯಂತರ ಜಾಮೀನು ನೀಡುವ ಮೂಲಕ ಕೋರ್ಟ್, ಅವರ ಬಂಧನ ಹಾಗೂ ಬಲವಂತವಾಗಿ ಅವರನ್ನು ಚುನಾವಣಾ ಕಣದಿಂದ ಹೊರಹಾಕಿದ್ದ ಕ್ರಮವು ಚುನಾವಣಾ ಕಣದ ಹದವನ್ನು ಕೆಡಿಸುತ್ತದೆ ಎಂಬುದನ್ನು ಗುರುತಿಸುವ ಕೆಲಸ ಮಾಡಿದೆ. ಅಷ್ಟರ ಮಟ್ಟಿಗೆ ಈ ತೀರ್ಮಾನವು ಕೇಜ್ರಿವಾಲ್ ಅವರ ಬಂಧನದ ಬಗ್ಗೆ, ಅದರಲ್ಲೂ ಮುಖ್ಯವಾಗಿ ಬಂಧಿಸಿದ ಸಂದರ್ಭದ ಬಗ್ಗೆ ಕೋರ್ಟ್‌ನ ಅಭಿಪ್ರಾಯ ಎನ್ನಬಹುದು. ಮತ ಚಲಾಯಿಸುವುದು ಹಾಗೂ ಚುನಾವಣಾ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು ಮೂಲಭೂತ ಹಕ್ಕು ಅಲ್ಲದಿರುವ ಕಾರಣ, ಕೇಜ್ರಿವಾಲ್ ಅವರಿಗೆ ಜಾಮೀನು ನೀಡುವುದು ರಾಜಕಾರಣಿಗಳಿಗೆ ವಿಶೇಷ ಸೌಲಭ್ಯ ಕಲ್ಪಿಸಿದಂತೆ ಆಗುತ್ತದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಮಂಡಿಸಿದ್ದ ವಾದವನ್ನು ಕೋರ್ಟ್ ಒಪ್ಪಿಲ್ಲ. ಹೆಚ್ಚು ಸಮಗ್ರವಾದ ಹಾಗೂ ಉದಾರವಾದಿಯಾದ ದೃಷ್ಟಿಕೋನವು ಸಮರ್ಥನೀಯ ಎಂದು ಕೋರ್ಟ್ ಹೇಳಿದೆ. ಏಕೆಂದರೆ, ಚುನಾವಣೆಯ ಕಾರಣದಿಂದಾಗಿ ಸೃಷ್ಟಿಯಾಗಿರುವ ಸಂದರ್ಭವು ಗಮನಾರ್ಹ ಎಂದು ಅದು ಹೇಳಿದೆ. ಕೇಜ್ರಿವಾಲ್ ಅವರು ಆರೋಪಗಳನ್ನು ಎದುರಿಸುತ್ತಿದ್ದರೂ, ಅವರು ಒಬ್ಬ ಮುಖ್ಯಮಂತ್ರಿ ಹಾಗೂ ಒಬ್ಬ ನಾಯಕ; ಅವರು ಮತ್ತೆ ಮತ್ತೆ ತಪ್ಪು ಮಾಡಿರುವ ವ್ಯಕ್ತಿ ಅಲ್ಲ ಎಂದು ಅದು ಹೇಳಿದೆ. 2022ರ ಆಗಸ್ಟ್‌ನಿಂದಲೂ ತನಿಖೆಯು ಬಾಕಿ ಇದೆ ಎಂಬುದನ್ನು ಕೂಡ ಕೋರ್ಟ್ ಉಲ್ಲೇಖಿಸಿದೆ.

ಚುನಾವಣೆಯಲ್ಲಿ ಭಾಗಿಯಾಗುವ ಹಕ್ಕನ್ನು ಕೋರ್ಟ್ ಗುರುತಿಸುವ ಕೆಲಸ ಮಾಡಿಲ್ಲದಿರಬಹುದು. ಆದರೆ ಅದು ಚುನಾವಣೆಯಲ್ಲಿ ಭಾಗಿಯಾಗುವುದರ ಮಹತ್ವವನ್ನು ಒತ್ತಿಹೇಳುವ ಕೆಲಸ ಮಾಡಿದೆ. ಕೇಜ್ರಿವಾಲ್ ಅವರು ತಮ್ಮ ಬಂಧನವನ್ನು ಪ್ರಶ್ನಿಸಿದ್ದಾರೆ. ಅದರ ಬಗ್ಗೆ ಕೋರ್ಟ್ ತನ್ನ ತೀರ್ಮಾನ ಹೇಳಬೇಕಿದೆ. ಈಗ ಅವರಿಗೆ ಚುನಾವಣೆಯಲ್ಲಿ ಪಾಲ್ಗೊಳ್ಳುವ ಸ್ವಾತಂತ್ರ್ಯವನ್ನು ಕಲ್ಪಿಸಬೇಕು ಎಂದು ಕೋರ್ಟ್ ತೀರ್ಮಾನ ನೀಡಿದೆ. ಪ್ರಜಾತಾಂತ್ರಿಕ ಹಕ್ಕುಗಳ ಬಗ್ಗೆ ವಾದಿಸಿದ್ದ ಇ.ಡಿ., ಕೇಜ್ರಿವಾಲ್ ಅವರಿಗೆ ಜಾಮೀನು ನೀಡಿದರೆ ಕ್ರಿಮಿನಲ್ ವ್ಯಕ್ತಿಗಳು ರಾಜಕೀಯಕ್ಕೆ ಸೇರುವುದನ್ನು ಉತ್ತೇಜಿಸುವ ಕೆಲಸ ಆಗುತ್ತದೆ ಎಂದು ಹೇಳಿತ್ತು. ಪ್ರಜಾತಾಂತ್ರಿಕ ಹಕ್ಕುಗಳ ಬಗ್ಗೆ, ರಾಜಕೀಯ ಮತ್ತು ಅದರ ಪ್ರಕ್ರಿಯೆಗಳ ಬಗ್ಗೆ ಚರ್ಚಿಸುವುದು ಇ.ಡಿ. ಕೆಲಸ ಅಲ್ಲ. ಇ.ಡಿ. ವಾದವನ್ನು ಕೋರ್ಟ್ ತಿರಸ್ಕರಿಸಿರುವುದು ಸರಿಯಾಗಿಯೇ ಇದೆ. ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಯ ಮಹತ್ವವನ್ನು, ಪ್ರಮುಖ ರಾಜಕಾರಣಿಗಳಿಗೆ ಚುನಾವಣೆಯಲ್ಲಿ ಭಾಗಿಯಾಗುವ ಹಕ್ಕು ನಿರಾಕರಿಸಿದರೆ ಅಂತಹ ಚುನಾವಣೆಯು ಮುಕ್ತವಾಗಿ, ನ್ಯಾಯಸಮ್ಮತವಾಗಿ ಇರುವುದಿಲ್ಲ ಎಂಬುದನ್ನು ಕೋರ್ಟ್ ಸರಿಯಾಗಿಯೇ ಗುರುತಿಸಿದೆ. ಕೇಜ್ರಿವಾಲ್ ಅವರಿಗೆ ಜಾಮೀನು ನೀಡಿರುವುದು ಪೂರ್ವನಿದರ್ಶನ ಆಗುವುದಿಲ್ಲ ಎಂದು ಅದು ಸ್ಪಷ್ಟಪಡಿಸಿದೆ. ಆದರೆ ಅದು ಬಹಳ ಮುಖ್ಯವಾದ ಪ್ರಜಾತಾಂತ್ರಿಕ ತತ್ವವನ್ನು ಮತ್ತೆ ಸ್ಪಷ್ಟಪಡಿಸುವ ಕೆಲಸ ಮಾಡಿದೆ. ವಿರೋಧ ಪಕ್ಷಗಳು ಇಲ್ಲದ ಅಥವಾ ವಿರೋಧ ಪಕ್ಷಗಳ ಬಲ ಕುಂದಿದ ಸಂದರ್ಭದ ಚುನಾವಣೆಯ ವಿರುದ್ಧದ ನಿರ್ಣಯ ಇದು.

ಎಳೆಯ ಮಕ್ಕಳ ಕೈಗೆ ಕಂಪ್ಯೂಟರ್ ಅಥವಾ ಮೊಬೈಲಿನ ಕೀಲಿಮಣೆ ಕೊಟ್ಟು ಕೂಡಿಸುವುದು ಎಷ್ಟು ಸರಿ?

ಡಿಜಿಟಲ್ ಶಿಕ್ಷಣ ಮತ್ತು ಕಲಿಕೆಯ ವಿಧಾನ

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ನಮ್ಮ ಪಕ್ಕದ ಫ್ಲ್ಯಾಟ್‌ಗೆ ಹೊಸದಾಗಿ ಬಂದಿರುವ ದಂಪತಿ ಲಿಫ್ಟ್‌ನಲ್ಲಿ ಸಿಕ್ಕಾಗ, 'ನಮಗೆ ಇಬ್ಬರು ಮಕ್ಕಳು. ಹೈದರಾಬಾದ್‌ನಿಂದ ಇಲ್ಲಿಗೆ ಬಂದಿದ್ದೇವೆ. ಮಗಳನ್ನು ಪ್ರಿ ನರ್ಸರಿಗೆ, ಮಗನನ್ನು ಒಂದನೇ ತರಗತಿಗೆ ಸೇರಿಸಬೇಕು, ಸಹಾಯ ಮಾಡುತ್ತೀರಾ?' ಎಂದರು. ನನಗೆ ಗೊತ್ತಿರುವ ಕೆಲವು ಉತ್ತಮ ಶಾಲೆಗಳ ಹೆಸರು ಹೇಳಿದೆ. 'ಅಲ್ಲಿ ಹೊಸ ರೀತಿಯಲ್ಲಿ ಪಾಠ ಹೇಳಿಕೊಡುತ್ತಾರಾ?' ಎಂದು ಪ್ರಶ್ನಿಸಿದರು. 'ಏನು ಹಾಗಂದರೆ?' ಎಂದು ಕೇಳಿದಾಗ, 'ನಾವೆಲ್ಲ ಕಲಿತ ಹಾಗೆ ಪೆನ್ನು, ಪೇಪರ್‌ನಲ್ಲಿ ಪಾಠ ಹೇಳಿಕೊಡುವ ಶಾಲೆಗಳು ನಮಗೆ ಬೇಡ. ಕಂಪ್ಯೂಟರ್, ಲ್ಯಾಪ್‌ಟಾಪ್, ಟ್ಯಾಬ್, ಇಂಟರ್ನೆಟ್, ರೋಬಾಟ್ ಬಳಸಿ ಕಲಿಸುವ ಶಾಲೆಗಳಿದ್ದರೆ ಹೇಳಿ' ಎಂದರು. 'ಅಂಥ ಶಾಲೆಗಳಲ್ಲೆಲ್ಲ ಲಕ್ಷಗಟ್ಟಲೆ ಫೀಸ್ ಇರುತ್ತದೆ, ಕಟ್ಟಲು ಸಾಧ್ಯವೇ?' ಎಂದದ್ದಕ್ಕೆ 'ಕ್ವಾಲಿಟಿ ಎಜುಕೇಶನ್ ಬೇಕು ಅಂದ್ರೆ ಕಟ್ಟಲೇಬೇಕಲ್ವಾ ಸರ್, ಕಂಪನಿಯಲ್ಲಿ ಲೋನ್ ತೆಗೀತೀವಿ' ಎಂದರು.

'ಮಕ್ಕಳು ಸೇರುತ್ತಿರುವುದು ಪ್ರೈಮರಿ ಮತ್ತು ಪ್ರಿ ಪ್ರೈಮರಿ ವಿಭಾಗಗಳಿಗಲ್ಲವೇ? ಅವರು ಬರೆಯುವುದು, ಓದುವುದನ್ನು ಕಲಿಯಲು ಪುಸ್ತಕ, ಪೆನ್ನು, ಪೇಪರ್ ಬೇಕಲ್ಲವೇ?' ಎಂದದ್ದಕ್ಕೆ 'ಅದೆಲ್ಲ ಹಳೆಕಾಲ ಆಯಿತಲ್ಲ ಸರ್, ಅದನ್ನು ಮಾಡಿ ನಾವೆಲ್ಲ ಏನು ಸಾಧಿಸಿದ್ದೇವೆ? ಬದಲಾದ ಕಾಲಕ್ಕೆ ತಕ್ಕಂತೆ ಮಕ್ಕಳು ಕಲಿಯಬೇಕಲ್ಲವೇ?' ಎಂದು ನನ್ನನ್ನು ತಿದ್ದುವ ರೀತಿಯಲ್ಲಿ ಮಾತನಾಡಿದರು. ಇದು ಯಾಕೋ ಅತಿಯಾಯಿತು ಎಂದೆನಿಸಿದರೂ ಅವರನ್ನು ನಿರಾಸೆಗೊಳಿಸುವುದು ಬೇಡ ಎಂದುಕೊಂಡು, 'ಅಂಥ ಶಾಲೆಗಳ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲ, ಗೊತ್ತಾದ ನಂತರ ತಿಳಿಸುತ್ತೇನೆ' ಎಂದು ಮಾತು ಮುಗಿಸಿದೆ.

ಅಬ್ಬಬ್ಬಾ! ಕೆಲವು ಪೋಷಕರ ಮಾತು ಮತ್ತು ಚಿಂತನೆ ಅಚ್ಚರಿ ಉಂಟುಮಾಡುವಂತೆ ಇರುತ್ತವಾದರೂ, ಕೋಟ್ಯಂತರ ರೂಪಾಯಿ ಬಂಡವಾಳ ಹೂಡಿರುವ, ಯಂತ್ರಗಳ ಮೂಲಕ ಪಾಠ ಮಾಡಿಸುವ, ವಿದೇಶ ಪ್ರವಾಸ ಏರ್ಪಡಿಸುವ ಕೆಲವು ಪ್ರತಿಷ್ಠಿತ ಶಾಲೆಗಳು ಹೊಸ ತಲೆಮಾರಿನ ಪೋಷಕರ ಮುಂದೆ ಡಿಜಿಟಲ್ ಶಿಕ್ಷಣದ ದೊಡ್ಡ ಮತ್ತು ವೈವಿಧ್ಯಮಯ ಆಕರ್ಷಣೆಗಳನ್ನೇ ಇಟ್ಟಿರುವುದು ತಿಳಿಯುತ್ತದೆ. ದಾಖಲಾತಿಗಾಗಿ ಯಾವುದೇ ಶಾಲೆ ಕಾಲೇಜಿಗೆ ಹೋದರೂ ಅಲ್ಲಿನವರು, 'ನಾವು ಇಂಥ ಸಿಲಬಸ್ ಪಾಠ ಮಾಡುತ್ತೇವೆ, ಇಂಥವರಿಂದ ಪಾಠ ಮಾಡಿಸುತ್ತೇವೆ, ಸಾಫ್ಟ್‌ವೇರ್, ಹಾರ್ಡ್‌ವೇರ್ ಟ್ರೈನಿಂಗ್ ಕೊಡುತ್ತೇವೆ, ವಿಶೇಷ ಕೋರ್ಸ್‌ಗಳು ನಮ್ಮಲ್ಲಿವೆ, ಆನ್‌ಲೈನ್- ಆಫ್‌ಲೈನ್ ಎರಡರಲ್ಲೂ ಪಾಠ ಮಾಡುತ್ತೇವೆ, ಅಡ್ಮಿಶನ್ ಟೈಮಿನಲ್ಲೇ ಪ್ರತಿಯೊಬ್ಬರಿಗೂ ಲ್ಯಾಪ್‌ಟಾಪ್ ಕೊಡುತ್ತೇವೆ, ಅದರಲ್ಲಿ ಸಿಲಬಸ್, ಕೊಶ್ಚನ್ ಪೇಪರ್, ನೋಟ್ಸ್, ವಿಡಿಯೊಗಳು, ಪ್ರಯೋಗ ಮಾಡುವ ವಿಧಾನ ಎಲ್ಲವನ್ನೂ ಅಪ್‌ಲೋಡ್ ಮಾಡಿಬಿಟ್ಟಿರುತ್ತೇವೆ. ಮಾಕ್ ಟೆಸ್ಟ್ (ಅಣಕು ಪರೀಕ್ಷೆ), ಪ್ರೊಫೆಷನಲ್ ಕೋರ್ಸ್‌ಗಳ ತರಬೇತಿ ಎಲ್ಲವೂ ಲ್ಯಾಪ್‌ಟಾಪ್‌ನಲ್ಲಿಯೇ ನಡೆಯುತ್ತವೆ. ಶಿಕ್ಷಣ ಇಲಾಖೆಯು ನಿಗದಿ ಮಾಡಿರುವ ಸಿಲಬಸ್‌ನ ಹೊರತಾಗಿ ಆಧುನಿಕ ತಂತ್ರಜ್ಞಾನಕ್ಕೆ ಸಂಬಂಧಿಸಿದ ಕೋರ್ಸ್‌ಗಳೂ ನಮ್ಮಲ್ಲಿವೆ' ಎಂದೆಲ್ಲ ಆಕರ್ಷಣೀಯವಾಗಿ ಮಾತನಾಡುತ್ತಾರೆ.

'ಡೀಟೇಲ್ ಆಗಿ ತಿಳ್ಕೊಬೇಕಲ್ಲ, ಪುಸ್ತಕವಿದ್ದರೆ ಕೊಡಿ' ಎಂದರೆ, 'ನಿಮ್ಮ ಫೋನ್ ನಂಬರಿಗೆ, ನೀವು ನೀಡಿದ ಇ- ಮೇಲ್ ಅಡ್ರೆಸ್‌ಗೆ ಆಗಲೇ ಲಿಂಕ್ ಕಳಿಸಿದ್ದೇವೆ, ಅಲ್ಲಿಯೇ ನೋಡಿಕೊಳ್ಳಿ' ಎಂದು ಡಿಜಿಟಲ್ ಮಾದರಿಯಲ್ಲಿ ವ್ಯವಹರಿಸುವ ಅನಿವಾರ್ಯಕ್ಕೆ ನಮ್ಮನ್ನು ದೂಡಿಬಿಡುತ್ತಾರೆ. ಹೇಳಿದ್ದೆಲ್ಲವನ್ನೂ ದೊಡ್ಡ ದೊಡ್ಡ ಡಿಜಿಟಲ್ ಪರದೆಗಳ ಮೇಲೆ ತೋರಿಸಿ ಮರುಳು ಮಾಡಿಬಿಡುತ್ತಾರೆ.

ಕೆಲವು ಶಾಲೆಗಳು ಪ್ರವೇಶ ಪರೀಕ್ಷೆ ನಡೆಸಲು ಮುಂದಾಗುತ್ತವೆ. ಇನ್ನು ಕೆಲವು ಶಾಲೆಗಳು ಕೌನ್ಸೆಲಿಂಗ್ ಹೆಸರಿನಲ್ಲಿ ಮಕ್ಕಳ ಮಾನಸಿಕ ಮತ್ತು ಕಲಿಕಾ ಕ್ಷಮತೆಯ ಬಗ್ಗೆ ವಿಶ್ಲೇಷಣೆ ನಡೆಸಿ, ಮಗು ಏನನ್ನು ಸಮರ್ಥವಾಗಿ ಕಲಿಯಬಹುದು ಎಂದು ಸರ್ಟಿಫಿಕೇಟ್ ನೀಡುವವರೆಗೂ ಮುಂದುವರಿಯುತ್ತವೆ. ಶಾಲೆಗೆ ಸೇರಿಸಿಕೊಳ್ಳುವುದಕ್ಕೂ ಮುಂಚೆ ಇಷ್ಟೆಲ್ಲ ಪರೀಕ್ಷೆ ಮಾಡುತ್ತಾರೆ ಎಂದರೆ ಇದು ಸ್ಟ್ಯಾಂಡರ್ಡ್ ಶಾಲೆಯೇ ಇರಬೇಕು ಎಂಬ ಭಾವನೆ ಪೋಷಕರ ಮನಸ್ಸಿನಲ್ಲಿ ಮೂಡುತ್ತದೆ.

ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು ಎಂಬ ಪರಂಪರೆಯಲ್ಲಿ ಕಲಿತ ಕೋಟ್ಯಂತರ ಜನ, ಸರ್ಕಾರಿ ಶಾಲೆಗಳಲ್ಲಿ, ಮಾತೃಭಾಷೆಯ ಮಾಧ್ಯಮದಲ್ಲಿ ಕಲಿತು ಜಗತ್ತೇ ನಿಬ್ಬೆರಗಾಗುವ ರೀತಿಯಲ್ಲಿ ಸಾಧನೆ ಮಾಡಿದ್ದಾರೆ. ವಿಶ್ವದ ಪ್ರಖ್ಯಾತ ಸಾಫ್ಟ್‌ವೇರ್ ಕಂಪನಿಗಳ ನೇತೃತ್ವ ವಹಿಸಿರುವ ಭಾರತೀಯರಿಗೆ ಸಾಧಕರ ಪಟ್ಟಿಯಲ್ಲಿ ಪ್ರಮುಖ ಸ್ಥಾನ ಸಿಗುತ್ತಿದೆ. ದೇಶವಿದೇಶಗಳ ಉನ್ನತ ಸಂಸ್ಥೆಗಳ ಚುಕ್ಕಾಣಿ ಹಿಡಿದಿರುವವರೆಲ್ಲ ಪ್ರಾಥಮಿಕ ಶಿಕ್ಷಣದ ಸಹಜ ಕಲಿಕಾ ಕ್ರಮಗಳಿಂದ ದೂರವಿದ್ದವರಲ್ಲ. ಆದರೆ ಇವರು ನೇತೃತ್ವ ವಹಿಸಿರುವ ಕಂಪನಿಗಳ ಉತ್ಪನ್ನಗಳನ್ನು ಬಳಸಿ, ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನು ಉಂಟು ಮಾಡಬಹುದು ಎಂಬ ಹಪಹಪಿಗೆ ಬಿದ್ದಿದ್ದಾರೆ ಕೆಲವು ಶಿಕ್ಷಣ ತಜ್ಞರು. ಹೀಗಾಗಿ, ವಿಶ್ವವಿದ್ಯಾಲಯಗಳು, ಉನ್ನತ ಶಿಕ್ಷಣ ಸಂಸ್ಥೆಗಳು ಇಂದಿನ ದಿನಮಾನದ ಕಲಿಕೆಯಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಬಳಕೆಯನ್ನು ಕಡ್ಡಾಯಗೊಳಿಸಿಬಿಟ್ಟಿವೆ.

ಈ ಮಾದರಿಯನ್ನು ಅನುಸರಿಸುವ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ರೇಟಿಂಗ್ ಹಾಗೂ ರ್‍ಯಾಂಕಿಂಗ್ ದೊರಕುತ್ತಿದೆ. ಇದನ್ನೇ ಅನುಕರಿಸಲು ಹೊರಟಿರುವ ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಾಲೆಗಳು ಮಕ್ಕಳ ಕೈಯಲ್ಲಿ ಸಹಜವಾಗಿ ಇರಬೇಕಾದ ಆಟಿಕೆ, ಬಳಪ, ಹಾಳೆ, ಸ್ಲೇಟಿನ ಬದಲಾಗಿ ಕಣ್ಣಿನ ದೃಷ್ಟಿ ಮಂದ ಮಾಡುವ, ಬೆರಳ ತುದಿಗಳನ್ನು ನೋಯಿಸುವ ಪ್ರಖರ ಬೆಳಕಿನ ಕಂಪ್ಯೂಟರ್ ತೆರೆ ಮತ್ತು ಕೀಲಿಮಣೆಗಳನ್ನು ನೀಡುತ್ತಿವೆ. ಇದನ್ನು ಕಂಡು, ಜಗತ್ತೇ ತಮ್ಮ ಮಕ್ಕಳ ಕೈಯಲ್ಲಿದೆ ಎಂದು ಬೀಗುವ ಲಕ್ಷಾಂತರ ಪೋಷಕರು ನಮ್ಮ ನಡುವೆ ಇದ್ದಾರೆ.

ಬೆಂಗಳೂರಿನ ಕೆಲವು ಪ್ರತಿಷ್ಠಿತ ಶಾಲೆಗಳಲ್ಲಿ, ಕೇರಳದ ಕಾಲೇಜುಗಳಲ್ಲಿ ಮಹಿಳಾ ವೇಷದ ರೋಬಾಟ್‌ಗಳನ್ನು ಬಳಸಿ ಪಾಠ ಮಾಡಿಸಲಾಗುತ್ತಿದೆ. ವಿದ್ಯಾರ್ಥಿಗಳು ಕೇಳುವ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸುತ್ತಿರುವ ರೋಬೊ ಶಿಕ್ಷಕಿಯರು ಅಪಾರ ಜನಪ್ರಿಯತೆಯನ್ನೂ ಗಳಿಸಿದ್ದಾರೆ. ವಿದ್ಯಾರ್ಥಿಗಳ ಕಣ್ಣಲ್ಲಿ ಕಣ್ಣಿಟ್ಟು, ಅವರು ಕಲಿಯುತ್ತಿದ್ದಾರೋ ಇಲ್ಲವೋ ಎಂಬುದನ್ನು ಅರಿತುಕೊಂಡು, ಅರ್ಥವಾಗದಿದ್ದರೆ ಇನ್ನೊಮ್ಮೆ ಮತ್ತೊಮ್ಮೆ ಹೇಳಿಕೊಟ್ಟು, ಹುರಿದುಂಬಿಸಿ ಆತ್ಮವಿಶ್ವಾಸ ತುಂಬುವ ಶಿಕ್ಷಕ- ಶಿಕ್ಷಕಿಯರ ಜಾಗದಲ್ಲಿ ಯಂತ್ರಗಳನ್ನು ಕೂರಿಸುವ ಕಾರ್ಯ ಎಲ್ಲೆಡೆ ಹೆಚ್ಚುತ್ತಿದೆ.

ಯಾಂತ್ರಿಕ ಬುದ್ಧಿಮತ್ತೆ (ಯಾಂಬು) ಚಾಲ್ತಿಗೆ ಬಂದ ಮೇಲಂತೂ ಎಲ್ಲೆಡೆ ಅದರದೇ ಸದ್ದು. ಚಾಟ್‌ಬಾಟ್‌ಗಳನ್ನು (ವಾಚಸ್ಪತಿ) ಬಳಸಿ ಪದ್ಯ, ಪ್ರಬಂಧ ರಚನೆ, ಪಠ್ಯಪುಸ್ತಕದ ಕೆಲವು ಸಮಸ್ಯೆಗಳಿಗೆ ಉತ್ತರ ಕಂಡುಕೊಂಡ ಕೆಲವರು 'ಇದು ಎಲ್ಲವನ್ನೂ ಮಾಡಿ ಮುಗಿಸುತ್ತದೆ, ಮನುಷ್ಯರೇ ಇನ್ನು ಮುಂದೆ ಬೇಕಾಗುವುದಿಲ್ಲ' ಎನ್ನುವ ಅತಿರೇಕದ ಮಾತನಾಡಿದ್ದಾರೆ. ಶಿಕ್ಷಣದಲ್ಲಿ ತಂತ್ರಜ್ಞಾನ ಎಷ್ಟೇ ಅನ್ವಯಗೊಳ್ಳಲಿ, ಅದು ಶಿಕ್ಷಕರ ಜಾಗವನ್ನು ಸಂಪೂರ್ಣವಾಗಿ ತೆಗೆದುಕೊಳ್ಳಲಾರದು. ಕಲಿಕೆಯ ವಿಧಾನಗಳು ಎಷ್ಟೇ ಬದಲಾದರೂ ಬಹುತೇಕ ನಿರ್ಣಾಯಕ ಪರೀಕ್ಷೆಗಳು ಪೆನ್ನು, ಪೇಪರ್ ಬಳಸಿಯೇ ನಡೆಯುತ್ತಿವೆ.

ಸರಿಯಾದ ಅಕ್ಷರ ಜ್ಞಾನವಿಲ್ಲದ, ಪದಬಂಧ, ವಾಕ್ಯಬಂಧ ಅರಿಯದ ಕೋಟ್ಯಂತರ ಮಕ್ಕಳು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿದ್ದಾರೆ. ಹೀಗಿರುವಾಗ, ಕೈಯಿಂದ ಬರೆಯುವುದನ್ನೇ ನಿಲ್ಲಿಸಿ ಎಳೆಯ ಮಕ್ಕಳ ಕೈಗೆ ಕಂಪ್ಯೂಟರ್ ಅಥವಾ ಮೊಬೈಲಿನ ಕೀಲಿಮಣೆ ಕೊಟ್ಟು ಕೂಡಿಸುವುದು ಎಷ್ಟು ಸರಿ? ಮುಂಬರುವ ದಿನಗಳಲ್ಲಿ ನಿರ್ಣಾಯಕವಾದ ಎಲ್ಲ ಪರೀಕ್ಷೆಗಳನ್ನೂ ಆನ್‌ಲೈನ್ ಅಥವಾ ಕಂಪ್ಯೂಟರ್ ನೆಟ್‌ವರ್ಕ್ ಬಳಸಿಯೇ ನಡೆಸಲು ನಿರ್ಧರಿಸಿದರೆ, ಕಂಪ್ಯೂಟರನ್ನೇ ಕಾಣದ, ಸರಿಯಾದ ಕಟ್ಟಡ, ವಿದ್ಯುತ್ ಸಂಪರ್ಕ, ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ, ಶಾಲೆಗೆ ಬರಲು ರಸ್ತೆ, ಅಗತ್ಯಕ್ಕೆ ತಕ್ಕಷ್ಟು ಶಿಕ್ಷಕರಿಲ್ಲದ ಸಾವಿರಾರು ಹಳ್ಳಿಗಳ ವಿದ್ಯಾರ್ಥಿಗಳ ಗತಿ ಏನು?

ವೈದ್ಯಕೀಯ ಶಿಕ್ಷಣದ ಪ್ರವೇಶಕ್ಕಾಗಿ ನಡೆಯುವ 'ನೀಟ್'ಗೆ ಅಗತ್ಯವಾದ ತರಬೇತಿಯು ನಗರದ ವಿದ್ಯಾರ್ಥಿಗಳಿಗೆ ಸಿಗುವಷ್ಟು ಸುಲಭವಾಗಿ ಗ್ರಾಮೀಣ ವಿದ್ಯಾರ್ಥಿಗಳಿಗೆ ದೊರಕುತ್ತಿದೆಯೇ? ಸಮಗ್ರ ಮತ್ತು ಪಾರಂಪರಿಕ ಶಿಕ್ಷಣ ನೀಡುವ ಸಲುವಾಗಿ ಹೊಸ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸಿದ್ದೇವೆ ಎಂದು ಹೇಳುತ್ತಿರುವವರು ಈ ಅಪಸವ್ಯದ ಬಗ್ಗೆ ಏಕೆ ಜಾಣ ಕಿವುಡು ಮತ್ತು ಜಾಣ ಕುರುಡುತನ ಪ್ರದರ್ಶಿಸುತ್ತಿದ್ದಾರೆ? ವಿದೇಶಗಳ ಲಕ್ಷಾಂತರ ಶಾಲೆಗಳು ಮಕ್ಕಳಿಗೆ ಅನುಕೂಲವಾಗುವ ರೀತಿಯಲ್ಲಿ ಪಠ್ಯಕ್ರಮ ರೂಪಿಸಿ, ಕಡಿಮೆ ಯಂತ್ರ ಮತ್ತು ಹೆಚ್ಚು ನೈಜ ಶಿಕ್ಷಕರನ್ನೇ ಬಳಸಿಕೊಂಡು ಶೈಕ್ಷಣಿಕ ಅಭಿವೃದ್ಧಿ ಸಾಧಿಸುತ್ತಿವೆ. ಇದು ನಮಗೆ ಮಾದರಿಯಾಗಬೇಕಲ್ಲವೇ?

ಚುರುಮುರಿ

ಫರ್‌ವಾಪ್ಸಿ

• ಸುಮಂಗಲಾ

'ರಾಹುಲಣ್ಣ ಚುನಾವಣೆದಾಗೆ ಎರಡೂ ಕಡೆ ಸೋತಮ್ಯಾಗೆ ಎಲ್ಲಿ ಹೋಗತಾನೆ ಅಂತ ಗೊತ್ತೈತೇನ್?' ಬೆಕ್ಕಣ್ಣ ಮುಗುಮ್ಮಾಗಿ ಕೇಳಿದಾಗ ಗೊತ್ತಿಲ್ಲವೆಂದು ತಲೆಯಲ್ಲಾಡಿಸಿದೆ.

'ನಮ್ ಶಾ ಅಂಕಲ್ಲು ಅವಂಗ ಇಟಲಿ ವಿಮಾನದ ಟಿಕೆಟ್ ತೆಗೆಸಿಟ್ಟಾರೆ. ಬರೀ ಹೋಗಾಕೆ ಮಾತ್ರ! ವಾಪಸು ಬರಂಗಿಲ್ಲ... ಅಂವಾ ಅಲ್ಲೇ ಸೆಟಲ್ ಆಗಲಿ ಅಂತ ಶಾ ಅಂಕಲ್ಲು ಹುಕುಂ ಹೊರಡಸ್ಯಾರೆ' ಎಂದು ಮೀಸೆಯಂಚಿನಲ್ಲಿ ನಕ್ಕಿತು.

'ಅಂವಾ ಎದಕ್ಕ ಇಟಲಿಗೆ ಹೋಗತಾನಲೇ? ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅಲ್ಲಿ ಚುನಾವಣೆದಾಗೆ ಸೋತರೆ ಭಾರತಕ್ಕೆ ಹೋಗಿ ಸೆಟಲ್ ಆಗಪಾ ಅಂತ ಅಲ್ಲಿಯ ಮಂದಿ ವಾಪಸ್ ಕಳಿಸತಾರೇನು? ಕಮಲಾ ಹ್ಯಾರಿಸ್ ಅಮೆರಿಕದಾಗೆ ಚುನಾವಣೆಯಲ್ಲಿ ಸೋತರೆ ಭಾರತಕ್ಕೆ ಬಂದು ಸೆಟಲ್ ಆಗತಾರೇನು?'

'ಅವರೆಲ್ಲ ಭಾಳ ಹಿಂದೇನೆ ಆ ದೇಶಗಳಿಗೆ ಹೋಗಿ ಸೆಟಲ್ ಆಗಿ, ಭಾರತದ ಪತಾಕೆ ಹಾರಿಸಲಾಕೆ ಹತ್ಯಾರೆ. ರಾಹುಲಣ್ಣಂಗೆ ಇಟಲಿ ನಂಟೈತಿ, ಹಂಗಾಗಿ ಅಂವನ್ನ ಅಲ್ಲಿಗೇ ಕಳಿಸಬಕು ಅಂತ ಶಾ ಅಂಕಲ್ಲು ಹೇಳ್ಯಾರೆ' ಎಂದು ಮತ್ತೊಂದು ವಿತಂಡವಾದವನ್ನು ಮುಂದಿಟ್ಟಿತು.

'ರಾಹುಲಣ್ಣ ಇಲ್ಲೇ ಹುಟ್ಟಿ, ಬೆಳೆದಾನ. ನೀ ಎಷ್ಟ್ ಭಾರತೀಯ ಅದೀಯೋ ಅಂವನೂ ಅಷ್ಟೇ ಭಾರತೀಯ ಅದಾನ'.

'ನಾ ಜಾಸ್ತಿ ಭಾರತೀಯ ಅದೀನಿ. ನಮ್ಮವ್ವ ಅಚ್ಚಗನ್ನಡದಾಗೆ ಮ್ಯಾಂವ್ ಅನ್ನತಾಳೆ, ಸೋನಿಯಾ ಗಾಂಧಿ ಹಂಗ ಇಟಲಿಯಾಕಿ ಅಲ್ಲ' ಎಂದಿತು ಕೋಪದಿಂದ.

'ಸೋನಿಯಾನೂ ಪಕ್ಕಾ ಹಿಂದಿವಳಗೆ ಅಚ್ಛಾ ಹೈ ಅನ್ನತಾರೆ' ಎಂದೆ.

'ಅಚ್ಛಾ ಹೈ, ಅಚ್ಛೇ ದಿನ್ ಇವೆಲ್ಲ ನಮ್ ಮೋದಿಮಾಮನ ನುಡಿಮುತ್ತು, ಆಕಿ ಇಟಾಲಿಯನ್ ಭಾಷೆವಳಗೆ ಮೋಲ್ಟೊ ಬೆನೆ ಅಂತಾರಷ್ಟೆ' ಬೆಕ್ಕಣ್ಣ ಮತ್ತೆ ಗುರುಗುಟ್ಟಿತು.

'ಅಲ್ಲಲೇ... ರಾಹುಲಣ್ಣನನ್ನ ಇಟಲಿಗೆ ಕಳಿಸೋ ವಿಚಾರ ಆಮೇಲೆ. ಮೊದ್ಲು ವಿದೇಶದೊಳಗೆ ತಲೆತಪ್ಪಿಸಿಕೊಂಡಾನಲ್ಲ ಹಾಸನದ ಕುವರ, ಅವನ ಫರ್‌ವಾಪ್ಸಿ ಮಾಡಾಕೆ ನಿಮ್ಮ ಶಾ ಅಂಕಲ್ಲಿಗೆ ಹೇಳಲೆ' ಎಂದು ಕಿಚಾಯಿಸಿದೆ. ಬೆಕ್ಕಣ್ಣ ಮರುಮಾತಾಡದೆ ಬಾಲಮುದುರಿ ಕೂತಿತು.

ದಿನದ ಟ್ವೀಟ್

ಗುಣಮಟ್ಟ ಮುಖ್ಯವಾಗಲಿ

ಹಳೆಯ ಕಟ್ಟಡಗಳ ವಿನ್ಯಾಸ ಕಣ್ಣಿಗೆ ಮುದ ನೀಡದಿರಬಹುದು. ಆದರೆ ಎಂತಹ ಮಳೆ, ಬಿರು ಬಿಸಿಲು, ಗಾಳಿ ಬಂದರೂ ತಡೆದುಕೊಳ್ಳುವ ವೈಶಿಷ್ಟ್ಯವನ್ನು ಆ ಕಟ್ಟಡಗಳು ಹೊಂದಿರುತ್ತಿದ್ದವು. ಆದರೆ ನಮಗೆ ಅದು ಬೇಕಿಲ್ಲ, ಹೊರಾಂಗಣ ವಿನ್ಯಾಸವೇ ಮುಖ್ಯ ಮತ್ತು ಅದರ ಆಧಾರದ ಮೇಲೆಯೇ ತುಲನೆ. ಒಳಗಿನ ಹುಳುಕು ಬೇಡ. ಹಾಗಾಗಿ, ಟರ್ಮಿನಲ್ 2 (ಟಿ2) ಸೇರಿದಂತೆ ಹೊಸ ಏರ್‌ಪೋರ್ಟ್‌ಗಳು ಮಳೆಗೆ ಸೋರುತ್ತಿವೆ.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ

ಕೋವಿಡ್ ನಿಮ್ಮ ಉದ್ಯೋಗದ ಮೇಲೆ, ವೃತ್ತಿಯ ಮೇಲೆ ಪರಿಣಾಮ ಉಂಟುಮಾಡಿತೇ? ನಿರ್ಮಲಾ ಸೀತಾರಾಮನ್ ಅವರ ನೇತೃತ್ವದಲ್ಲಿ ಆರ್ಥಿಕ ಕಾರ್ಯಪಡೆಯೊಂದನ್ನು ರಚಿಸುತ್ತಿರುವುದಾಗಿ ಪ್ರಧಾನಿಯವರು ಲಾಕ್‌ಡೌನ್‌ಗೂ ಮೊದಲು ಘೋಷಿಸಿದ್ದರು. ಅದು ಭಾಗೀದಾರರ ಜೊತೆ ಮಾತುಕತೆ ನಡೆಸಿ, ಉದ್ಯೋಗಗಳನ್ನು ರಕ್ಷಿಸಲು, ಆರ್ಥಿಕ ಸವಾಲುಗಳನ್ನು ಎದುರಿಸಲು ನೆರವಾಗಬೇಕಿತ್ತು. ಅದು ಒಂದೇ ಒಂದು ಸಭೆ ನಡೆಸಿದ್ದಕ್ಕೂ ಆಧಾರ ಇಲ್ಲ.

ಜುಗಲ್ ಆರ್.ಪಿ. ಪತ್ರಕರ್ತ

25 ವರ್ಷಗಳ ಹಿಂದೆ

ಗುರುವಾರ, 13-5-1999

• **ರಾಜೀವ್ ಹತ್ಯೆ: ಖುಲಾಸೆಯಾದ 19 ಜನರ ಬಿಡುಗಡೆ**

ಚೆನ್ನೈ, ಮೇ 12 (ಯುಎನ್‌ಐ, ಪಿಟಿಐ)– ರಾಜೀವ್ ಗಾಂಧಿ ಹತ್ಯೆ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನಿಂದ ಖುಲಾಸೆಯಾದ ಎಲ್ಲಾ 19 ಮಂದಿಯನ್ನು ಇಂದು ಅವರಿದ್ದ ಸೆರೆಮನೆಗಳಿಂದ ಬಿಡುಗಡೆ ಮಾಡಲಾಯಿತು.

ಈ ಪೈಕಿ ಭಾರತೀಯರನ್ನು ಯಾವುದೇ ನಿರ್ಬಂಧವಿಲ್ಲದೆ ಬಂಧಮುಕ್ತಗೊಳಿಸಲಾಯಿತು. ಆದರೆ ಶ್ರೀಲಂಕಾಕ್ಕೆ ಸೇರಿದವರನ್ನು ವೆಲ್ಲೂರಿನಲ್ಲಿರುವ ವಿಶೇಷ ಶಿಬಿರಕ್ಕೆ ಕಳುಹಿಸಲಾಯಿತು ಎಂದು ಸೆರೆಮನೆ ಮೂಲಗಳು ತಿಳಿಸಿವೆ.

• **ವಿದೇಶ ಪ್ರವಾಸಕ್ಕೆ ಐಎಎಸ್ ಅಧಿಕಾರಿಗಳ ದಂಡು**

ಬೆಂಗಳೂರು, ಮೇ 12– ಅಧಿಕಾರದ ಅವಧಿ ಮುಗಿಯುತ್ತಾ ಬಂದಂತೆ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಮತ್ತು ಅವರ ಸಂಪುಟದ ಸಹೋದ್ಯೋಗಿಗಳು ವಿದೇಶ ಪ್ರವಾಸದ ವ್ಯಾಮೋಹ ಬಿಟ್ಟು ತಮ್ಮ ರಾಜಕೀಯ ಭವಿಷ್ಯದ ಕಡೆ ಗಮನಹರಿಸಿದ್ದರೆ, ಹಿರಿಯ ಐಎಎಸ್ ಅಧಿಕಾರಿಗಳು ಸರ್ಕಾರದ ಖರ್ಚಿನಲ್ಲಿ ತಂಡೋಪತಂಡವಾಗಿ ವಿದೇಶ ಪ್ರವಾಸದ ಸಿದ್ಧತೆಯಲ್ಲಿ ತೊಡಗಿದ್ದಾರೆ.

ಕರ್ನಾಟಕ ವಿದ್ಯುತ್ ನಿಗಮದ ವ್ಯವಸ್ಥಾಪಕ ನಿರ್ದೇಶಕ ಸೇರಿದಂತೆ ಹತ್ತಕ್ಕೂ ಹೆಚ್ಚು ಐಎಎಸ್ ಅಧಿಕಾರಿಗಳು ಸರ್ಕಾರದ ಖರ್ಚಿನಲ್ಲಿ ವಿದೇಶ ಯಾತ್ರೆ ಮಾಡಿ ಬಂದಿದ್ದಾರೆ; ಈ ತಿಂಗಳು ಮತ್ತೆ ಸುಮಾರು 10 ಐಎಎಸ್ ಅಧಿಕಾರಿಗಳಿಗೆ ವಿದೇಶ ಪ್ರವಾಸ ಕೈಗೊಳ್ಳಲು ಸರ್ಕಾರ ಅನುಮತಿ ನೀಡಿದೆ.

ಇನ್ನೂ ಕೆಲವು ಐಎಎಸ್ ಅಧಿಕಾರಿಗಳು ವಿದೇಶ ಪ್ರವಾಸಕ್ಕೆ ಹೋಗಲು ಅನುಮತಿ ಕೋರಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದು, ಅವುಗಳು ಪರಿಶೀಲನೆಯ ಹಂತದಲ್ಲಿವೆ. ಇದನ್ನೆಲ್ಲಾ ನೋಡಿದರೆ, ವಿದೇಶ ಪ್ರವಾಸಕ್ಕೆ ತೆರಳಲು ಐಎಎಸ್ ಅಧಿಕಾರಿಗಳ ನಡುವೆ ತೀವ್ರ ಪೈಪೋಟಿಯೇ ನಡೆದಿರುವಂತಿದೆ.

50 ವರ್ಷಗಳ ಹಿಂದೆ

ಸೋಮವಾರ, 13-5-1974

• **ವಿಧಾನಪರಿಷತ್ತಿನ ಏಳರಲ್ಲಿ ಐದು ಸ್ಥಾನ ಕಾಂಗ್ರೆಸ್ಸಿಗೆ**

ಬೆಂಗಳೂರು, ಮೇ 12– ರಾಜ್ಯ ವಿಧಾನ ಪರಿಷತ್ತಿನ ಸ್ಥಳೀಯ ಸಂಸ್ಥೆಗಳ ಏಳು ಮತದಾರ ಕ್ಷೇತ್ರಗಳಿಗೆ ನಿನ್ನೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ 5 ಸ್ಥಾನಗಳನ್ನು ಮತ್ತು ಸಂಸ್ಥಾ ಕಾಂಗ್ರೆಸ್ 2 ಸ್ಥಾನಗಳನ್ನು ಗಳಿಸಿವೆ.

ಬೆಂಗಳೂರು ಮತ್ತು ಧಾರವಾಡ ಜಿಲ್ಲೆಯ ಸ್ಥಾನಗಳನ್ನು ಕಾಂಗ್ರೆಸ್ ಪಕ್ಷವು ಸಂಸ್ಥಾ ಕಾಂಗ್ರೆಸ್‌ನಿಂದ ಗಳಿಸಿಕೊಂಡಿದೆ. ಕೋಲಾರ, ಬೀದರ್ ಮತ್ತು ಚಿತ್ರದುರ್ಗದ ಸ್ಥಾನಗಳನ್ನು ಕಾಂಗ್ರೆಸ್ ಉಳಿಸಿಕೊಂಡಿದೆ. ಬೆಳಗಾವಿ ಮತ್ತು ಉತ್ತರಕನ್ನಡ ಜಿಲ್ಲೆ ಸ್ಥಾನಗಳನ್ನು ಸಂಸ್ಥಾ ಕಾಂಗ್ರೆಸ್ ಉಳಿಸಿಕೊಂಡಿದೆ.

ಕಾಂಗ್ರೆಸ್ ಅಭ್ಯರ್ಥಿಗಳಾದ ಜೆ. ಶ್ರೀನಿವಾಸ ರೆಡ್ಡಿ (ಬೆಂಗಳೂರು ಜಿಲ್ಲೆ), ಚನ್ನಯ್ಯ ಒಡೆಯರ್ (ಚಿತ್ರದುರ್ಗ ಜಿಲ್ಲೆ), ಪಾಲಾಕ್ಷಿ ಟಿ. ದೇಸಾಯಿ (ಧಾರವಾಡ ಜಿಲ್ಲೆ), ಎನ್.ಎಂ. ಖೇಣಿ (ಬೀದರ್ ಜಿಲ್ಲೆ) ಮತ್ತು ಎಂ.ಸಿ. ಆಂಜನೇಯ ರೆಡ್ಡಿ (ಕೋಲಾರ ಜಿಲ್ಲೆ) ಆಯ್ಕೆಯಾಗಿದ್ದಾರೆ.

ಸಂಸ್ಥಾ ಕಾಂಗ್ರೆಸ್‌ನ ವಿ.ಎಂ. ಕಟ್ಟಿ (ಬೆಳಗಾವಿ ಜಿಲ್ಲೆ) ಮತ್ತು ಆರ್.ಎಸ್. ಭಾಗವತ್ (ಉತ್ತರಕನ್ನಡ ಜಿಲ್ಲೆ) ವಿಜಯಿಗಳಾಗಿದ್ದಾರೆ.

ಸಂಗತ

ಹಿಮಶಿಖರದ ಮೇಲೆ ಬಣ್ಣದ ಸೊಬಗು

ಧ್ರುವಪ್ರದೇಶದಲ್ಲಿ ಕಾಣಿಸಿಕೊಳ್ಳುವ ಬಣ್ಣದ ಓಕುಳಿ, ಸೂರ್ಯನ ಅಂತರಾಳವನ್ನು ತಿಳಿಯಲು ವಿಜ್ಞಾನಿಗಳಿಗೆ ಅಪೂರ್ವ ಅವಕಾಶವನ್ನು ಒದಗಿಸುತ್ತದೆ

• ಬಿ.ಎಸ್.ಶೈಲಜಾ

ಹಿಮಾಲಯ ಎಂದೊಡನೆ ನೆನಪಾಗುವುದು ಹಿಮಾಚ್ಛಾದಿತ ಬಿಳಿಯ ಶಿಖರಗಳು. ರಾತ್ರಿಯಲ್ಲಂತೂ ಇವುಗಳ ಮೇಲಿನ ಶುಭ್ರ ಆಕಾಶ ಹೊಸ ದೃಶ್ಯಾವಳಿಗಳನ್ನೇ ತೆರೆದಿಡುತ್ತದೆ. ನಕ್ಷತ್ರಭರಿತ ಶುಭ್ರ ಆಕಾಶದಲ್ಲಿ ಇತ್ತೀಚೆಗೆ ಓಕುಳಿ ಚೆಲ್ಲಿದಂತೆ ಕೆಂಪು ಬಣ್ಣ ಹರಡಿತು. ಚಿಲುಮೆಯ ನೀರು ಗಾಳಿಯಲ್ಲಿ ಹೊಯ್ದಾಡುವಂತೆ ನರ್ತಿಸಿತು. ನೋಡುಗರನ್ನು ನಿಬ್ಬೆರಗಾಗಿಸಿತು. ಏನಿದು ವಿಸ್ಮಯ?

ಯುರೋಪ್, ಕೆನಡಾದಲ್ಲಿ ಈ ನೋಟ ಹೊಸದಲ್ಲ. ಇದಕ್ಕೆ ಅರೋರಾ ಅಥವಾ ಧ್ರುವಪ್ರಭೆ ಎಂಬ ಹೆಸರಿದೆ. ಸೂರ್ಯನ ಚಟುವಟಿಕೆ ತೀವ್ರವಾದಾಗ ಈ ಬಗೆಯ ಬೆಳಕು ಕಾಣಿಸಿಕೊಳ್ಳುತ್ತದೆ. ಈ ಅಂಶವನ್ನು ಪತ್ತೆ ಮಾಡಿದ್ದು ಸ್ವಾರಸ್ಯಕರವಾಗಿದೆ. ಸುಮಾರು 150 ವರ್ಷಗಳ ಹಿಂದೆ ತನ್ನ ಪುಟ್ಟ ದೂರದರ್ಶಕದ ಮೂಲಕ ಸೂರ್ಯನ ಅಧ್ಯಯನ ನಡೆಸುತ್ತಿದ್ದ ಇಂಗ್ಲೆಂಡ್‌ನ ವಿಜ್ಞಾನಿ ರಿಚರ್ಡ್ ಕ್ಯಾರಿಂಗ್‌ಟನ್, ಸೂರ್ಯನ ಮೇಲ್ಮೈಯಿಂದ ಜ್ವಾಲೆಯೊಂದು ಚಿಲುಮೆಯಂತೆ ಚಿಮ್ಮಿದ್ದನ್ನು ದಾಖಲಿಸಿದರು. ಮೂರು ದಿನಗಳ ನಂತರ ಭೂ ಅಯಸ್ಕಾಂತ ಕ್ಷೇತ್ರದ ಅಳತೆಯಲ್ಲಿ ಏರುಪೇರಾಯಿತು. ಧ್ರುವಪ್ರದೇಶದಲ್ಲಿ (ಆರ್ಕ್‌ಟಿಕ್) ಆಕಾಶವು ಬಣ್ಣ ಬಣ್ಣದ ಚಿತ್ತಾರಗಳಿಂದ ಕಂಗೊಳಿಸಿತು. ಆದರೆ ಈ ಎಲ್ಲ ವಿದ್ಯಮಾನಗಳು ಒಂದಕ್ಕೊಂದು ಬೆಸೆದುಕೊಂಡಿವೆ ಎಂಬುದು ಆಗ ತಿಳಿದಿರಲಿಲ್ಲ.

ನಮ್ಮ ಸಮೀಪದ ನಕ್ಷತ್ರವಾದ ಸೂರ್ಯ ಎಲ್ಲ ಬಗೆಯ ತರಂಗಗಳ ಅಧ್ಯಯನಕ್ಕೆ ತೆರೆದುಕೊಂಡಿದೆ. ಗಾಮಾ ಕಿರಣಗಳಿಂದ ರೇಡಿಯೊ ತರಂಗಗಳವರೆಗೆ ಎಲ್ಲ ಬಗೆಯ ವೀಕ್ಷಣೆಗಳೂ ವ್ಯವಸ್ಥಿತವಾಗಿ ನಡೆದುಕೊಂಡು ಬರುತ್ತಿವೆ. ಅಂತರಿಕ್ಷ ವೀಕ್ಷಣಾಲಯಗಳ ಕೊಡುಗೆಯಿಂದ 'ಅಂತರಿಕ್ಷ ಹವಾಮಾನ' (ಸ್ಪೇಸ್ ವೆದರ್) ಎಂಬ ಹೊಸ ಶಾಖೆಯೇ ಉದ್ಭವವಾಗಿದೆ.

ಸೌರ ಚಟುವಟಿಕೆಗಳು 11 ವರ್ಷಗಳಿಗೊಮ್ಮೆ ತೀವ್ರವಾಗುತ್ತವೆ. ಸೌರ ಕಲೆಗಳ ಸಂಖ್ಯೆ ಮಾತ್ರವಲ್ಲ ಗಾತ್ರವೂ ದೊಡ್ಡದಾಗ ತೊಡಗುತ್ತದೆ. ಅದರ ಮೇಲ್ಮೈಯಿಂದ ಪದೇಪದೇ ಬೆಂಕಿಯ ಉಂಡೆಗಳು ಚಿಮ್ಮುತ್ತವೆ. ಭಾರಿ ಶಕ್ತಿಯ ಈ ಚಿಮ್ಮುವಿಕೆಗೆ ಕರೋನಲ್ ಮಾಸ್ ಎಜೆಕ್ಷನ್ ಎಂಬ ಹೆಸರಿದೆ. ಆದಿತ್ಯ ಮೊದಲಾಗಿ ಅನೇಕ ಅಂತರಿಕ್ಷ ವೀಕ್ಷಣಾಲಯಗಳು ಈ ಚಟುವಟಿಕೆಗಳನ್ನು ನಿರಂತರವಾಗಿ ವೀಕ್ಷಿಸಿ ಎಚ್ಚರಿಕೆ ಕೊಡುತ್ತವೆ. ಎಚ್ಚರಿಕೆ? ಅದೇಕೆ?

ಆಕಾಶಕ್ಕೆ ಬಣ್ಣ ತುಂಬುವ ಕೆಲಸದ ಜೊತೆಗೆ ಈ ಚಿಲುಮೆಗಳು ಇನ್ನೂ ವೈವಿಧ್ಯಮಯ ಪರಿಣಾಮಗಳನ್ನು ಉಂಟುಮಾಡುತ್ತವೆ. ಜ್ವಾಲೆ ಉಕ್ಕಿದ್ದು ದೂರದರ್ಶಕಕ್ಕೆ ತಿಳಿಯುತ್ತದೆ. ಶಕ್ತಿಶಾಲಿ ಕಣಗಳ ಈ ಪ್ರವಾಹ ಅದೃಷ್ಟವಶಾತ್, ಬೆಳಕಿನ ವೇಗಕ್ಕಿಂತ ಕಡಿಮೆ ವೇಗದಲ್ಲಿ ಧಾವಿಸಿ ಬರುತ್ತದೆ (ಸೆಕೆಂಡಿಗೆ ಸುಮಾರು 2000 ಕಿ.ಮೀ). ಆ ಪ್ರವಾಹದ ದಿಕ್ಕನ್ನು ಮುಂಚಿತವಾಗಿ ಲೆಕ್ಕ ಹಾಕಿ, ಅದು ಭೂಮಿಯನ್ನು ಅಪ್ಪಳಿಸಬಹುದೇ ಎಂದು ತಿಳಿಯಬಹುದು. ಅದಕ್ಕೆ ಎರಡು ಮೂರು ದಿನಗಳ ಕಾಲಾವಕಾಶ ಸಿಗುತ್ತದೆ.

ಮೇ 7- 8ರ ಅವಧಿಯಲ್ಲಿ ಸೂರ್ಯನ ಮೇಲ್ಮೈಯಲ್ಲಿ ಸೌರಕಲೆಗಳ ದೊಡ್ಡದೊಂದು ಗುಂಪು ಕಂಡಿತು. ಅದು ಚಿಮ್ಮಿಸಿದ ಪ್ರವಾಹ ಮೇ 9ರಂದು ಭೂಮಿಯನ್ನು ಅಪ್ಪಳಿಸಿತು. ಸಾಧಾರಣವಾಗಿ ಈ ಬಗೆಯ ಪ್ರವಾಹಗಳು ಶಕ್ತಿಶಾಲಿ ಅಯಾನುಗಳನ್ನು ಹೊತ್ತು ತರುತ್ತವೆ. ಆದರೆ ಭೂಮಿಯ ಅಯಸ್ಕಾಂತ ಕ್ಷೇತ್ರ ಅದಕ್ಕೆ ತಡೆ ಒಡ್ಡಿ ಬೇರೆ ದಿಕ್ಕಿಗೆ ತಿರುಗಿಸುತ್ತದೆ. ಧ್ರುವ ಪ್ರದೇಶಗಳಲ್ಲಿ ಈ ಅಯಾನುಗಳು ಸ್ವಲ್ಪ ಪ್ರಮಾಣದಲ್ಲಿ ನುಗ್ಗಿ ಬರುತ್ತವೆ. ಅಲ್ಲಿಯ ವಾತಾವರಣದ ಅನಿಲಗಳಿಗೆ ಅಪಾರ ಶಕ್ತಿ ಒದಗಿ, ಅವು ತಮ್ಮ ತಮ್ಮ ಪರಮಾಣು ಗುಣಗಳಿಗೆ ಅನುಗುಣವಾಗಿ ಬಣ್ಣ ಬಣ್ಣದ ಬೆಳಕನ್ನು ಉತ್ಸರ್ಜಿಸುತ್ತವೆ.

ಈ ಬಾರಿ ಈ ಪ್ರವಾಹದಲ್ಲಿ ಶಕ್ತಿಯೂ ಹೆಚ್ಚಿತ್ತು, ಅಣುಗಳ ಸಂಖ್ಯೆಯೂ ಹೆಚ್ಚಿತ್ತು. ಆದ್ದರಿಂದ ಧ್ರುವಪ್ರಭೆಗಳು ಧ್ರುವಪ್ರದೇಶಗಳಿಗೆ ಮಾತ್ರ ಸೀಮಿತವಾಗದೆ ಧಾರೆ ಇನ್ನೂ ಆಳಕ್ಕೆ ಇಳಿಯಿತು. 35 ಡಿಗ್ರಿ ಅಕ್ಷಾಂಶವನ್ನು ತಲುಪಿತು. ಯುರೋಪ್, ಅಮೆರಿಕದಲ್ಲಷ್ಟೇ ಅಲ್ಲದೆ ಹಿಮಾಲಯದ ಲಡಾಖ್‌ನಲ್ಲಿಯೂ ಕಂಡಿತು.



ತನ್ನ ಶುಭ್ರ ಆಕಾಶಕ್ಕೆ ಹೆಸರಾಗಿರುವ ಲಡಾಖ್‌ನ ಹನ್ಲೆ ಎಂಬ ಗ್ರಾಮವನ್ನು 'ಕತ್ತಲೆ ಆಕಾಶದ ಮೀಸಲು ಪ್ರದೇಶ' ಎಂದೇ ಗುರುತಿಸಲಾಗಿದೆ. ಇಲ್ಲಿ ಪ್ರಕಾಶ ಮಾಲಿನ್ಯದ ಯಾವುದೇ ಚಟುವಟಿಕೆಗಳಿಗೆ ಅವಕಾಶವಿಲ್ಲ. ಇಲ್ಲಿ ದೊಡ್ಡ ದೊಡ್ಡ ದೂರದರ್ಶಕಗಳ ಸಮೂಹವನ್ನೇ ಭಾರತೀಯ ಖಗೋಳವಿಜ್ಞಾನ ಸಂಸ್ಥೆ ಸ್ಥಾಪಿಸಿದೆ. ಅಲ್ಲಿ ಇರಿಸಿರುವ ಸ್ವಯಂಚಾಲಿತ ಕ್ಯಾಮೆರಾವು ರಾತ್ರಿಯ ಆಕಾಶವನ್ನು ದಾಖಲಿಸುತ್ತದೆ. ಅದು ಧ್ರುವಪ್ರಭೆಯ ಸೊಬಗಿನ ವಿಡಿಯೊವನ್ನು ಒದಗಿಸಿದೆ. ಮಧ್ಯರಾತ್ರಿಯಿಂದ ಸೂರ್ಯೋದಯದವರೆಗೂ ಕಂಡುಬಂದಿದೆ. ಸಮೀಪದ ಮೆರೆಕ್ ಎಂಬಲ್ಲಿ ಸೌರ ವೀಕ್ಷಣಾಲಯವನ್ನು ಸ್ಥಾಪಿಸುವ ಕಾರ್ಯ ಭರದಿಂದ ಸಾಗಿದೆ. ರಾತ್ರಿ ಇಡೀ ಆಕಾಶವನ್ನು ಸೆರೆಹಿಡಿಯುವ ಅಲ್ಲಿಯ ಕ್ಯಾಮೆರಾ ಕೂಡ ಧ್ರುವಪ್ರಭೆಯನ್ನು ದಾಖಲಿಸಿದೆ.

ಇಂತಹ ತೀವ್ರ ಚಟುವಟಿಕೆಯ ಪ್ರಾತ್ಯಕ್ಷಿಕೆಗಳು ಸೂರ್ಯನ ಅಂತರಾಳವನ್ನು ತಿಳಿಯಲು ವಿಜ್ಞಾನಿಗಳಿಗೆ ಅಪೂರ್ವ ಅವಕಾಶ ನೀಡುತ್ತವೆ. ಆದರೆ ಇಂತಹ ಅತೀವ ಶಕ್ತಿಯ ಚಿಲುಮೆಗಳು ಭೂಮಿಯನ್ನು ಸುತ್ತುತ್ತಿರುವ ಕೃತಕ ಉಪಗ್ರಹಗಳನ್ನು ಅಪ್ಪಳಿಸಿ ಹಾನಿ ಉಂಟುಮಾಡುತ್ತವೆ. ಇದರಿಂದ ಉಪಗ್ರಹ ಆಧಾರಿತ ಚಟುವಟಿಕೆಗಳೆಲ್ಲ ಏರುಪೇರಾಗುತ್ತವೆ. ವಿದ್ಯುತ್ ಜಾಲವನ್ನು ಗಾಸಿಗೊಳಿಸಿರುವ ದಾಖಲೆ ಇದೆ. ಆದ್ದರಿಂದಲೇ ಅವುಗಳ ಬಗ್ಗೆ ಮುನ್ನೆಚ್ಚರಿಕೆ ಕೊಡಬೇಕಾಗುತ್ತದೆ. ಹೀಗಾಗಿ, 'ಅಂತರಿಕ್ಷ ಹವಾಮಾನ ಮುನ್ಸೂಚನೆ' ಅತ್ಯಗತ್ಯ. ಆಗ ಅಂತರಿಕ್ಷ ವಿಜ್ಞಾನಿಗಳು ಸೌರ ಫಲಕಗಳನ್ನು ಮುಚ್ಚಿ ಉಪಗ್ರಹಗಳನ್ನು ರಕ್ಷಿಸಲು ಸಾಧ್ಯವಾಗುತ್ತದೆ.

ಹನ್ಲೆಯಲ್ಲಿ ಕಂಡುಬಂದ ಸುಂದರ ದೃಶ್ಯಗಳು ಮತ್ತು ವಿಡಿಯೊಗಳನ್ನು ಭಾರತೀಯ ಖಗೋಳವಿಜ್ಞಾನ ಸಂಸ್ಥೆ ಬಿಡುಗಡೆ ಮಾಡಿದೆ.

ವಾಚಕರ ವಾಣಿ

ಬಗೆದಷ್ಟೂ ಹೊರಬರಲಿದೆ ಸತ್ಯ

ಪ್ರಜ್ವಲ್ ರೇವಣ್ಣ ಅವರ ವಿರುದ್ಧ ಕೇಳಿಬಂದಿರುವ ಲೈಂಗಿಕ ದೌರ್ಜನ್ಯ ಆರೋಪದ ಪ್ರಕರಣ ದಿನದಿಂದ ದಿನಕ್ಕೆ ಭಿನ್ನ ತಿರುವುಗಳನ್ನು ಪಡೆದುಕೊಳ್ಳುತ್ತಿದೆ. ಜವಾಬ್ದಾರಿಯುತ ಸ್ಥಾನದಲ್ಲಿ ಇರುವ ಸಂಸದರು ಆರೋಪ ಕೇಳಿಬರುತ್ತಿದ್ದಂತೆಯೇ ತಲೆಮರೆಸಿಕೊಂಡು ವಿದೇಶಕ್ಕೆ ತೆರಳಿರುವುದು ಸರಿಯಲ್ಲ. ಜಗತ್ತಿನ ಎಲ್ಲ ಆಗುಹೋಗುಗಳನ್ನೂ ಕುಳಿತಲ್ಲೇ ತಿಳಿದುಕೊಳ್ಳಲು ಸಾಧ್ಯವಿರುವ ಈ ಕಾಲಘಟ್ಟದಲ್ಲಿ, ಸಂಸದರ ಈ ನಡೆಯನ್ನು ಜನಸಾಮಾನ್ಯರು ಯಾವ ರೀತಿಯಲ್ಲಿ ಅರ್ಥೈಸಬೇಕು? ಹೀಗೆ ತಲೆಮರೆಸಿಕೊಳ್ಳುವುದು ಸಂಸದ ಸ್ಥಾನಕ್ಕೆ ಶೋಭೆ ತರುವುದಿಲ್ಲ. ಅವರು ಕಾಣೆಯಾಗಿರುವುದರ ಹಿಂದೆ ಹಲವರ ಕೈವಾಡ ಇರುವಂತೆ ತೋರುತ್ತಿದೆ. ಈ ಪ್ರಕರಣದಲ್ಲಿ ಅಗೆದಷ್ಟೂ ಬಗೆದಷ್ಟೂ ಸತ್ಯ ಹೊರಬರುವ ಎಲ್ಲಾ ಲಕ್ಷಣಗಳು ಇವೆ. ಪ್ರಜ್ವಲ್ ಅವರನ್ನು ಆದಷ್ಟು ಬೇಗ ರಾಜ್ಯಕ್ಕೆ ಕರೆತರಲು ಸರ್ಕಾರ ಎಲ್ಲ ಕ್ರಮಗಳನ್ನೂ ಕೈಗೊಳ್ಳಲಿ.

ನಮ್ರತಾ ಪ್ರಕಾಶ್, ಮೈಸೂರು

ಮರಗಳಿಗೆ ಸಿಗಲಿ ರಕ್ಷಣೆ

ಸಾಂಸ್ಕೃತಿಕ ನಗರವಾದ ಮೈಸೂರು, ನಿಸರ್ಗ ಸೌಂದರ್ಯವನ್ನೂ ಮೈದುಂಬಿಕೊಂಡಿದೆ. ಮುಖ್ಯ ರಸ್ತೆಗಳ ಇಕ್ಕೆಲಗಳಲ್ಲಿ ಇರುವ ಸಾಲು ಸಾಲು ಮರಗಳು, ಉದ್ಯಾನಗಳು ಹಾಗೂ ಬಡಾವಣೆಗಳಲ್ಲಿ ಬೆಳೆಸಿರುವ ವಿವಿಧ ಬಗೆಯ ಮರಗಳು ನಗರದ ಸೌಂದರ್ಯವನ್ನು ಇಮ್ಮಡಿಗೊಳಿಸಿವೆ. ಆದರೆ, ಈ ಮರಗಳು ಬೆಳೆದಂತೆ ಇವುಗಳಿಗೆ ಗೆದ್ದಲು ಹುಳುಗಳ ಕಾಟವೂ ವಿಪರೀತವಾಗುತ್ತಿರುವುದು ಕಂಡುಬರುತ್ತಿದೆ. ಮರಗಳನ್ನು ಬೆಳೆಸುವುದರಲ್ಲಿ ತೋರುವ ಆಸಕ್ತಿಯನ್ನು ಗೆದ್ದಲುಹುಳುಗಳಿಂದ ಅವುಗಳನ್ನು ರಕ್ಷಿಸುವುದಕ್ಕೂ ತೋರಬೇಕಾಗಿದೆ.

ಸಾಮಾನ್ಯವಾಗಿ ಬೇವು, ಬಾಗೆ, ನೀಲಗಿರಿ, ತೇಗ, ಶ್ರೀಗಂಧ, ತೆಂಗಿನಂತಹ ಮರಗಳಲ್ಲಿ ಗೆದ್ದಲುಹುಳುಗಳ ಕಾಟವಿರುತ್ತದೆ. ಆದರೆ, ಹಿಪ್ಪೆ, ಹುಣಸೆ, ಹಲಸು, ನೇರಳೆ, ಆಲ, ಅರಳಿ, ರಬ್ಬರ್ ಮತ್ತು ಹೊಂಗೆ ಮರಗಳು ಸ್ವಾಭಾವಿಕವಾಗಿಯೇ ಗೆದ್ದಲು ನಿರೋಧಕ ಆಗಿರುತ್ತವೆ. ವಿವಿಧ ರೀತಿಯ ಮರಗಳು ನಗರದ ಸೌಂದರ್ಯವನ್ನು ಹೆಚ್ಚಿಸುವುದಷ್ಟೇ ಅಲ್ಲ ವಾತಾವರಣವನ್ನೂ ತಂಪಾಗಿಸುತ್ತವೆ. ರಾಜ್ಯದ ಇತರ ನಗರಗಳಲ್ಲಿಯೂ ಮರಗಳಿಗೆ ಗೆದ್ದಲು ಹುಳುಗಳ ಕಾಟ ಇರಬಹುದು. ಸ್ಥಳೀಯ ಆಡಳಿತಗಳು ಕೀಟತಜ್ಞರ ಸಲಹೆ ಪಡೆದು, ಮರಗಳಲ್ಲಿ ಕಂಡುಬರುವ ಗೆದ್ದಲನ್ನು ನಿಯಂತ್ರಿಸುವ ಕಡೆ ಕಾರ್ಯಪ್ರವೃತ್ತವಾಗಲಿ.

ಡಿ.ರಾಜಗೋಪಾಲ್, ಬೆಂಗಳೂರು

ಉಚಿತವಲ್ಲದ ಆದೇಶ

ಬೆಂಗಳೂರಿನ ಜೆ.ಬಿ. ನಗರದಲ್ಲಿ ವೀರಭದ್ರಸ್ವಾಮಿಯ ಪಲ್ಲಕ್ಕಿ ಉತ್ಸವ ನಡೆದ ಪ್ರಯುಕ್ತ, ದುಷ್ಕೃತ್ಯಗಳಿಗೆ ಅವಕಾಶ ಆಗದಂತೆ ಅಲ್ಲಿನ ಪೊಲೀಸ್ ಠಾಣೆ ವ್ಯಾಪ್ತಿಯ ಎಲ್ಲ ಮದ್ಯದ ಅಂಗಡಿ, ಬಾರ್ ಮತ್ತು ರೆಸ್ಟೊರೆಂಟ್‌ಗಳನ್ನು ಶನಿವಾರ ಮುಂಜಾನೆಯಿಂದ ಭಾನುವಾರ ಮಧ್ಯಾಹ್ನದವರೆಗೆ ಬಂದ್ ಮಾಡಲು ಆದೇಶಿಸಿದ್ದಾಗಿ ವರದಿಯಾಗಿತ್ತು. ಒಂದು ಬೀದಿಯ ಎಡಭಾಗ ಒಂದು ಠಾಣೆಯ ವ್ಯಾಪ್ತಿಗೂ ಬಲಭಾಗ ಮತ್ತೊಂದು ಠಾಣೆಯ ವ್ಯಾಪ್ತಿಗೂ ಸೇರುವ ಸಂಭವ ಇದ್ದೇ ಇರುತ್ತದೆ. ಅಂತಹ ಸಂದರ್ಭದಲ್ಲಿ, ಮತ್ತೊಂದು ಠಾಣೆ ವ್ಯಾಪ್ತಿಯ ಅಂಗಡಿಗೆ ಹೋಗಿ ಮದ್ಯಪಾನ ಮಾಡಿಬರುವ ಸಾಧ್ಯತೆ ಇರುವುದಿಲ್ಲವೇ? ಅಷ್ಟಕ್ಕೂ ಮದ್ಯಪಾನ ಮಾಡಲೇಬೇಕೆಂದರೆ ನಾನಾ ಮಾರ್ಗಗಳು ಇದ್ದೇ ಇರುತ್ತವೆ. ಹಾಗೆಂದು ಠಾಣೆ ವ್ಯಾಪ್ತಿಯ ಬಾರ್‌ಗಳನ್ನು ಮುಚ್ಚಿಸುವುದು ಹಾಸ್ಯಾಸ್ಪದ ಆದೇಶವಾಗುತ್ತದೆ.

ಮದ್ಯಪಾನ ಮಾಡಿದರೆ ಮಾತ್ರ ದುಷ್ಕೃತ್ಯ ಎಸಗಲು ಸಾಧ್ಯ ಎಂಬ ತೀರ್ಮಾನ ಸರಿಯಲ್ಲ. ಮದ್ಯಪಾನ ಮಾಡದೆಯೂ ದುಷ್ಕೃತ್ಯ ಎಸಗಬಹುದಲ್ಲವೇ? ಉತ್ಸವಕ್ಕೆ ಬಿಗಿಯಾದ ಪೊಲೀಸ್ ಬಂದೋಬಸ್ತ್ ಮಾಡಿ, ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಳ್ಳಬೇಕಾದದ್ದು ಪೊಲೀಸರ ಕರ್ತವ್ಯ. ಇಂತಹ ಆದೇಶಗಳನ್ನು ಹೊರಡಿಸುವ ಮುನ್ನ ಪೊಲೀಸ್ ಇಲಾಖೆ ಚಿಂತಿಸಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಚುನಾವಣೆ: ಎಲ್ಲರಿಗೂ ಇದೆ ಹೊಣೆ

ಈ ಬಾರಿಯ ಲೋಕಸಭಾ ಚುನಾವಣೆಯ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ ತಮಗೆ ಉತ್ತಮ ವ್ಯವಸ್ಥೆ ಕಲ್ಪಿಸಿದ್ದುದು, ಹಿಂದಿನ ಚುನಾವಣೆಗಳ ಸಂದರ್ಭದಲ್ಲಿ ಆದ ಕಹಿ ಅನುಭವವನ್ನು ಮರೆಸುವಂತಿತ್ತು ಎಂದು ಎಂ.ಜೆ. ಅಲ್ಫೋನ್ಸ್ ಪಿಂಟೊ ಎಂಬುವರು ಖುಷಿಯಿಂದ ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ (ವಾ.ವಾ., ಮೇ 10). ಆದರೆ ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡ ಎಲ್ಲರಿಗೂ ಇದೇ ರೀತಿಯ ಉತ್ತಮವಾದ ವ್ಯವಸ್ಥೆ ಇರುತ್ತದೆ ಎಂದು ಭಾವಿಸಲಾಗದು. ವ್ಯವಸ್ಥೆಯನ್ನು ಕಲ್ಪಿಸುವ ಜವಾಬ್ದಾರಿ ವಹಿಸಿಕೊಂಡವರ ಬದ್ಧತೆಯನ್ನು ಅದು ಅವಲಂಬಿಸಿರುತ್ತದೆ. ಚುನಾವಣಾ ಸಿಬ್ಬಂದಿಗೆ ಮೂಲ ಸೌಲಭ್ಯಗಳನ್ನು ಒದಗಿಸುವಲ್ಲಿ ಅನಾದರ ತೋರಿ ಬೇಸರ ಉಂಟುಮಾಡುವುದು, ಅದರಲ್ಲೂ ಮಹಿಳಾ ಸಿಬ್ಬಂದಿ ಹೆಚ್ಚಿನ ತೊಂದರೆ ಅನುಭವಿಸುವುದು ಸಾಮಾನ್ಯ ಸಂಗತಿ ಎನ್ನುವಂತಾಗಿದೆ.

ಮತದಾನ ಸುಸೂತ್ರವಾಗಿ ನಡೆಯಲು ಚುನಾವಣಾ ಸಿಬ್ಬಂದಿಯ ಜವಾಬ್ದಾರಿಯೂ ಮಹತ್ವದ ಪಾತ್ರ ವಹಿಸುತ್ತದೆ. ಕೆಲವರಿಗೆ ಮತದಾನದ ಪರಿಕರಗಳನ್ನು ತೆಗೆದುಕೊಳ್ಳುವಾಗ ಇರುವ ವ್ಯವಧಾನ ಅವುಗಳನ್ನು ಹಿಂದಿರುಗಿಸುವಾಗ ಇರುವುದಿಲ್ಲ. ಅಲ್ಲಿ ನಾಮುಂದು ತಾಮುಂದು ಎಂದು ಗದ್ದಲ, ನೂಕುನುಗ್ಗಲು ಸೃಷ್ಟಿಯಾಗಿರುತ್ತದೆ. ಚುನಾವಣೆಯ ಸಂದರ್ಭದಲ್ಲಿ ಕಾಣಿಸಿಕೊಳ್ಳುವ ಇಂತಹ ಕೆಲವು ಸಮಸ್ಯೆಗಳು ಸರಿ ಹೋಗಬೇಕು. ಮತದಾನವು ಹಬ್ಬದ ರೀತಿಯಲ್ಲಿ ಆಗಬೇಕು ಎಂಬ ಚುನಾವಣಾ ಆಯೋಗದ ಆಶಯಕ್ಕೆ ಸಂಬಂಧಪಟ್ಟ ಎಲ್ಲರೂ ಸ್ಪಂದಿಸಬೇಕು. ಹೀಗಾದಾಗ ಇಡೀ ಮತದಾನ ಪ್ರಕ್ರಿಯೆ ಸಂಭ್ರಮದಿಂದ ನಡೆಯುತ್ತದೆ.

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಹೋಮ್ ಸ್ಟೇ: ದಾರಿತಪ್ಪಿದ ಉದ್ದೇಶ

ಅನಧಿಕೃತ ಹೋಮ್ ಸ್ಟೇಗಳ ಸಂಖ್ಯೆ ಹೆಚ್ಚಾಗಿರುವ ಕುರಿತ ವಿಶೇಷ ವರದಿಯನ್ನು (ಪ್ರ.ವಾ., ಮೇ 12) ಓದಿದಾಗ, ಅದರಲ್ಲಿ ಹೋಮ್ ಸ್ಟೇಗಳ ಒಂದು ಮುಖವನ್ನು ಮಾತ್ರ ಹೇಳಲಾಗಿದೆ ಎನಿಸಿತು. ಕೆಲವೆಡೆ ಹೋಮ್ ಸ್ಟೇಗಳ ಹೆಸರಿನಲ್ಲಿ ನಡೆಯುತ್ತಿರುವ ಅನೈತಿಕ ಚಟುವಟಿಕೆಗಳ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನ ಆಗಬೇಕಿತ್ತು. ಕೆಲವು ಪೊಲೀಸರಿಗೆ ಇವು ವಸೂಲಿ ಕೇಂದ್ರಗಳಾಗಿವೆ ಎನ್ನುವ ಮಾತಿದೆ.

ಪ್ರವಾಸೋದ್ಯಮವನ್ನು ಉತ್ತೇಜಿಸುವ ದಿಸೆಯಲ್ಲಿ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಹೋಮ್ ಸ್ಟೇಯ ಉದ್ದೇಶ ಇಂದು ಬೇರೆಯದೇ ದಾರಿಯಲ್ಲಿ ಸಾಗುತ್ತಿರುವುದು ವಿಷಾದದ ಸಂಗತಿ.

ಬೂಕನಕೆರೆ ವಿಜೇಂದ್ರ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರನ್ ಸಾಗರದಲ್ಲಿ 'ಡಾಟ್‌ಬಾಲ್' ಮುತ್ತುಗಳು

'ಮುತ್ತಿನ ನಗರಿ' ಹೈದರಾಬಾದಿನ ರಾಜೀವಗಾಂಧಿ ಕ್ರೀಡಾಂಗಣದಲ್ಲಿ ಹೋದವಾರ ಕೇವಲ 58 ಎಸೆತಗಳಲ್ಲಿ 167 ರನ್‌ಗಳು ಹರಿದವು. ಸನ್‌ರೈಸರ್ಸ್ ಹೈದರಾಬಾದ್ ತಂಡದ ಟ್ರಾವಿಸ್ ಹೆಡ್ ಮತ್ತು ಅಭಿಷೇಕ್ ಶರ್ಮಾ ಅವರ ಈ ಅಜೇಯ ಜೊತೆಯಾಟದಿಂದಾಗಿ ಲಖನೌ ಸೂಪರ್ ಜೈಂಟ್ಸ್ ಹತ್ತು ವಿಕೆಟ್‌ಗಳಿಂದ ಸೋತಿತು.

ಡೆಲ್ಲಿ ಕ್ಯಾಪಿಟಲ್ಸ್ ತಂಡದ ರೊಮಾರಿಯೊ ಶೆಫರ್ಡ್ ಕೇವಲ 10 ಎಸೆತಗಳಲ್ಲಿ 39 ರನ್‌ಗಳನ್ನು ಚಚ್ಚಿದರು. ಹೀಗೆ ಈ ಬಾರಿಯ ಐಪಿಎಲ್‌ನಲ್ಲಿ ರನ್ ಹೊಳೆಯೇ ಹರಿದಿದೆ. ಇದರ ನಡುವೆಯೇ ಡಾಟ್‌ಬಾಲ್ ಶೂರರೂ ಇದ್ದಾರೆ

60 ಪಂದ್ಯಗಳು	21951 ರನ್
721 ವಿಕೆಟ್	2254 ಓವರ್
14 ಶತಕ	1077 ಸಿಕ್ಸರ್
8 ಮೇಡನ್ ಓವರ್	1873 ಬೌಂಡರಿ
3 5 ವಿಕೆಟ್	4551 ಡಾಟ್ ಬಾಲ್

● ಗಿರೀಶ ದೊಡ್ಡಮನಿ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್‌ಸಿಬಿ ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡದ ಪಂದ್ಯ ನಡೆದಾಗ ಒಟ್ಟು 549 ರನ್‌ಗಳು ದಾಖಲಾದವು. 38 ಸಿಕ್ಸರ್‌ಗಳು ಸಿಡಿದವು. ಕೇವಲ 40 ಓವರ್‌ಗಳಲ್ಲಿ ದಾಖಲಾದ ಈ ರನ್‌ಪ್ರವಾಹದಲ್ಲಿ ಬೌಲರ್‌ಗಳು ಅಕ್ಷರಶಃ ಕೊಚ್ಚಿಹೋದರು.

ಈ ಬಾರಿಯ ಐಪಿಎಲ್‌ನಲ್ಲಿ ಬ್ಯಾಟರ್‌ಗಳ ಪರಾಕ್ರಮಕ್ಕೆ ಇಂತಹ ಉದಾಹರಣೆಗಳು ಬಹಳಷ್ಟಿವೆ.. ಭಾರತದ ಮತ್ತು ವಿದೇಶಿ ಬ್ಯಾಟರ್‌ಗಳೆಲ್ಲರೂ ಈ ಬಾರಿ ತಮ್ಮ ತೋಳ್ಬಲ ಮೆರೆಯುತ್ತಿದ್ದಾರೆ. ಯಾವುದೇ ತಂಡವೂ 200ರ ಮೊತ್ತ ಗಳಿಸುವುದು ಸಹಜವೆಂಬಂತೆ ಕಾಣುತ್ತಿದೆ. ಇದಕ್ಕೆ ಇಂಪ್ಯಾಕ್ಟ್ ಪ್ಲೇಯರ್, ಬೌಂಡರಿಗಳ ಸುತ್ತಳತೆ ಕಡಿಮೆಯಾಗಿರುವುದು ಮುಂತಾದ ಕಾರಣಗಳನ್ನು ಹೇಳಲಾಗುತ್ತಿದೆ.

'ಈ ತರಹದ ಕ್ರಿಕೆಟ್‌ಗೆ ಬೌಲರ್‌ಗಳ ಅಗತ್ಯವಿಲ್ಲ. ಬೌಲಿಂಗ್ ಯಂತ್ರ ಇಟ್ಟುಬಿಡುವುದು ಒಳಿತು' ಎಂಬ ವ್ಯಂಗ್ಯದ ಮೀಮ್‌ಗಳೂ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. 'ಬೌಲರ್‌ಗಳನ್ನು ರಕ್ಷಿಸಿ' ಎಂದು ಆಫ್‌ಸ್ಪಿನ್ನರ್ ಆರ್.ಅಶ್ವಿನ್ ಅವರು 'ಎಕ್ಸ್'ನಲ್ಲಿ ಬರೆದುಕೊಂಡಿದ್ದರು.

ಆದರೆ, ಟೂರ್ನಿಯಲ್ಲಿ ಇಲ್ಲಿಯವರೆಗೆ ಬೌಲರ್‌ಗಳ ಆಟವನ್ನು ಅವಲೋಕಿಸುತ್ತ ಹೋದರೆ, ರನ್‌ಗಳನ್ನು ಯಥೇಚ್ಛವಾಗಿ ಕೊಟ್ಟಿರುವುದು ನಿಜ. ಆದರೆ ಅದರಲ್ಲೂ ಮತ್ತಷ್ಟು ಹೊಸದನ್ನು ಕಲಿಯುವತ್ತ ಬೌಲರ್‌ಗಳು ಮುಂದಾಗಿರುವುದು ಕಾಣುತ್ತದೆ. ಪ್ರವಾಹದ ವಿರುದ್ಧ ಈಜುವುದನ್ನು ರೂಢಿಸಿಕೊಳ್ಳುವ ಜಲಚರಗಳಂತೆ ಹಲವು ಬೌಲರ್‌ಗಳು ಈ ರನ್‌ಗಳ ಪ್ರವಾಹದಲ್ಲಿ ತಮ್ಮ ದಿಟ್ಟತನ ಮೆರೆಯುತ್ತಿದ್ದಾರೆ. ವಿಕೆಟ್‌ಗಳನ್ನು ಗಳಿಸುವುದರ ಜೊತೆಗೆ ಡಾಟ್‌ಬಾಲ್ ಪ್ರಯೋಗದಲ್ಲಿಯೂ ಹಿಂದೆ ಬಿದ್ದಿಲ್ಲ.

ಚುಟುಕು ಕ್ರಿಕೆಟ್ ಮಾದರಿಯಲ್ಲಿ ವಿಕೆಟ್ ಪಡೆಯುವ ಎಸೆತಕ್ಕಿರುವಷ್ಟೇ ಕಿಮ್ಮತ್ತು ರನ್ ಬಿಟ್ಟುಕೊಡದ ಡಾಟ್‌ಬಾಲ್‌ಗೂ ಇರುತ್ತದೆ ಎಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಏಕೆಂದರೆ ಒಂದು ಓವರ್‌ನಲ್ಲಿ 30-36 ರನ್ ಬೇಕಾದರೂ ಹೊಡೆಯಬಲ್ಲ ಬ್ಯಾಟರ್‌ಗಳು ಇದ್ದಾರೆ. ಅಂತಹ ಫಲಿತಾಂಶಗಳು ಈಗಾಗಲೇ ಹೊರಹೊಮ್ಮಿವೆ. ಈ ಮಾದರಿಯಲ್ಲಿ ಸಿಕ್ಸರ್, ಬೌಂಡರಿಗಳು ಬೌಲರ್ ಮೇಲೆ ಒತ್ತಡ ಹೇರಿದರೆ ರನ್ ಗಳಿಕೆಯಾಗದ ಎಸೆತಗಳು ಬ್ಯಾಟಿಂಗ್ ಮಾಡುವ ತಂಡದ ಒತ್ತಡ ಹೆಚ್ಚಿಸುತ್ತವೆ. ಇಂತಹ ಸಂಗತಿಗಳಿಂದಾಗಿಯೇ ಕ್ರಿಕೆಟ್ ರೋಚಕವಾಗುತ್ತ ಹೋಗುತ್ತದೆ.

ಅಂತಹ ರೋಚಕ ಅಂಶಗಳು ಈ ಬಾರಿಯೂ ಇವೆ. ಈ ಆವೃತ್ತಿಯಲ್ಲಿ ಕಳೆದ 60 ಪಂದ್ಯಗಳಲ್ಲಿ 21 ಸಾವಿರಕ್ಕೂ ಹೆಚ್ಚು ರನ್‌ಗಳು ಹರಿದಿವೆ. ಸಾವಿರಕ್ಕೂ ಹೆಚ್ಚು ಸಿಕ್ಸರ್‌ಗಳು ಸಿಡಿದಿವೆ. ಅದರ ನಡುವೆಯೂ ನಾಲ್ಕು ಸಾವಿರಕ್ಕೂ ಹೆಚ್ಚು ಡಾಟ್‌ಬಾಲ್‌ಗಳು ದಾಖಲಾಗಿವೆ. ಈ ಹಾದಿಯಲ್ಲಿ ಬೌಲರ್‌ಗಳು ತಮ್ಮ 'ಅಸ್ತಿತ್ವ'ಕ್ಕಾಗಿ ಹೊಸ ತಂತ್ರಗಳನ್ನು ಕಲಿತಿದ್ದಾರೆ.

ಈ ಹಿಂದಿನ ಆವೃತ್ತಿಗಳಲ್ಲಿ ಡಾಟ್‌ಬಾಲ್ ಪ್ರಯೋಗದಲ್ಲಿ ಸ್ಪಿನ್ನರ್‌ಗಳೇ ಮುಂಚೂಣಿಯಲ್ಲಿದ್ದರು. ಹರಭಜನ್ ಸಿಂಗ್, ಪೀಯೂಷ್ ಚಾವ್ಲಾ, ಅಮಿತ್ ಮಿಶ್ರಾ, ಆರ್.ಅಶ್ವಿನ್ ಹಾಗೂ ಅಫ್ಗಾನಿಸ್ತಾನದ ರಶೀದ್ ಖಾನ್ ಅವರಿಗೆ ಇದು ಕರಗತವಾಗಿತ್ತು. ಆದರೆ ಈ ಸಲದ ಟೂರ್ನಿಯಲ್ಲಿ ವೇಗಿಗಳು ಪಾರಮ್ಯ ಮೆರೆಯುತ್ತಿದ್ದಾರೆ. 17ನೇ ಆವೃತ್ತಿಯಲ್ಲಿ ಹೆಚ್ಚು ಡಾಟ್‌ಬಾಲ್ ಹಾಕಿದವರ ಪಟ್ಟಿಯ ಅಗ್ರ ಐದು ಬೌಲರ್‌ಗಳಲ್ಲಿ ಸುನಿಲ್ ನಾರಾಯಣ ಮತ್ತು ವರುಣ ಚಕ್ರವರ್ತಿ ಇಬ್ಬರೇ ಸ್ಪಿನ್ನರ್‌ಗಳು. ಉಳಿದ ಮೂವರು ವೇಗಿಗಳು.

ಈ ಮೊದಲು ಮೂರು ಸ್ಟಂಪ್‌ಗಳನ್ನು ಗುರಿಯಾಗಿಟ್ಟುಕೊಂಡು ಸ್ವಿಂಗ್, ಸ್ಪಿನ್ ಎಸೆತಗಳನ್ನು ಹಾಕುತ್ತಿದ್ದರು. ಆದರೆ ಈಗ ಆಫ್‌ಸ್ಟಂಪ್‌ನಿಂದ ದೂರ ಹಾಗೂ ವೈಡ್ ಗೆರೆಯ ಕೆಲವೇ ಮಿಲಿಮೀಟರ್‌ಗಳ ಸಮೀಪದೊಳಗೆ ಎಸೆತಗಳನ್ನು ಹಾಕುವ ಕಲೆ ಕರಗತ ಮಾಡಿಕೊಂಡಿದ್ದಾರೆ. ಔಟ್‌ಸ್ವಿಂಗ್, ಇನ್‌ಸ್ವಿಂಗ್, ಕಟರ್, ಯಾರ್ಕರ್, ಬೌನ್ಸರ್‌ಗಳ ಜೊತೆಗೆ ನಕಲ್ ಬಾಲ್‌ಗಳ (ನಿಧಾನಗತಿ ಎಸೆತಗಳು) ಪ್ರಯೋಗಕ್ಕೂ ಒತ್ತು ಸಿಕ್ಕಿದೆ. ತಂತ್ರಕ್ಕೆ ಪ್ರತಿತಂತ್ರ ಎಂಬಂತೆ ಬ್ಯಾಟರ್‌ಗಳು ಬಲಾಢ್ಯರಾದಷ್ಟೂ ಬೌಲರ್‌ಗಳೂ ಹೊಸ ಕೌಶಲಗಳನ್ನು ರೂಢಿಸಿಕೊಳ್ಳುವುದು ಅನಿವಾರ್ಯವಾಗುತ್ತಿದೆ.

ಫೀಲ್ಡಿಂಗ್ ಮತ್ತು ವಿಕೆಟ್ ಕೀಪಿಂಗ್ ತಂತ್ರಗಾರಿಕೆಯೂ ಬದಲಾಗುತ್ತಿರುವುದು ಗಮನಾರ್ಹ. ಬೌಂಡರಿ ಲೈನ್‌ನಲ್ಲಿ ಫೀಲ್ಡರ್‌ಗಳು ಪಡೆಯುತ್ತಿರುವ ಕ್ಯಾಚ್‌ಗಳು ಸಿನಿಮಾಗಳ ಸಾಹಸದೃಶ್ಯಗಳಷ್ಟೇ ರೋಚಕತೆ ಮೂಡಿಸುತ್ತಿವೆ. ಕೀಪರ್‌ಗಳು ವೈಡ್ ಆ್ಯಂಗಲ್ ಎಸೆತಗಳಿಗೆ ಮೈಯೆಲ್ಲಾ ಕಣ್ಣಾಗಿ ಇರಬೇಕಾಗಿರುವುದು ಸುಲಭದ ಕೆಲಸವಂತೂ ಅಲ್ಲ.

ಬ್ಯಾಟರ್‌ಗಳಿಗೆ ಹೆಚ್ಚು ಅನುಕೂಲ ಮಾಡಿಕೊಡುವುದರ ಕುರಿತು ಏನೇ ಟೀಕೆಗಳಿದ್ದರೂ ಕಳೆದ 17 ವರ್ಷಗಳಿಂದ ಐಪಿಎಲ್‌ನಲ್ಲಿ ಬೌಲರ್‌ಗಳು ಕಲಿತದ್ದು ಬಹಳಷ್ಟಿದೆ. ಅದರಿಂದಾಗಿಯೇ ವರ್ಷದಿಂದ ವರ್ಷಕ್ಕೆ ಬೌಲರ್‌ಗಳ ಮೌಲ್ಯವೂ ಹೆಚ್ಚುತ್ತಿದೆ. ಈ ವರ್ಷದ ಹರಾಜಿನಲ್ಲಿ ಅತಿ ಹೆಚ್ಚು ಮೌಲ್ಯ ಗಿಟ್ಟಿಸಿದ್ದು ಕೂಡ ಬೌಲರ್‌ಗಳೇ. ಮಿಚೆಲ್ ಸ್ಟಾರ್ಕ್ ಮತ್ತು ಪ್ಯಾಟ್ ಕಮಿನ್ಸ್ ಅವರೇ ಈ ಮಾತಿಗೆ ಉದಾಹರಣೆ.

'ಕ್ರಿಕೆಟ್‌ನಲ್ಲಿ ಬ್ಯಾಟರ್‌ಗಳು ದರ್ಬಾರು ನಡೆಸಬಹುದು. ಆದರೆ ಬೌಲರ್ ಮೊದಲ ಎಸೆತ ಹಾಕದೇ ಪಂದ್ಯ ಆರಂಭವಾಗುವುದಿಲ್ಲ' ಎಂದು ಇತ್ತೀಚೆಗೆ ಕಾರ್ಯಕ್ರಮವೊಂದರಲ್ಲಿ ದಿಗ್ಗಜ ಆಟಗಾರ ಯರ‍್ರಪಳ್ಳಿ ಪ್ರಸನ್ನ ಹೇಳಿದ್ದರು.

ಮಾದರಿ ಯಾವುದೇ ಇರಲಿ. ಬ್ಯಾಟಿಂಗ್ ಮತ್ತು ಬೌಲಿಂಗ್ ನಡುವೆ ಪೈಪೋಟಿ ನಡೆದರಷ್ಟೇ ಆಟ ಬೆಳೆಯುವುದು.

35 ಇನಿಂಗ್ಸ್‌ಗಳಲ್ಲಿ ದ್ವಿಶತಕ

ಈ ಬಾರಿಯ ಟೂರ್ನಿಯಲ್ಲಿ ಈಗ 60 ಪಂದ್ಯಗಳು ಮುಗಿದಿವೆ. ಆ ಪೈಕಿ 35 ಇನಿಂಗ್ಸ್‌ಗಳಲ್ಲಿ 200ಕ್ಕಿಂತ ಹೆಚ್ಚಿನ ಮೊತ್ತಗಳು ದಾಖಲಾಗಿವೆ. ಹೋದ ವರ್ಷದ ಟೂರ್ನಿಯಲ್ಲಿ ಒಟ್ಟು 37 ಬಾರಿ ಇನ್ನೂರಕ್ಕೂ ಹೆಚ್ಚಿನ ಮೊತ್ತಗಳು ದಾಖಲಾಗಿದ್ದವು. ಈ ದಾಖಲೆಯನ್ನು ಈ ಬಾರಿಯ ಆವೃತ್ತಿಯು ಮೀರುವ ಸಾಧ್ಯತೆ ಇದೆ.

ಐಪಿಎಲ್‌ನಲ್ಲಿ 240, 250 ರನ್‌ಗಳ ಮೊತ್ತಗಳು ಪದೇ ಪದೇ ದಾಖಲಾಗುತ್ತಿವೆ. ಬ್ಯಾಟಿಂಗ್ ಸ್ನೇಹಿ ಪಿಚ್‌ಗಳು ಹಾಗೂ ಭಾರತದಲ್ಲಿರುವ ಸಣ್ಣ ಸುತ್ತಳತೆಯ ಮೈದಾನಗಳು ಇದಕ್ಕೆ ಪ್ರಮುಖ ಕಾರಣ. ಸರಾಸರಿ ಪ್ರತಿ ಓವರ್‌ಗೆ ಒಂದು ಸಿಕ್ಸರ್ ದಾಖಲಾದ ಪಂದ್ಯಗಳೂ ಇವೆ. ಇದು ಈ ಮಾದರಿಯು ಬೆಳೆಯುತ್ತಿರುವ ಪರಿಯಾಗಿದೆ. ಅದಕ್ಕೆ ತಕ್ಕನಾಗಿ ಆಟಗಾರರೂ ತಮ್ಮ ಕೌಶಲಗಳನ್ನು ರೂಪಿಸಿಕೊಳ್ಳುತ್ತಿದ್ದಾರೆ

ಸೌರವ್ ಗಂಗೂಲಿ
ಡೆಲ್ಲಿ ಕ್ಯಾಪಿಟಲ್ಸ್ ತಂಡದ ಮೆಂಟರ್

ಇಂಪ್ಯಾಕ್ಟ್ ಪ್ಲೇಯರ್ ನಿಯಮ ಬೇಕಾಗಿಲ್ಲ. ನಮ್ಮಲ್ಲಿ ಮೊದಲೇ ಫ್ಲ್ಯಾಟ್ ಪಿಚ್‌ಗಳು ಇವೆ. ಬ್ಯಾಟರ್‌ಗಳಿಗೆ ಹೆಚ್ಚು ಅನುಕೂಲವಿದೆ. ಇದರಿಂದ ಬೌಲರ್‌ಗಳಿಗೆ ಹೆಚ್ಚು ಯಶಸ್ಸು ಲಭಿಸುತ್ತಿಲ್ಲ

ಮೊಹಮ್ಮದ್ ಸಿರಾಜ್
ಆರ್‌ಸಿಬಿ ಬೌಲರ್

2024ರ ಆವೃತ್ತಿಯ ಬೌಲರ್‌ಗಳು

ಬೌಲರ್	ತಂಡ	ಪಂದ್ಯ	ಓವರ್	ರನ್	ವಿಕೆಟ್	ಡಾಟ್
ಜಸ್‌ಪ್ರೀತ್ ಬೂಮ್ರಾ	ಎಂ.ಐ	13	51.5	336	20	149
ಖಲೀಲ್ ಅಹಮದ್	ಡಿಸಿ	12	44	426	14	114
ಸುನಿಲ್ ನಾರಾಯಣ	ಕೆಕೆಆರ್	12	47	312	15	111
ವರುಣ ಚಕ್ರವರ್ತಿ	ಕೆಕೆಆರ್	12	44	367	18	109
ತುಷಾರ್ ದೇಶಪಾಂಡೆ	ಸಿಎಸ್‌ಕೆ	12	44	375	16	108

ಐಪಿಎಲ್: ಡಾಟ್‌ಬಾಲ್ ಸಾಧಕರು (ಒಟ್ಟು)

ಬೌಲರ್	ವಿಕೆಟ್	ಡಾಟ್	ಪಂದ್ಯ	ಓವರ್	ಮೇಡನ್	ರನ್
ಭುವನೇಶ್ವರ್‌ಕುಮಾರ್	181	1641	172	638	14	4807
ಸುನಿಲ್ ನಾರಾಯಣ	178	1589	174	671	3	4515
ಆರ್. ಅಶ್ವಿನ್	176	1534	208	737	4	5242
ಪಿಯೂಷ್ ಚಾವ್ಲಾ	189	1327	191	636	2	4079
ಜಸ್‌ಪ್ರೀತ್ ಬೂಮ್ರಾ	165	1269	133	506	8	3714

ಅಂಕಿ ಅಂಶ: ಐಪಿಎಲ್ ವೆಬ್‌ಸೈಟ್

'ಟೈಮ್ ಬರುತ್ತೆ' ಎಂದ 'ಗೌರಿ'

ಇಂದ್ರಜಿತ್ ಲಂಕೇಶ್ ಪುತ್ರ ಸಮರ್ಜಿತ್ ಲಂಕೇಶ್ ನಾಯಕನಾಗಿ ಅಭಿನಯಿಸಿರುವ 'ಗೌರಿ' ಚಿತ್ರದ ಮೊದಲ ಗೀತೆ 'ಟೈಮ್ ಬರುತ್ತೆ' ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಇಂದ್ರಜಿತ್ ಲಂಕೇಶ್ ಈ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿದ್ದಾರೆ.

ಚಿತ್ರದ ಈ ಚೊಚ್ಚಲ ಗೀತೆಗೆ ಸಂಗೀತ ನಿರ್ದೇಶಕ ಚಂದನ್ ಶೆಟ್ಟಿ ಸಂಗೀತ ನೀಡಿ, ಹಾಡಿದ್ದಾರೆ. 'ಚಿತ್ರದಲ್ಲಿ ಒಟ್ಟು ಏಳು ಹಾಡುಗಳಿವೆ. ಐದು ಜನ ಸಂಗೀತ ನಿರ್ದೇಶಕರು ಈ ಹಾಡುಗಳಿಗೆ ಸಂಗೀತ ನೀಡಿದ್ದಾರೆ. ಭಾರತದ ಹನ್ನೆರಡಕ್ಕೂ ಅಧಿಕ ಹೆಸರಾಂತ ಗಾಯಕರು ಹಾಡಿದ್ದಾರೆ. ಮೊದಲ ಹಾಡಿನ ಲಿರಿಕಲ್ ವಿಡಿಯೋ ಬಿಡುಗಡೆಯಾಗಿದೆ. ಇದರ ಜೊತೆಗೆ ಈ ಹಾಡಿಗೆ ನಾಯಕ ಸಮರ್ಜಿತ್, ನಾಯಕಿ ಸಾನ್ಯಾ ಅಯ್ಯರ್ ಹಾಗೂ ನಟಿ ಸಂಯುಕ್ತ ಹೆಗಡೆ ರೀಲ್ಸ್ ಕೂಡ ಮಾಡಿದ್ದಾರೆ. ಶೀಘ್ರದಲ್ಲೇ ಚಿತ್ರವನ್ನು ತೆರೆಗೆ ತರುವ ಸಿದ್ಧತೆ ನಡೆಯುತ್ತಿದೆ' ಎಂದರು ಇಂದ್ರಜಿತ್ ಲಂಕೇಶ್.

ಎ.ಜೆ. ಶೆಟ್ಟಿ ಅವರ ಛಾಯಾಗ್ರಹಣವಿದ್ದು, ಮಾಸ್ತಿ ಮಂಜು ಮತ್ತು ಬಿ.ಎ. ಮಧು ಸಂಭಾಷಣೆಯಿದೆ. 'ಕಾಂತಾರ' ಚಿತ್ರದ ಖ್ಯಾತಿಯ ಮಾನಸಿ ಸುಧೀರ್ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಸಮರ್ಜಿತ್ ಲಂಕೇಶ್
ಸಾನ್ಯಾ ಅಯ್ಯರ್

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಎರಡನೇ ಆವೃತ್ತಿ ಅತಿ ಶೀಘ್ರದಲ್ಲಿ

ಮೇ 24ಕ್ಕೆ 'ಎವಿಡೆನ್ಸ್' ತೆರೆಗೆ

'ಜೋಶ್' ಖ್ಯಾತಿಯ ರೋಬೊ ಗಣೇಶನ್, ಮಾನಸ ಜೋಶಿ ನಟಿಸಿರುವ 'ಎವಿಡೆನ್ಸ್' ಚಿತ್ರ ಮೇ 24ರಂದು ತೆರೆ ಕಾಣಲಿದೆ.

ವಿಚಾರಣೆಯ ಸುತ್ತ ನಡೆಯುವ ಸಸ್ಪೆನ್ಸ್, ಥ್ರಿಲ್ಲರ್ ಕಥೆ ಜೊತೆಗೊಂದು ತ್ರಿಕೋನ ಪ್ರೇಮದ ಎಳೆ ಹೊಂದಿರುವ ಚಿತ್ರಕ್ಕೆ ಪ್ರವೀಣ್ ಸಿ.ಪಿ ಆ್ಯಕ್ಷನ್ ಕಟ್ ಹೇಳಿದ್ದಾರೆ. 'ನಾನು ಚಿತ್ರರಂಗಕ್ಕೆ ಹೊಸಬನಲ್ಲ. 'ಶ್..' ಚಿತ್ರದಿಂದ 'ಉಪೇಂದ್ರ-2' ವರೆಗೆ ಸೂಪರ್‌ಸ್ಟಾರ್ ಉಪೇಂದ್ರ ಅವರ ಜೊತೆ ಕೆಲಸ ಮಾಡಿರುವೆ. ಈ ಹಿಂದೆ ಎರಡು ಸಿನಿಮಾಗಳನ್ನು ಆರಂಭಿಸಿದರೂ ಕಂಪ್ಲೀಟ್ ಮಾಡಲು ಸಾಧ್ಯವಾಗಿರಲಿಲ್ಲ. ಈ ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ ಎಂಬುದು ಖುಷಿಯ ವಿಚಾರ' ಎನ್ನುತ್ತಾರೆ ನಿರ್ದೇಶಕ ಪ್ರವೀಣ್.

ಡಾ.ಕೊಡ್ಲಾಡಿ ಸುರೇಂದ್ರಶೆಟ್ಟಿ, ಶ್ರೀನಿವಾಸ್‌ಪ್ರಭು ಸೇರಿದಂತೆ ಹಲವರು ಈ ಚಿತ್ರಕ್ಕೆ ನಿರ್ಮಾಪಕರಾಗಿ ಕೈಜೋಡಿಸಿದ್ದಾರೆ. ಬೆಂಗಳೂರು, ಮಂಗಳೂರು, ಚಿಕ್ಕಮಗಳೂರು ಮತ್ತು ನೆಲಮಂಗಲದಲ್ಲಿ ಚಿತ್ರೀಕರಿಸಲಾಗಿರುವ ಈ ಚಿತ್ರದಲ್ಲಿ ಆಕರ್ಷ್ ಆದಿತ್ಯ, ರಚಿತಾ, ಪೂಜಿತ ಬೋಬೆಗೌಡ, ಶಶಿಧರಕೋಟೆ, ಮನಮೋಹನ್ ರೈ ಮುಂತಾದವರು ನಟಿಸಿದ್ದಾರೆ. ಆರೋನ್ ಕಾರ್ತಿಕ್ ವೆಂಕಟೇಶ್ ಸಂಗೀತ, ರವಿ ಸುವರ್ಣ ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ.



ಮಾನಸಾ ಜೋಷಿ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ 'ಅಖಿಲೇಶ್ ಯಾದವ್ ಅವರ ಮೇಲೆ ಎಷ್ಟು ಶೂಗಳನ್ನು ಎಸೆಯಲಾಯಿತು ಎಂದು ಎಣಿಸಿ', 'ಶೂಗಳು, ಚಪ್ಪಲಿಗಳನ್ನು ಅಖಿಲೇಶ್ ಅವರ ಮೇಲೆ ಎಸೆಯಲಾಗುತ್ತಿದೆ. ಅಖಿಲೇಶ್ ಅವರು ಸೋಲುತ್ತಿದ್ದಾರೆ' ಎಂಬಂಥ ಪೋಸ್ಟ್‌ಗಳು 'ಎಕ್ಸ್' ಮಾಧ್ಯಮದಲ್ಲಿ ಭಾರಿ ಸಂಖ್ಯೆಯಲ್ಲಿ ಹಂಚಿಕೆಯಾಗಿವೆ. ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ತಮ್ಮ ಚುನಾವಣಾ ಬಸ್‌ನ ಮೇಲೆ ನಿಂತು ಜನರತ್ತ ಕೈಬೀಸುತ್ತಿರುವುದು ಮತ್ತು ಇದೇ ವೇಳೆ ಜನರ ಕಡೆಯಿಂದ ಕೆಲವು ವಸ್ತುಗಳು ಬಸ್‌ನತ್ತ ಬೀಳುತ್ತಿರುವ ದೃಶ್ಯಗಳ ವಿಡಿಯೊವನ್ನು ಪೋಸ್ಟ್‌ಗಳೊಂದಿಗೆ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

✓ ಅಖಿಲೇಶ್ ಅವರು ಕನೌಜ್ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸಿದ್ದಾರೆ. ಏಪ್ರಿಲ್ 27ರಂದು ಕ್ಷೇತ್ರದ ರಸೂಲಾಬಾದ್ ಎಂಬಲ್ಲಿ ಮತಯಾಚಿಸಿದ್ದಾರೆ. ಈ ವೇಳೆ ತಮ್ಮ ಚುನಾವಣಾ ಬಸ್‌ನ ಮೇಲಿದ್ದ ಅಖಿಲೇಶ್ ಅವರ ಮೇಲೆ ಜನರು ಹೂವಿನ ಹಾರಗಳನ್ನು, ಹೂವುಗಳನ್ನು ಎಸೆದಿದ್ದರು. ಇದನ್ನೇ ತಿರುಚಿ, ಅಖಿಲೇಶ್ ಅವರ ಮೇಲೆ ಶೂ ಎಸೆಯಲಾಗುತ್ತಿದೆ ಎಂದು ತಪ್ಪು ಮಾಹಿತಿ ಹಂಚಲಾಗುತ್ತಿದೆ. ಈ ವಿಡಿಯೊವು ಮೇ 2ರಂದು ಇನ್‌ಸ್ಟಾಗ್ರಾಂ ಖಾತೆಯೊಂದರಲ್ಲಿ ಮೊದಲ ಬಾರಿಗೆ ಕಾಣಿಸಿತು. ಹೀಗೆ ಹಂಚಿಕೊಳ್ಳುವಾಗ 'ಶೂಗಳನ್ನು ಎಸೆಯಲಾಗುತ್ತಿದೆ' ಎಂದು ಹೇಳಲಾಗಿಲ್ಲ. ಜೊತೆಗೆ, ಈ ರ‍್ಯಾಲಿಯ ಕುರಿತು ಹಲವು ಪತ್ರಿಕೆಗಳು ವರದಿಗಳನ್ನು ಪ್ರಕಟಿಸಿವೆ. ಇಂಥ ಘಟನೆ ನಡೆದ ಬಗ್ಗೆ ಯಾವ ವರದಿಯಲ್ಲೂ ಉಲ್ಲೇಖವಿಲ್ಲ. ಈ ರ‍್ಯಾಲಿಯ ಪೂರ್ಣ ವಿಡಿಯೊವನ್ನು ಸಮಾಜವಾದಿ ಪಕ್ಷ ತನ್ನ ಯೂಟ್ಯೂಬ್ ಖಾತೆಯಲ್ಲಿ ಹಂಚಿಕೊಂಡಿದೆ. ಈ ಬಗ್ಗೆ ರ‍್ಯಾಲಿಯಲ್ಲಿ ಅಖಿಲೇಶ್ ಅವರ ಜೊತೆಯಿದ್ದ ಸ್ಥಳೀಯ ಶಾಸಕಿ ರೇಖಾ ವರ್ಮಾ ಅವರನ್ನೂ ಸ್ಥಳೀಯ ಪತ್ರಕರ್ತರನ್ನೂ ವಿಚಾರಿಸಲಾಯಿತು. ರ‍್ಯಾಲಿಯಲ್ಲಿ ಶೂಗಳನ್ನು ಎಸೆಯಲಾಗಿಲ್ಲ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ನಾನು ಎಂಬ ಭಾವ ನಾಶವಾಗಲಿ

ನುಡಿ ಬೆಳಗು

ಎಚ್.ಎಸ್.ನವೀನಕುಮಾರ್ ಹೊಸದುರ್ಗ

ಇದು ಎಲ್ಲರಿಗೂ ಗೊತ್ತಿರುವ ಕನಕದಾಸರ ಜನಪ್ರಿಯ ಕಥೆ. ಒಮ್ಮೆ ವೇದಾಂತಿಗಳ ಸಭೆಯಲ್ಲಿ ಕನಕದಾಸರ ಗುರುಗಳಾದ ವ್ಯಾಸತೀರ್ಥರು 'ಸ್ವರ್ಗಕ್ಕೆ ಯಾರು ಹೋಗಬಹುದು' ಎಂದು ಪ್ರಶ್ನಿಸಿದರು. ಆಗ ಕನಕರು 'ನಾನು ಹೋದರೆ ಹೋದೇನು' ಎಂದು ಉತ್ತರಿಸಿದರು. ಮೊದಲೇ ಕನಕದಾಸರ ಮೇಲೆ ಅಸೂಯೆಯಿದ್ದ ಕೆಲವು ವೇದಾಂತಿಗಳು ಕನಕ ಉದ್ಧಟತನದಿಂದ ಉತ್ತರಿಸುತ್ತಿದ್ದಾನೆ ಎಂದು ವ್ಯಾಸತೀರ್ಥರ ಬಳಿ ದೂರನ್ನಿತ್ತಾಗ, ಕನಕದಾಸರನ್ನು ಚೆನ್ನಾಗಿ ಬಲ್ಲ ಗುರುಗಳು ಅದಕ್ಕೇನೋ ಅರ್ಥವಿರಬೇಕೆಂದು ಅವರ ಬಳಿ 'ಹೀಗೇಕೆ ಹೇಳಿದೆ' ಎಂದು ಕೇಳಿದರು. ಆಗ ಕನಕದಾಸರು, 'ನಾನು' ಎಂಬ ಅಹಂಕಾರದ ಭಾವ ನಮ್ಮಿಂದ ದೂರವಾದರೆ ಯಾರು ಬೇಕಾದರೂ ಮುಕ್ತಿಯನ್ನು ಹೊಂದಿ ಸ್ವರ್ಗಕ್ಕೆ ಹೋಗಬಹುದು ಎಂಬ ಅತ್ಯಂತ ಅರ್ಥಪೂರ್ಣವಾದ ವಿವರಣೆಯನ್ನು ನೀಡಿದರು.

ಕನಕದಾಸರ ಈ ಮಾತು ಸಾರ್ವಕಾಲಿಕ. ಇಂದು ಎಲ್ಲೆಡೆಯಲ್ಲೂ 'ಎಲ್ಲವನ್ನೂ ನಾನೇ ಮಾಡಿದೆ', 'ಎಲ್ಲವೂ ನನ್ನಿಂದಲೇ' ಎಂಬಿತ್ಯಾದಿಯಾದ ಸ್ವಪ್ರಶಂಸೆಯ ಸೊಲ್ಲೇ ಹೆಚ್ಚಾಗಿ ಕೇಳಿ ಬರುತ್ತಿದೆ. ಕನ್ನಡದ ಹಿರಿಯ ಕವಿ ಎಸ್ ವಿ ಪರಮೇಶ್ವರ ಭಟ್ಟರು ತಮ್ಮ ಜನಪ್ರಿಯ ಭಾವಗೀತೆಯೊಂದರಲ್ಲಿ 'ನೀನೆಂಬ ಜ್ಯೋತಿಯಲಿ ನಾನೆಂಬ ಪತಂಗ... ಸೋತ ಉಲಿ ಏಳಲಿ ದೀಪ ಹಚ್ಚ... ನನ್ನಂತರಂಗದಲ್ಲಿ ನಂದದೆ ನಿಂದಿಪ ನಂದಾದೀಪವಾಗಿರಲಿ ದೀಪ ಹಚ್ಚ...' ಎಂಬುದಾಗಿ ಹೇಳುತ್ತಾರೆ. 'ನಾನು' ಎಂಬ ಅಹಂಕಾರದ ಪತಂಗ 'ನೀನು' ಎಂಬ ಜ್ಞಾನದ ಜ್ಯೋತಿಯಲ್ಲಿ ಸುಟ್ಟು ಹೋಗಲಿ, ಅದರ ಸೋಲಿನ ಸೊಲ್ಲು ಕೇಳಿಸಲಿ. ಆ ಜ್ಞಾನದ ಜ್ಯೋತಿ ನನ್ನನ್ನು ಸದಾ ನಿಂದಿಸುತ್ತಾ ಸರಿದಾರಿಗೆ ತರುವ ನಂದಾದೀಪವಾಗಿ ನನ್ನೆದೆಯಲ್ಲಿ ಸದಾ ಬೆಳಗಲಿ ಎನ್ನುವ ಈ ಪ್ರಾರ್ಥನೆ ಎಷ್ಟು ಅರ್ಥಪೂರ್ಣವಾಗಿದೆಯಲ್ಲವೇ? ಯಾವುದೇ ಯಶಸ್ಸಿರಬಹುದು ಅದು ಎಂದಿಗೂ ಏಕ ವ್ಯಕ್ತಿ ಪ್ರದರ್ಶನವಾಗಲು ಸಾಧ್ಯವಿಲ್ಲ. ತಂಡವಾಗಿ ಪ್ರಯತ್ನ ಪಟ್ಟಾಗ ಮಾತ್ರ ಯಶಸ್ಸು ಸಾಧ್ಯ.

ವೈಯಕ್ತಿಕ ಆಟಗಳಾದ ಟೆನ್ನಿಸ್, ಚೆಸ್ ಮುಂತಾದವುಗಳಲ್ಲಿ ಕೂಡ ಯಶಸ್ವೀ ಕ್ರೀಡಾಪಟುವಿನ ಹಿಂದೆ ಅವನಿಗೆ ಸಹಕರಿಸುವ ತಂಡ ತೆರೆಮರೆಯಲ್ಲಿ ಅವಿರತವಾಗಿ ಕೆಲಸ ಮಾಡುತ್ತಲೇ ಇರುತ್ತದೆ. ಅದಕ್ಕೇ ಹೇಳುವುದು TEAM ಎನ್ನುವ ಪದದಲ್ಲಿ 'I' ಎನ್ನುವ ಅಕ್ಷರವಿಲ್ಲ ಎಂದು. ಗೆಲುವಿಗೆ ನಾನೊಬ್ಬನೇ ಕಾರಣಕರ್ತ, ಸೋಲಿಗೆ ಮಾತ್ರ ಬೇರೆಯವರು ಹೊಣೆಗಾರರು ಎಂಬ ಭಾವ ಎಂದಿಗೂ ಸಲ್ಲ. ಸೋಲಿಗೆ ಇನ್ನೊಬ್ಬರು ಕಾರಣ ಎಂದು ನಾವು ಬೆರಳು ಮಾಡುವಾಗ ಮಿಕ್ಕ ಮೂರು ಬೆರಳುಗಳು ನಮ್ಮ ಕಡೆಯೇ ಮುಖ ಮಾಡಿರುತ್ತವೆ, ಹಾಗಾಗಿ ಆ ಸೋಲಿನಲ್ಲಿ ನನ್ನ ಪಾತ್ರ ದೊಡ್ಡದಿದೆ ಎಂಬುದನ್ನು ನಾನು ಸದಾ ಅರ್ಥ ಮಾಡಿಕೊಳ್ಳಬೇಕು. ಅಜ್ಞಾನ ಜನ್ಯವಾದ ಅಹಂಕಾರಕ್ಕೆ ಎಡೆ ಮಾಡಿಕೊಡುವ 'ನಾನು' ಎಂಬ ಭಾವವನ್ನು ಸಾಧ್ಯವಾದಷ್ಟು ತೊರೆದು, ಜ್ಞಾನಜನ್ಯವಾದ ಆತ್ಮವಿಶ್ವಾಸವನ್ನು ಹೊಂದಲು 'ನಾವು' ಎಂಬ ಭಾವನೆ ಅತಿ ಮುಖ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಮೇ 13, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಷಷ್ಠಿ ಗಂ. 26-51 ನಕ್ಷತ್ರ: ಪುನರ್ವಸು ಗಂ. 11-24 ಯೋಗ: ಶೂಲ ಗಂ. 07-41 ಕರಣ: ಕೌಲವ ಗಂ. 14-22, ಮೇಷ ಮಾಸದ 31 ನೇ ದಿನ, ಮಳೆನಕ್ಷತ್ರ: ಕೃತ್ತಿಕಾ 1.
ರಾಹುಕಾಲ : ಬೆಳಿಗ್ಗೆ 07-30 - 09-00, ಸೂರ್ಯೋದಯ : 06-09 ಸೂರ್ಯಾಸ್ತ : 06-45
ಮುಸ್ಲಿಂ ದಿನಾಂಕ : 04 ಜುಲ್ಖಾಯದ್
ಅದೃಷ್ಟ ಸಂಖ್ಯೆ : 2, 12

ಮೇಷ: ಕೆಲವೊಂದು ದುರಭ್ಯಾಸಗಳು ಮಕ್ಕಳ ಮೇಲೆ ಪರಿಣಾಮ ಬೀರುತ್ತಿರುವುದು ಪ್ರತ್ಯಕ್ಷವಾಗಿ ಗೋಚರವಾಗುತ್ತದೆ ವಾಹನ ಖರೀದಿ ವಿಚಾರಕ್ಕೆ ಶುಭಾಂತ್ಯ ದೊರೆಯಲಿದೆ.

ವೃಷಭ: ದತ್ತು ಮಕ್ಕಳ ತಂದೆ ತಾಯಿ ಆರೈಕೆಯ ನಂತರವೂ ಮಗುವಿನ ಅಸಮಾಧಾನವನ್ನು ಕಂಡು ದುಃಖಿಸುವಂತಾಗುವುದು. ಸಿನಿಮಾ ನಟರಿಗೆ ಪಾಠ ಕಲಿತು ಗೌರವಾನ್ವಿತ ವ್ಯಕ್ತಿಯನ್ನಾಗಿ ರೂಪುಗೊಳ್ಳುವ ಅವಕಾಶವಿದೆ.

ಮಿಥುನ: ಮನೆಯಲ್ಲಿನ ಪದ್ಧತಿಗಳನ್ನು ನಡೆಸಿಕೊಂಡು ಹೋಗಲು ಸಂಪೂರ್ಣ ಗಮನ ವಹಿಸಬೇಕು. ಕಾರ್ಯಕ್ಷೇತ್ರದ ಸಮಸ್ಯೆಗಳನ್ನು ಮನೆಗೆ ತರವುದು ಸರಿಯಲ್ಲ. ಮಹನೀಯರ ಸಂದೇಶ ವಾಣಿಗಳ ಪಾಲನೆ ಮಾಡುವಿರಿ.

ಕರ್ಕಾಟಕ: ಭಾಗವಹಿಸುವ ಸಭೆಯಲ್ಲಿ ಪಾಂಡಿತ್ಯಕ್ಕೆ ತಕ್ಕನಾದ ಸ್ಥಾನಮಾನವು ದೊರೆಯದೆ ಇರಬಹುದು. ಮನ ಗೆದ್ದ ಸಂಬಂಧ ಮನೆಯವರ ಮನಸ್ಸನ್ನು ಮುದಗೊಳಿಸುತ್ತದೆ. ಯಾವುದಕ್ಕೂ ಆತುರಗೊಳ್ಳದಿರಿ.

ಸಿಂಹ: ಆರಕ್ಷಕ ವರ್ಗದವರು ಜಾಗರೂಕತೆಯಿಂದ ವರ್ತಿಸಿ. ಸ್ವತಃ ನೀವೇ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾದಂತಹ ಸನ್ನಿವೇಶ ಎದುರಾಗಬಹುದು. ಖರ್ಚು ವೆಚ್ಚಗಳಲ್ಲಿ ಮಿತ ವ್ಯಯ ಸಾಧಿಸಿ.

ಕನ್ಯಾ: ಪ್ರತಿಯೊಬ್ಬರ ಬೇಕು ಬೇಡಗಳನ್ನು ಅರಿತು ತುಂಬು ಕುಟುಂಬವನ್ನು ನಿಭಾಯಿಸುತ್ತಿರುವವರನ್ನು ಅತಿಥಿಗಳು ಮುಕ್ತ ಕಂಠದಿಂದ ಶ್ಲಾಘಿಸುತ್ತಾರೆ. ಕಾಡಿನಲ್ಲಿ ಕೆಲಸ ಮಾಡುವಾಗ ವಿಷಪೂರಿತ ಜಂತುಗಳ ಮೇಲೆ ನಿಗಾ ಇರಲಿ.

ತುಲಾ: ವಿದೇಶಿ ಸಂಸ್ಥೆಯೊಂದಿಗೆ ವ್ಯವಹಾರಿಕ ಒಪ್ಪಂದ ಮಾಡಿಕೊಳ್ಳಲು ಈ ದಿನ ಸೂಕ್ತ. ಕೆಲವು ವಿಷಯಗಳು ಸರಿಯಾದ ಸಮಯಕ್ಕೆ ಮರೆತು ಹೋದಂತೆ ಆಗಿ ತೊಳಲಾಟಕ್ಕೆ ಒಳಗಾಗಬೇಕಾದೀತು.

ವೃಶ್ಚಿಕ: ಇನ್ನೊಬ್ಬರಿಗೆ ಮೋಸ ಮಾಡಲು ಪ್ರೇರೇಣೆ ಸಿಗಲಿದೆ. ಆದರೆ ಬುದ್ಧಿಯನ್ನು ಸ್ಥಿಮಿತದಲ್ಲಿ ಇರಿಸಿಕೊಳ್ಳಿರಿ. ಉಡುಪು ವಿನ್ಯಾಸಗಾರರು ಕಂಡುಕೊಂಡ ಹೊಸ ಮಾದರಿಯು ಜನರ ಮಾನಸವನ್ನು ಗೆಲ್ಲಲಿದೆ.

ಧನು: ನಿವೇಶನ ಕೊಳ್ಳುವ ನಿಮ್ಮ ಕನಸು ನನಸಾಗಲಿದೆ. ಕೆಲಸ ಕಾರ್ಯಗಳು ನಿಧಾನವಾಗಿಯಾದರೂ ನೆರವೇರುವುದು. ಹೋಟೆಲ್ ಉದ್ಯಮದವರಿಗೆ ಹೆಚ್ಚಿನ ವರಮಾನ ದೊರೆಯಲಿದೆ.

ಮಕರ: ಪೂರ್ವಿಕರ ಸಂಪಾದನೆಯ ಆಸ್ತಿಯ ಮಾರಾಟ ವಿಚಾರದಲ್ಲಿ ಅನೇಕ ಅನಿರೀಕ್ಷಿತ ತೊಂದರೆಗಳು ಎದುರಾಗುವ ಸಾಧ್ಯತೆಗಳಿವೆ. ಆತ್ಮೀಯರ ದುರ್ಮರಣದ ವಾರ್ತೆಯು ಕಂಗಾಲು ಪಟ್ಟುಕೊಳ್ಳುವಂತೆ ಮಾಡುತ್ತದೆ.

ಕುಂಭ: ಪ್ರತಿ ಬಾರಿಯಂತೆ ಈ ಬಾರಿಯು ಉತ್ತಮ ಕಾರ್ಯಕ್ರಮ ನಿರ್ವಹಣೆಗೆ ಪ್ರತಿಕ್ರಿಯೆಗಳು ಬರುತ್ತವೆ. ಕಾಲ ಕಳೆದಂತೆ ಪ್ರಕೃತಿ ಬದಲಾಗುವ ಹಾಗೆ ಮನಸ್ಸು ತಿಳಿಗೊಂಡು ಸಾಮಾನ್ಯ ಸ್ಥಿತಿಗೆ ಬರುವಿರಿ.

ಮೀನ: ಊರಿನ ಗೌರವಾನ್ವಿತ ವ್ಯಕ್ತಿಗಳೊಂದಿಗೆ ವ್ಯವಹಾರದ ಬಗ್ಗೆ ಹೇಳಿಕೊಂಡು ಅವರೊಂದಿಗೆ ಜಂಟಿ ಕಾರ್ಯಗಳನ್ನು ನಡೆಸಬಹುದು. ದವಸ ಧಾನ್ಯಗಳು ಪ್ರಾಣಿಗಳ ದಾಳಿಗೆ ತುತ್ತಾಗದಂತೆ ಜಾಗ್ರತೆಯನ್ನು ಮಾಡಿ ಸಂರಕ್ಷಿಸಿ.

ಪದಬಂಧ 5679

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೈ ಕೊನೆಗಿಟ್ಟರೆ ಹೆದರಿಕೆಯೇ? (4)
3.ಮೃಗಜಲ ಇಲ್ಲಿ ಗೋಚರಿಸುತ್ತಿದೆ (4)
5.ಮೃತ್ಯುದೇವತೆ ಕೊನೆಗಿದ್ದಾಗಿನ ಸೂತ್ರ (3)
7.ತರ್ಕ ಮಾಡುತ್ತಿರುವ ವ್ಯಾಪಾರಿ (3)
9.ನಾವೆಯನ್ನು ನಡೆಸುವವನೀತ (3)
10.ಈತ ವಿಲಾಸಪ್ರಿಯ (3)
11.ವಾಲಿಯ ಮಗನಿವನು (3)
15.ಅತಿಶಯವಾದ ಪ್ರೀತಿ (4)
16.ವನದಲ್ಲಿ ಸಿಕ್ಕಿರುವ ಆದಾಯ (4)

ಮೇಲಿಂದ ಕೆಳಕ್ಕೆ
1.ಬಂಧುವಿಗೆ ಜೋಡುನುಡಿಯಾಗುವ ಈಕೆ ಒಡಹುಟ್ಟಿದವಳು (3)
2.ಒಂದು ಪ್ರದೇಶದಿಂದ ಹೊರಕ್ಕೆ ಕಳಿಸುವ ವಸ್ತು (2)
3.ಈತ ಲಗ್ನವಾಗುತ್ತಿರುವವ (5)
4.ಹಾಲಿನ ರಸವತ್ತಾದ ಭಾಗ (2)
6.ಎಂದಿನಂತೆ ಎಂದು ಹೀಗೆನ್ನಿ (5)
8.ಸುಗಂಧದ್ರವ್ಯ ನೀಡುವ ಕೊಂಬಿಲ್ಲದ ಜಿಂಕೆ (5)
9.ಒಳಜಗಳವಿದು (5)
12.ದಶಮಾನದಲ್ಲಿರುವ ಹಲ್ಲುಕಾಣುತ್ತಿದೆಯೇ? (3)
13.ಸಂಕಟದಿಂದ ಕಟ್ಟಿರುವ ತೆರ (2)
14.ಅಭಾವದಲ್ಲಿ ಬಂದಿಳಿದ ಅಕ್ಕನ ಗಂಡ (2)



5678ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಮಾಸ 2.ಅರಸ 6.ದಯಾಳು 7.ರಮಣಿ 8.ಗಟಾರ 10.ಮದ್ದು 11.ಕನ್ನಡಿ 13.ಹೆಣ 14.ಕದನ 15.ಅಧ್ಯಾಯ 16.ಹಾರವ 17.ಕೆಡವು 18.ನವೀನ

ಮೇಲಿಂದ ಕೆಳಕ್ಕೆ:
1.ಸವಿಗನಸು 2.ಸದರ 3.ಅಳು 4.ಸರಹದ್ದು 5.ಋಣಿ 9.ಅಂಕಣ 10.ಮಡಿಲು 12.ವಿಮಾನಯಾನ 13.ಹೆಬ್ಬಯಕೆ 14.ಕವನ 15.ಅಕ್ಕ 16.ಹಾವು

ಸುಡೊಕು 6064

3	9		2		5		6	
			4			8		5
	4	5			9		3	
4	6		9		7			
				4		1		6
8		7	5		6		4	
		4			2			7
7	2			5		6		3
	8		7				5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6063 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ಟಿಎಂಸಿ ನಾಯಕರ ವಿರುದ್ಧ ಪ್ರತಿಭಟನೆ ನಡೆಸಿದವರಿಗೆ ಹಣ ನೀಡಿದ ಪ್ರಕರಣ • ವಿಡಿಯೊ ನಕಲಿ: ಬಿಜೆಪಿ ಆರೋಪ

ಸಂದೇಶ್‌ಖಾಲಿ: ಮತ್ತೊಂದು ವಿಡಿಯೊ

ಕೋಲ್ಕತ್ತ (ಪಿಟಿಐ): ಸಂದೇಶ್‌ಖಾಲಿಯಲ್ಲಿ ಲೈಂಗಿಕ ದೌರ್ಜನ್ಯ ಮತ್ತು ಭೂ ಹಗರಣದ ಆರೋಪ ಹೊತ್ತಿರುವ ಟಿಎಂಸಿ ನಾಯಕ ಶಾಜಹಾನ್ ಶೇಖ್ ಮತ್ತು ಅವರ ಆಪ್ತರ ವಿರುದ್ಧದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದಕ್ಕಾಗಿ 70ಕ್ಕೂ ಹೆಚ್ಚು ಮಹಿಳೆಯರಿಗೆ ತಲಾ ₹2,000 ನೀಡಲಾಗಿದೆ ಎಂದು ಬಿಜೆಪಿ ಸ್ಥಳೀಯ ನಾಯಕರೊಬ್ಬರು ಹೇಳಿರುವ ವಿಡಿಯೊ ವ್ಯಾಪಕವಾಗಿ ಹರಿದಾಡುತ್ತಿದೆ.

ಶನಿವಾರ ರಾತ್ರಿ ಬಿಡುಗಡೆ ಆಗಿರುವ ಸುಮಾರು 45 ನಿಮಿಷಗಳ ಈ ವಿಡಿಯೊದಲ್ಲಿ ಸಂದೇಶ್‌ಖಾಲಿಯ ಬಿಜೆಪಿ ಮಂಡಲ ಅಧ್ಯಕ್ಷ ಎನ್ನಲಾದ ಗಂಗಾಧರ ಕಾಯಲ್ ಎಂಬುವವರು ಈ ಕುರಿತು ಮಾತನಾಡಿದ್ದಾರೆ. ಹಿಂದಿನ ವಾರ ಬಿಡುಗಡೆಯಾಗಿದ್ದ ವಿಡಿಯೊ ಸಹ ಕಾಯಲ್ ಎಂಬ ವ್ಯಕ್ತಿಗೇ ಸೇರಿದ್ದಾಗಿತ್ತು.

ಆದರೆ, ಈ ಯಾವುದೇ ವಿಡಿಯೊಗಳ ಸತ್ಯಾಸತ್ಯತೆಯನ್ನು ಖಚಿತ ಪಡಿಸಿಕೊಳ್ಳಲು ಸಾಧ್ಯವಾಗಿಲ್ಲ ಎಂದು ಸುದ್ದಿಸಂಸ್ಥೆ ತಿಳಿಸಿದೆ.

'ಪ್ರತಿಭಟನಕಾರರಲ್ಲಿ ಶೇ 30ರಷ್ಟು ಮಹಿಳೆಯರೇ ಇರುವ 50 ಬೂತ್‌ಗಳಲ್ಲಿ ಹಂಚಲು ₹2.5 ಲಕ್ಷ ಹಣ ಬೇಕು. ಇಲ್ಲಿ ಎಸ್‌.ಸಿ, ಎಸ್‌.ಟಿ ಮತ್ತು ಒಬಿಸಿ ಜನರಿಗೆ ಹಣ ಪಾವತಿಸಬೇಕು. ಪ್ರತಿಭಟನೆ ಸಂದರ್ಭದಲ್ಲಿ ಮುಂದಿನ ಸಾಲಿನಲ್ಲಿ ಮಹಿಳೆಯರು ಇರುವಂತೆ ನೋಡಿಕೊಳ್ಳಬೇಕಿದೆ' ಎಂದು ಅವರು ಹೇಳಿರುವುದು ವಿಡಿಯೊದಲ್ಲಿದೆ.

ವಿಡಿಯೊ ಕುರಿತು ಪ್ರತಿಕ್ರಿಯೆಗಾಗಿ ಕಾಯಲ್ ಅವರನ್ನು ಸಂಪರ್ಕಿಸಲು ಸಾಧ್ಯವಾಗಲಿಲ್ಲ.

ಟಿಎಂಸಿ ವಕ್ತಾರರಾದ ರಿಜು ದತ್ತಾ ಅವರು, 'ಸಂದೇಶ್‌ಖಾಲಿ ಕುರಿತು ಬಿಜೆಪಿ ರೂಪಿಸಿದ್ದ ನಕಲಿ ನಿರೂಪಣೆಯ ಸತ್ಯಾಂಶ ಹೊರಬೀಳುತ್ತಿದೆ' ಎಂದಿದ್ದಾರೆ.

ಸಂದೇಶ್‌ಖಾಲಿ ಪ್ರಕರಣಕ್ಕೆ ಸಂಬಂಧಿಸಿದ ಬಹು ಉದ್ದೇಶಿತ ವಿಡಿಯೊಗಳು ಕೆಲ ದಿನಗಳಿಂದ ಬಹಿರಂಗವಾಗುತ್ತಿದ್ದು, ಟಿಎಂಸಿ ಅದನ್ನು ಹಂಚಿಕೊಳ್ಳುತ್ತಿದೆ. ಮೇ 4ರಂದು ಬಿಡುಗಡೆ ಆಗಿದ್ದ ಮೊದಲ ವಿಡಿಯೊ ಟೇಪ್‌ನಲ್ಲಿ, 'ಈ ಕುರಿತ ಇಡೀ ಪಿತೂರಿಯಲ್ಲಿ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಕೈವಾಡ ಇದೆ' ಎಂದು ಕಾಯಲ್ ಎಂಬುವವರು ಹೇಳಿರುವುದು ದಾಖಲಾಗಿದೆ.

ಎರಡನೇ ವಿಡಿಯೊದಲ್ಲಿ, 'ಸ್ಥಳೀಯ ಬಿಜೆಪಿ ನಾಯಕರೊಬ್ಬರು ಹಲವಾರು ಮಹಿಳೆಯರಿಂದ ಖಾಲಿ ಹಾಳೆಯ ಮೇಲೆ ಸಹಿ ತೆಗೆದುಕೊಂಡಿದ್ದರು. ನಂತರ, ಟಿಎಂಸಿ ಮುಖಂಡರಿಂದ ಲೈಂಗಿಕ ದೌರ್ಜನ್ಯ ನಡೆದಿದೆ ಎಂಬ ದೂರುಗಳನ್ನು ಅದೇ ಹಾಳೆಗಳ ಮೇಲೆ ಬರೆದು ಠಾಣೆಗೆ ನೀಡಲಾಗಿದೆ' ಎಂದು ಮಹಿಳೆಯೊಬ್ಬರು ಆರೋಪಿಸಿರುವುದು ದಾಖಲಾಗಿತ್ತು.

ಮತ್ತೊಂದು ವಿಡಿಯೊ ಕ್ಲಿಪ್‌ನಲ್ಲಿ, ಬಶೀರ್‌ಹಾಟ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರೇಖಾ ಪಾತ್ರಾ ಅವರು, 'ಅತ್ಯಾಚಾರ ಸಂತ್ರಸ್ತೆಯರನ್ನು ರಾಷ್ಟ್ರಪತಿಗಳ ಭೇಟಿಗೆಂದು ದೆಹಲಿಗೆ ಕರೆದೊಯ್ದು ಕುರಿತು ನನಗೆ ತಿಳಿದಿಲ್ಲ' ಎಂದು ಹೇಳಿದ್ದು ಬಹಿರಂಗವಾಗಿತ್ತು.

ಇವೆಲ್ಲ ನಕಲಿ ವಿಡಿಯೊಗಳು–ಬಿಜೆಪಿ: 'ಈ ಸಂಬಂಧ ಬಿಡುಗಡೆ ಆಗಿರುವ ಎಲ್ಲ ವಿಡಿಯೊಗಳು ನಕಲಿ ಆಗಿದ್ದು, ಅವುಗಳನ್ನು ಟಿಎಂಸಿ ಬಳಸಿಕೊಳ್ಳುತ್ತಿದೆ. ಟಿಎಂಸಿಗೆ ರಾಷ್ಟ್ರೀಯ ಮಹಿಳಾ ಆಯೋಗ ಮತ್ತು ಮಹಿಳೆಯರ ಬಗ್ಗೆ ಕನಿಷ್ಠ ಗೌರವವೂ ಇಲ್ಲವಾಗಿದೆ' ಎಂದು ಬಿಜೆಪಿ ರಾಜ್ಯ ವಕ್ತಾರರಾದ ಸಮಿಕ್ ಭಟ್ಟಾಚಾರ್ಯ ಹೇಳಿದ್ದಾರೆ.

'ರಾಜ್ಯಪಾಲರ ರಾಜೀನಾಮೆ ಕೇಳಿಲ್ಲವೇಕೆ: ಮಮತಾ ಪ್ರಶ್ನೆ

ಬರಾಸತ್ (ಪಿಟಿಐ): 'ಸಂದೇಶ್‌ಖಾಲಿ ಕುರಿತು ಸುಳ್ಳುಗಳನ್ನು ಹೇಳುವುದನ್ನು ಮುಂದುವರಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, ರಾಜ್ಯಪಾಲ ಸಿ.ವಿ. ಆನಂದ ಬೋಸ್ ವಿರುದ್ಧದ ಲೈಂಗಿಕ ಕಿರುಕುಳ ಆರೋಪದ ಕುರಿತು ಏಕೆ ಮೌನವಾಗಿದ್ದಾರೆ. ರಾಜ್ಯಪಾಲರಿಗೆ ರಾಜೀನಾಮೆ ನೀಡುವಂತೆ ಅವರು ಏಕೆ ಕೇಳುತ್ತಿಲ್ಲ' ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪ್ರಶ್ನಿಸಿದರು.

ಎನ್‌ಸಿಡಬ್ಲ್ಯು ಅಧ್ಯಕ್ಷೆ ವಿರುದ್ಧ ಆಯೋಗಕ್ಕೆ ದೂರು

ನವದೆಹಲಿ (ಪಿಟಿಐ): ಸಂದೇಶ್‌ಖಾಲಿಯಲ್ಲಿನ ಅಮಾಯಕ ಮಹಿಳೆಯರನ್ನು ತಮ್ಮ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುವ ಮೂಲಕ ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ರೇಖಾ ಶರ್ಮಾ, ಬಿಜೆಪಿ ನಾಯಕ ಪಿಯಾಲಿ ದಾಸ್ ಅವರು ಕ್ರಿಮಿನಲ್ ಪಿತೂರಿ ನಡೆಸಿದ್ದಾರೆ ಎಂದು ಆರೋಪಿಸಿ ಟಿಎಂಸಿ ಭಾನುವಾರ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದೆ.

ಈ ಇಬ್ಬರು 'ನಕಲಿ, ವಂಚನೆ, ಮೋಸ, ಬೆದರಿಕೆ ಮತ್ತು ಕ್ರಿಮಿನಲ್ ಪಿತೂರಿಯಂತಹ ಗಂಭೀರ ಅಪರಾಧಗಳನ್ನು ಎಸಗಿದ್ದಾರೆ' ಎಂದು ದೂರಿನಲ್ಲಿ ತಿಳಿಸಲಾಗಿದೆ.

ಸಂದೇಶ್‌ಖಾಲಿಯ ಮಹಿಳೆಯೊಬ್ಬರ ಸಂದರ್ಶನ ಉಲ್ಲೇಖಿಸಿರುವ ಟಿಎಂಸಿ, ಈ ವಿಷಯವನ್ನು ತುರ್ತಾಗಿ ಚುನಾವಣಾ ಆಯೋಗದ ಗಮನಕ್ಕೆ ತರಲಾಗುತ್ತಿದ್ದು, ತಕ್ಷಣವೇ ಮಧ್ಯ ಪ್ರವೇಶಿಸುವಂತೆ ಕೋರಿದೆ.

ಟಿಎಂಸಿ ಗೂಂಡಾಗಳಿಂದ ಬೆದರಿಕೆ

ಬ್ಯಾರಕ್‌ಪುರ/ಹೂಗ್ಲಿ (ಪಿಟಿಐ): ಸಂದೇಶ್‌ಖಾಲಿಯಲ್ಲಿ ಟಿಎಂಸಿ ನಾಯಕರಿಂದ ದೌರ್ಜನ್ಯಕ್ಕೆ ಒಳಗಾಗಿರುವ ಮಹಿಳೆಯರಿಗೆ ಆಡಳಿತಾರೂಢ ಪಕ್ಷದ ಗೂಂಡಾಗಳು ಬೆದರಿಕೆ ಹಾಕುತ್ತಿದ್ದಾರೆ ಎಂದು ದೂರಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಟಿಎಂಸಿಯು 'ವೋಟ್ ಬ್ಯಾಂಕ್' ರಾಜಕೀಯಕ್ಕಾಗಿ ಈ ಪ್ರಕರಣದಲ್ಲಿ ಭಾಗಿಯಾಗಿರುವ ಅಪರಾಧಿಗಳನ್ನು ರಕ್ಷಿಸುತ್ತಿದೆ ಎಂದು ಟೀಕಿಸಿದರು.

ಬ್ಯಾರಕ್‌ಪುರ ಮತ್ತು ಹೂಗ್ಲಿಯಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ಟಿಎಂಸಿ ಆಳ್ವಿಕೆಯಲ್ಲಿ ಪಶ್ಚಿಮ ಬಂಗಾಳದಲ್ಲಿ ಹಿಂದೂಗಳು ಎರಡನೇ ದರ್ಜೆಯ ಪ್ರಜೆಗಳಂತಾಗಿದ್ದಾರೆ' ಎಂದು ಆರೋಪಿಸಿದರು.

'ಸಂದೇಶ್‌ಖಾಲಿಯಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಎಸಗಿದ ಟಿಎಂಸಿಯ ಯಾರೊಬ್ಬರನ್ನೂ ಬಿಡುವುದಿಲ್ಲ' ಎಂದು ಹೇಳಿದರು.

ಟಿಎಂಸಿ ಆಡಳಿತದಲ್ಲಿ ಬಂಗಾಳವು ಭ್ರಷ್ಟಾಚಾರ ಮತ್ತು ಬಾಂಬ್ ತಯಾರಿಕೆಯ ಗುಡಿ ಕೈಗಾರಿಕೆಯಾಗಿ ಮಾರ್ಪಟ್ಟಿದೆ. ರಾಜ್ಯದ ಆಡಳಿತ ವ್ಯವಸ್ಥೆಯು ವೋಟ್ ಬ್ಯಾಂಕ್‌ಗಾಗಿ ಪೂರ್ಣವಾಗಿ ಶರಣಾಗಿದೆ. ಇಲ್ಲಿ ಭಗವಾನ್ ಶ್ರೀರಾಮನ ಹೆಸರನ್ನು ಉಲ್ಲೇಖಿಸಲು ಅಥವಾ ರಾಮನವಮಿ ಆಚರಿಸಲು ಸಾಧ್ಯವಿಲ್ಲದಂತಾಗಿದೆ ಎಂದು ಅವರು ಆರೋಪಿಸಿದರು.

ಸುದ್ದಿ 2 ನಿಮಿಷ

ತಪ್ಪಿತಸ್ಥ ಆನ್‌ಲೈನ್ ಪರೀಕ್ಷೆ ಬರೆಯಬಹುದೆ: ಬಾಂಬೆ ಹೈಕೋರ್ಟ್

ಮುಂಬೈ (ಪಿಟಿಐ): '2006ರಲ್ಲಿ ಮುಂಬೈ ಸ್ಥಳೀಯ ರೈಲುಗಳ ಬೋಗಿಗಳಲ್ಲಿ ನಡೆದ ಸರಣಿ ಸ್ಫೋಟ ಪ್ರಕರಣದ ಅಪರಾಧಿಗೆ ಆನ್‌ಲೈನ್ ಮೂಲಕ ಕಾನೂನು ಪರೀಕ್ಷೆ ಬರೆಯಲು ಅವಕಾಶ ನೀಡಬಹುದೇ' ಎಂದು ಮುಂಬೈ ವಿಶ್ವವಿದ್ಯಾಲಯಕ್ಕೆ ಬಾಂಬೆ ಹೈಕೋರ್ಟ್ ಪ್ರಶ್ನಿಸಿದೆ.

ಈ ಕುರಿತು ಶುಕ್ರವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಮಕರಂದ್ ಕಾರ್ಣಿಕ್ ಅವರಿದ್ದ ವಿಭಾಗೀಯ ಪೀಠವು, ಭದ್ರತಾ ಕಾರಣಗಳಿಂದಾಗಿ ಸರಣಿ ಬಾಂಬ್ ಸ್ಫೋಟದ ಅಪರಾಧಿ ಮೊಹಮ್ಮದ್ ಸಾಜಿದ್ ಮಾರ್ಘೂಬ್ ಅನ್ಸಾರಿಗೆ ಆನ್‌ಲೈನ್ ಮೂಲಕ ಪರೀಕ್ಷೆ ಬರೆಯಲು ಅವಕಾಶ ನೀಡಬಹುದೇ ಎಂಬುದನ್ನು ತಿಳಿಸುವಂತೆ ವಿಶ್ವವಿದ್ಯಾಲಯವನ್ನು ಕೇಳಿದರು.

ಈ ಪ್ರಕರಣದಲ್ಲಿ ಅನ್ಸಾರಿ ಮತ್ತು ಇತರರು ಅಪರಾಧಿಗಳು ಎಂದು ಸಾಬೀತಾಗಿತ್ತು. ಅನ್ಸಾರಿಯು, ಸಿದ್ಧಾರ್ಥ ಕಾನೂನು ಕಾಲೇಜಿನಲ್ಲಿ ಮೇ 3ರಿಂದ ಮೇ 15ರವರೆಗೆ ನಡೆಯಲಿರುವ ಎರಡನೇ ಸೆಮಿಸ್ಟರ್ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು ಎಂದು ಕೋರಿದರು. ಈ ವೇಳೆ, ಅನ್ಸಾರಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಿದ್ದ ನ್ಯಾಯಾಲಯವು, ಇದಕ್ಕೆ ಅಗತ್ಯವಿರುವ ಕ್ರಮ ಕೈಗೊಳ್ಳುವಂತೆ ನಾಸಿಕ್ ಕೇಂದ್ರೀಯ ಕಾರಾಗೃಹದ ಅಧಿಕಾರಿಗಳಿಗೆ ಸೂಚಿಸಿತ್ತು.

ಆದರೆ, ಮೇ 3ರಿಂದ 9ರವರೆಗಿನ ಪರೀಕ್ಷೆಗಳಿಗೆ ಹಾಜರಾಗಲು ತನ್ನಿಂದ ಸಾಧ್ಯವಾಗಿಲ್ಲ ಎಂದು ಅನ್ಸಾರಿ ಮತ್ತೆ ಕೋರ್ಟ್ ಮೆಟ್ಟಿಲೇರಿದ್ದ. ಈ ಹಿನ್ನೆಲೆಯಲ್ಲಿ ಈ ಕುರಿತು ಜೂನ್ 5ರ ಒಳಗೆ ಪ್ರಮಾಣಪತ್ರ ಸಲ್ಲಿಸುವಂತೆ ಕಾರಾಗೃಹದ ಅಧಿಕಾರಿಗೆ ಸೂಚಿಸಿರುವ ನ್ಯಾಯಾಲಯವು, ಈ ಕುರಿತ ಮುಂದಿನ ವಿಚಾರಣೆಯನ್ನು ಜೂನ್ 10ಕ್ಕೆ ನಿಗದಿಪಡಿಸಿದೆ.

2 ಆಸ್ಪತ್ರೆಗಳಿಗೆ ಬಾಂಬ್ ಬೆದರಿಕೆ

ನವದೆಹಲಿ (ಪಿಟಿಐ): ಇ–ಮೇಲ್ ಮೂಲಕ ದೆಹಲಿಯ ಎರಡು ಆಸ್ಪತ್ರೆಗಳಿಗೆ ಬಾಂಬ್ ಬೆದರಿಕೆ ಸಂದೇಶ ನೀಡಲಾಗಿದೆ ಎಂದು ಉಪ ಪೊಲೀಸ್ ಆಯುಕ್ತೆ (ಉತ್ತರ) ಎಂ.ಕೆ. ಮೀನಾ ಅವರು ತಿಳಿಸಿದರು.

'ಬುರಾರಿ ಆಸ್ಪತ್ರೆಯಲ್ಲಿ ಬಾಂಬ್ ಇರಿಸಿರುವುದಾಗಿ ಇ–ಮೇಲ್ ಸಂದೇಶ ನೀಡಲಾಗಿತ್ತು. ಕೂಡಲೇ ಸ್ಥಳೀಯ ಪೊಲೀಸರು, ಬಾಂಬ್ ನಿಷ್ಕ್ರಿಯ ತಂಡ, ಶ್ವಾನದಳದವರು ಸ್ಥಳಕ್ಕೆ ಧಾವಿಸಿ ಶೋಧ ಕಾರ್ಯ ನಡೆಸಿದರು. ಯಾವುದೇ ಶಂಕಾಸ್ಪದ ವಸ್ತು ಪತ್ತೆಯಾಗಿಲ್ಲ ಎಂದು ಅವರು ತಿಳಿಸಿದರು.

ಸಂಜಯ್ ಗಾಂಧಿ ಆಸ್ಪತ್ರೆಗೂ ಬೆದರಿಕೆ ಸಂದೇಶ ಬಂದಿತ್ತು. ಪೊಲೀಸರು ತೆರಳಿ ಶೋಧ ಕಾರ್ಯಾಚರಣೆ ನಡೆಸಿದರು ಎಂದು ಪೊಲೀಸರು ಹೇಳಿದ್ದಾರೆ.

ದೆಹಲಿಯ ಹಲವಾರು ಶಾಲೆಗಳಿಗೆ ಇತ್ತೀಚೆಗಷ್ಟೆ ಬೆದರಿಕೆ ಇ–ಮೇಲ್ ಕಳುಹಿಸಲಾಗಿತ್ತು.

ಕೇಜ್ರಿವಾಲ್ ಮೇಲ್ಮನವಿ: ಇಂದು ವಿಚಾರಣೆ ಸಾಧ್ಯತೆ

ನವದೆಹಲಿ(ಪಿಟಿಐ): ಕ್ರಿಮಿನಲ್ ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿ ತಮಗೆ ಸಮನ್ಸ್ ನೀಡಿರುವುದನ್ನು ಎತ್ತಿಹಿಡಿದು ದೆಹಲಿ ಹೈಕೋರ್ಟ್ ನೀಡಿರುವ ಆದೇಶ ಪ್ರಶ್ನಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಲ್ಲಿಸಿರುವ ಮೇಲ್ಮನವಿಯು ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರ ವಿಚಾರಣೆಗೆ ಬರಲಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ದೀಪಂಕರ್ ದತ್ತಾ ಅವರಿರುವ ಪೀಠವು ಈ ಅರ್ಜಿಯ ವಿಚಾರಣೆ ನಡೆಸುವ ಸಾಧ್ಯತೆ ಇದೆ.

'ಬಿಜೆಪಿ ಐಟಿ ವಿಭಾಗಕ್ಕೆ ಸಂಬಂಧಿಸಿದ, ಧ್ರುವ ರಾಠಿ ಅವರ ವಿಡಿಯೊವನ್ನು ಮರು ಟ್ವೀಟ್ ಮಾಡುವ ಮೂಲಕ ನಾನು ತಪ್ಪು ಮಾಡಿರುವೆ' ಎಂಬುದಾಗಿ ಕೇಜ್ರಿವಾಲ್ ಅವರು ಫೆಬ್ರುವರಿ 26ರಂದು ಸುಪ್ರೀಂ ಕೋರ್ಟ್‌ಗೆ ತಿಳಿಸಿದ್ದರು.

'ಈ ವಿಚಾರವಾಗಿ ದೂರುದಾರರಲ್ಲಿ ಕ್ಷಮೆ ಕೇಳುವಿರಾ' ಎಂದು ಮಾರ್ಚ್ 11ರಂದು ಸುಪ್ರೀಂ ಕೋರ್ಟ್ ಕೇಜ್ರಿವಾಲ್ ಅವರನ್ನು ಕೇಳಿತ್ತು.

ಇದಕ್ಕೆ ಪ್ರತಿಕ್ರಿಯಿಸಿದ್ದ ದೂರುದಾರ ವಿಕಾಸ್ ಸಾಂಕೃತ್ಯಾಯನ ಎಂಬುವವರು, ಸಾಮಾಜಿಕ ಜಾಲತಾಣಗಳಾದ 'ಎಕ್ಸ್' ಅಥವಾ ಇನ್‌ಸ್ಟಾಗ್ರಾಮ್ ಮೂಲಕ ಕೇಜ್ರಿವಾಲ್ ಕ್ಷಮಾಪಣೆ ಕೋರಬಹುದು ಎಂದು ಸುಪ್ರೀಂ ಕೋರ್ಟ್‌ಗೆ ತಿಳಿಸಿದ್ದರು.

'ಮರುಟ್ವೀಟ್ ಮಾಡುವ ಮೂಲಕ ನಾನು ತಪ್ಪು ಮಾಡಿದ್ದೇನೆ ಎಂದಷ್ಟೆ ನನ್ನ ಕಕ್ಷಿದಾರ ಹೇಳಬಹುದು' ಎಂದು ಕೇಜ್ರಿವಾಲ್ ಪರ ವಾದಿಸಿದ್ದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ನ್ಯಾಯಾಲಯಕ್ಕೆ ತಿಳಿಸಿದ್ದರು.

ವಾದ–ಪ್ರತಿವಾದ ಆಲಿಸಿದ್ದ ಸುಪ್ರೀಂ ಕೋರ್ಟ್, ಕೇಜ್ರಿವಾಲ್‌ಗೆ ಯಾವುದೇ ನೋಟಿಸ್ ನೀಡಿರಲಿಲ್ಲ. ಅಲ್ಲದೇ, 'ಕೇಜ್ರಿವಾಲ್ ತಮ್ಮ ತಪ್ಪನ್ನು ಒಪ್ಪಿಕೊಂಡಿರುವ ಕಾರಣ ಪ್ರಕರಣವನ್ನು ಮುಕ್ತಾಯಗೊಳಿಸಲು ಇಚ್ಛಿಸುವಿರಾ' ಎಂದು ಅರ್ಜಿದಾರರನ್ನು ಫೆಬ್ರುವರಿ 26ರಂದು ಪ್ರಶ್ನಿಸಿತ್ತು.

ಉತ್ತರಾಖಂಡದ ಬದರೀನಾಥ ದೇವಾಲಯದ ಬಾಗಿಲನ್ನು ಭಾನುವಾರ ತೆರೆದ ಸಂದರ್ಭ –ಪಿಟಿಐ ಚಿತ್ರ

ಭಕ್ತರಿಗಾಗಿ ತೆರೆದ ಬದರೀನಾಥ ದೇಗುಲ ದ್ವಾರ

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದ ಗಢವಾಲ್‌ನಲ್ಲಿಯ ಪ್ರಸಿದ್ಧ ಬದ್ರಿನಾಥ ದೇವಾಲಯವನ್ನು ಭಾನುವಾರ ಭಕ್ತರಿಗಾಗಿ ತೆರೆಯಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಳಿಗಾಲದ ಆರು ತಿಂಗಳು ಈ ದೇವಾಲಯದ ಬಾಗಿಲು ಮುಚ್ಚಲಾಗಿತ್ತು. ಚಾರ್‌ಧಾಮ ಯಾತ್ರೆಯು (ಬದರೀನಾಥ, ಕೇದಾರನಾಥ, ಯಮನೋತ್ರಿ ಮತ್ತು ಗಂಗೋತ್ರಿ) ಆರಂಭವಾದ ಹಿನ್ನೆಲೆಯಲ್ಲಿ ಈ ದೇವಾಲಯದ ಬಾಗಿಲು ತೆರೆಯಲಾಯಿತು.

ದೇವಸ್ಥಾನದ ಆವರಣದಲ್ಲಿ ಭಾರಿ ಸಿದ್ಧತೆ ಮಾಡಲಾಗಿತ್ತು. 15 ಕ್ವಿಂಟಲ್ ಹೂವಿನಿಂದ ದೇವಸ್ಥಾನವನ್ನು ಅಲಂಕರಿಸಲಾಗಿತ್ತು. ಭಕ್ತರು ಭಾರಿ ಸಂಖ್ಯೆಯಲ್ಲಿ ದೇವಸ್ಥಾನದ ಆವರಣದಲ್ಲಿ ನೆರೆದಿದ್ದರು. ಬೆಳಿಗ್ಗೆ 6 ಗಂಟೆಗೆ ಮಂತ್ರ ಘೋಷಗಳು ಮತ್ತು ಡೋಲು, ನಗಾರಿಗಳ ಸದ್ದಿನ ಜೊತೆಗೆ ದೇವಸ್ಥಾನದ ಬಾಗಿಲು ತೆರೆಯಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ನೆರೆದಿದ್ದ ಭಕ್ತರಿಗೆ ಶುಭ ಕೋರಿದರು. ದೇವಾಲಯದ ಮುಖ್ಯ ಅರ್ಚಕ ಈಶ್ವರ್ ಪ್ರಸಾದ್ ನಂಬೂದಿರಿ, ಬದರೀನಾಥ–ಕೇದಾರನಾಥ ದೇವಸ್ಥಾನ ಸಮಿತಿಯ ಮುಖ್ಯಸ್ಥ ಅಜೇಂದ್ರ ಅಜಯ್ ಮತ್ತು ಚಮೋಲಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಹಿಮಾಂಶು ಕುರಾನ ಮತ್ತಿತರ ಗಣ್ಯರು ಈ ವೇಳೆ ಉಪಸ್ಥಿತರಿದ್ದರು.

ಶನಿವಾರ ಸಂಜೆ 4 ಗಂಟೆವರೆಗೆ 7,37,885 ಜನರು ಬದರೀನಾಥ ದರ್ಶನಕ್ಕಾಗಿ ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಂಡಿದ್ದಾರೆ ಎನ್ನಲಾಗಿದೆ.

'ಬಿಜೆಪಿಯವರು ಪ್ರಧಾನಿ ಆಗಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿಯವರು ಈ ಬಾರಿ ಪ್ರಧಾನಿ ಆಗುವುದಿಲ್ಲ. ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟವೇ ಅಧಿಕಾರಕ್ಕೆ ಬರಲಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

'ನರೇಂದ್ರ ಮೋದಿ ಮತ್ತೆ ಪ್ರಧಾನಿಯಾದರೆ 75 ವರ್ಷ ವಯಸ್ಸಿನ ಮಿತಿಯ ಕಾರಣದಿಂದ ಒಂದು ವರ್ಷಕ್ಕೇ ಅಧಿಕಾರದಿಂದ ಕೆಳಗೆ ಇಳಿಸುತ್ತಾರೆ' ಎಂಬ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿಕೆ ಕುರಿತು ಸುದ್ದಿಗಾರರಿಗೆ ಭಾನುವಾರ ಪ್ರತಿಕ್ರಿಯಿಸಿದ ಅವರು, 'ಬಿಜೆಪಿ ಬಹುಮತ ಪಡೆಯುವುದಿಲ್ಲ. ಆ ಪಕ್ಷದವರು ಪ್ರಧಾನಿಯಾಗಲು ಸಾಧ್ಯವೇ ಇಲ್ಲ' ಎಂದರು.

'ಈ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಇಂಡಿಯಾ ಮೈತ್ರಿಕೂಟ ಆಡಳಿತ ನಡೆಸಲಿದೆ ಎಂಬ ವಿಶ್ವಾಸ ನನಗಿದೆ' ಎಂದು ಹೇಳಿದರು.

ಹತಾಶೆಯ ಪ್ರತೀಕ: 'ಈ ಚುನಾವಣೆಯಲ್ಲಿ ಪ್ರಧಾನಿಯವರು ಹತಾಶರಾಗಿದ್ದಾರೆ. ಆ ಕಾರಣಕ್ಕಾಗಿಯೇ ಕಾಂಗ್ರೆಸ್ ಹೆಚ್ಚು ಸ್ಥಾನ ಗಳಿಸುವುದಿಲ್ಲ ಎಂಬ ಹೇಳಿಕೆ ನೀಡುತ್ತಿದ್ದಾರೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಭಾನುವಾರ ಪ್ರತಿಕ್ರಿಯಿಸಿದರು.

ಅರಣ್ಯ ಸಂರಕ್ಷಣೆ- ಭಾರತ ಮಹತ್ವದ ಮುನ್ನಡೆ: ಯುಎನ್‌ಎಫ್‌ಎಫ್

ನವದೆಹಲಿ (ಪಿಟಿಐ): ಅರಣ್ಯ ಸಂರಕ್ಷಣೆ ಮತ್ತು ನಿರ್ವಹಣೆ ಕ್ಷೇತ್ರದಲ್ಲಿ ಭಾರತವು ಮಹತ್ವದ ಮುನ್ನಡೆ ಸಾಧಿಸಿದೆ. ಕಳೆದ 15 ವರ್ಷಗಳಲ್ಲಿ ದೇಶದ ಅರಣ್ಯ ಪ್ರದೇಶ ವಿಸ್ತರಣೆಯಾಗಿದೆ ಎಂದು ವಿಶ್ವಸಂಸ್ಥೆಯ ಅರಣ್ಯಗಳಿಗೆ ಸಂಬಂಧಿಸಿದ ವೇದಿಕೆಯು (ಯುಎನ್‌ಎಫ್‌ಎಫ್) ಭಾರತಕ್ಕೆ ತಿಳಿಸಿದೆ.

ಅಮೆರಿಕದ ನ್ಯೂಯಾರ್ಕ್‌ನಲ್ಲಿ ಮೇ 6ರಿಂದ 10ರವರೆಗೆ ಯುಎನ್‌ಎಫ್‌ಎಫ್ ಆಯೋಜಿಸಿದ್ದ 19ನೇ ಸಮ್ಮೇಳನದಲ್ಲಿ ಭಾರತ ಭಾಗವಹಿಸಿತ್ತು. ಈ ವೇಳೆ, 2010ರಿಂದ 2020ರ ವರೆಗಿನ ಅರಣ್ಯ ಪ್ರದೇಶದ ವಿಸ್ತರಣೆಯ ವಾರ್ಷಿಕ ಸರಾಸರಿಯಲ್ಲಿ ಭಾರತವು ಮೂರನೇ ರ‍್ಯಾಂಕ್ ಪಡೆಯಿತು.

ವನ್ಯಜೀವಿ ಧಾಮಗಳು, ರಾಷ್ಟ್ರೀಯ ಉದ್ಯಾನಗಳು, ಹುಲಿ ಅಭಯಾರಣ್ಯ, ಜೀವಮಂಡಲ ಸಂರಕ್ಷಿತ ಪ್ರದೇಶಗಳನ್ನು ವಿಸ್ತರಿಸುವ ಮೂಲಕ ದೇಶವು ವನ್ಯಜೀವಿ ಸಂರಕ್ಷಣೆ ಮತ್ತು ಜೀವ ವೈವಿಧ್ಯಕ್ಕೆ ಹೆಚ್ಚಿನ ಮಹತ್ವ ನೀಡಿದೆ ಎಂದು ಭಾರತವು ಸಮ್ಮೇಳನದಲ್ಲಿ ಹೇಳಿತು.

'ಪ್ರಾಜೆಕ್ಟ್ ಟೈಗರ್' ಯೋಜನೆಯ 50ನೇ ವಾರ್ಷಿಕೋತ್ಸವ ಮತ್ತು 'ಪ್ರಾಜೆಕ್ಟ್ ಎಲಿಫ್ಯಾಂಟ್'ನ 30ನೇ ವಾರ್ಷಿಕೋತ್ಸವವನ್ನು ಈಚೆಗೆ ಆಚರಿಸಲಾಯಿತು. ಇದು ಪ್ರಭೇದಗಳನ್ನು ಸಂರಕ್ಷಿಸುವಲ್ಲಿ ಭಾರತದ ಬದ್ಧತೆಯನ್ನು ತೋರುತ್ತದೆ ಎಂದು ಪರಿಸರ ಸಚಿವಾಲಯವು ಪ್ರಕಟಣೆಯೊಂದರಲ್ಲಿ ತಿಳಿಸಿದೆ.

ಹೇಮಂತ್ ಸೋರೇನ್ ಅರ್ಜಿ ವಿಚಾರಣೆ ಇಂದು

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ತಮ್ಮನ್ನು ಬಂಧಿಸಿರುವುದನ್ನು ಪ್ರಶ್ನಿಸಿ ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ನಾಯಕ ಹೇಮಂತ್ ಸೋರೇನ್ ಅವರು ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ನಡೆಸಲಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಾಂಕರ್ ದತ್ತಾ ಅವರು ಈ ಅರ್ಜಿಯ ವಿಚಾರಣೆ ನಡೆಸಲಿದ್ದಾರೆ.

ತಮ್ಮ ಬಂಧನ ಪ್ರಶ್ನಿಸಿ ಹೇಮಂತ್ ಅವರು ಸಲ್ಲಿಸಿದ್ದ ಅರ್ಜಿಯನ್ನು ಜಾರ್ಖಂಡ್ ಹೈಕೋರ್ಟ್ ಮೇ 3ರಂದು ವಜಾಗೊಳಿಸಿತ್ತು.

ಎಸ್‌ಐಟಿಗೆ ಕಾನೂನಿನಲ್ಲಿ ಅವಕಾಶ • ರಾಜಕಾರಣಿಗಳು ಎಚ್ಚರ ವಹಿಸಲಿ–ಗೃಹ ಸಚಿವ

'ಹೇಳಿಕೆ ನೀಡಿದವರ ವಿಚಾರಣೆ'

ಪ್ರಜಾವಾಣಿ ವಾರ್ತೆ

ಜಿ.ಪರಮೇಶ್ವರ

ಬೆಂಗಳೂರು: 'ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜಕೀಯ ನಾಯಕರು ಹೇಳಿಕೆ ನೀಡುವಾಗ ಎಚ್ಚರಿಕೆಯಿಂದ ಇರಬೇಕು. ಹೇಳಿಕೆ ನೀಡಿದವರೂ ವಿಚಾರಣೆ ಎದುರಿಸಬೇಕಾಗಬಹುದು' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಪ್ರಕರಣದ ಸಂಬಂಧ ಜೆಡಿಎಸ್ ರಾಜ್ಯ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ನಿರಂತರ ಹೇಳಿಕೆ ಕುರಿತು ಗಮನಸೆಳೆದಾಗ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಇಬ್ಬರೂ ಪ್ರಕರಣದ ಗಂಭೀರತೆ ಅರಿತಿದ್ದಾರೆ ಎಂಬ ವಿಶ್ವಾಸವಿದೆ' ಎಂದರು.

'ರಾಜಕೀಯ ನಾಯಕರ ಹೇಳಿಕೆಗಳಿಗೆ ಪದೇ ಪದೇ ಪ್ರತಿಕ್ರಿಯಿಸಲಾಗದು. ಹೇಳಿಕೆ ನೀಡುವವರನ್ನು ವಿಚಾರಣೆ ನಡೆಸಲು ಎಸ್‌ಐಟಿಗೆ ಕಾನೂನಿನಲ್ಲಿ ಅವಕಾಶವಿದೆ. ನೋಟಿಸ್ ನೀಡಿ ಎಸ್‌ಐಟಿ ವಿಚಾರಣೆಗೆ ಕರೆಯಬಹುದು. ದೇವರಾಜೇಗೌಡ ಅವರನ್ನು ಪ್ರಜ್ವಲ್ ರೇವಣ್ಣ ಪ್ರಕರಣದಲ್ಲೇ ಬಂಧಿಸಲಾಗಿದೆ. ಮುಂದಿನ ಪ್ರಕ್ರಿಯೆಯನ್ನು ಎಸ್‌ಐಟಿ ನಿರ್ವಹಿಸುತ್ತದೆ' ಎಂದರು.

ಎಸ್‌ಐಟಿ ವಿದೇಶಕ್ಕೆ ಹೋಗುವುದಿಲ್ಲ: 'ಪ್ರಜ್ವಲ್ ಪತ್ತೆಗೆ ನೇರವಾಗಿ ವಿದೇಶಕ್ಕೆ ಹೋಗಲು ಎಸ್‌ಐಟಿ ಅಧಿಕಾರಿಗಳಿಗೆ ಅವಕಾಶವಿಲ್ಲ. ಬ್ಲೂ ಕಾರ್ನರ್ ನೋಟಿಸ್ ಆಧರಿಸಿ ಇಂಟರ್‌ಪೋಲ್‌ನವರು ಆರೋಪಿಯ ಇರುವಿಕೆ ಕುರಿತು ಸಿಬಿಐಗೆ ಮಾಹಿತಿ ನೀಡುತ್ತಾರೆ. ಸಿಬಿಐ ರಾಜ್ಯದ ಪೊಲೀಸರ ಜತೆ ಮಾಹಿತಿ ಹಂಚಿಕೊಳ್ಳುತ್ತದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಪ್ರಜ್ವಲ್ ಇರುವಿಕೆ ಕುರಿತು ಈವರೆಗೆ ಇಂಟರ್‌ಪೋಲ್‌ನಿಂದ ನಮಗೆ ಯಾವುದೇ ಮಾಹಿತಿ ಬಂದಿಲ್ಲ' ಎಂದರು.

'ಎಸ್‌ಐಟಿ ತನಿಖೆ ದಿಕ್ಕು ತಪ್ಪಿದೆ'

ಬೆಂಗಳೂರು: 'ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣವನ್ನು ಸಮರ್ಥನೆ ಮಾಡುವ ಪ್ರಶ್ನೆಯೇ ಇಲ್ಲ. ಆದರೆ, ಪ್ರಕರಣದ ತನಿಖೆ ರೀತಿಯೇ ಸರಿ ಇಲ್ಲ. ಮಾಹಿತಿ ಕೊಟ್ಟವರನ್ನೇ ಬಂಧನ ಮಾಡುತ್ತಿದ್ದಾರೆ. ತನಿಖೆ ದಿಕ್ಕು ತಪ್ಪುತ್ತಿದೆ' ಎಂದು ಶಾಸಕ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

'ಎಸ್‌ಐಟಿಯವರು ಅಪರಾಧಿಗಳನ್ನು ಬಂಧಿಸುತ್ತಿಲ್ಲ. ಪ್ರಕರಣದ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದರೆ, ಸಿಬಿಐಗೆ ವಹಿಸಬೇಕು' ಎಂದು ಅವರು ಭಾನುವಾರ ಸುದ್ದಿಗಾರರ ಜತೆ ಮಾತನಾಡಿ ಒತ್ತಾಯಿಸಿದರು.

ಪ್ರಕರಣ ಸಂಬಂಧ ಡಿ.ಕೆ.ಶಿವಕುಮಾರ್ ಅವರ ವಿಚಾರಣೆಯೂ ಆಗಬೇಕು ಎಂಬ ಆಗ್ರಹದ ಕುರಿತ ಪ್ರಶ್ನೆಗೆ, 'ಯಾರ‍್ಯಾರ ಹೆಸರು ಕೇಳಿ ಬರುತ್ತಿದೆಯೋ ಅವರ ವಿಚಾರಣೆಯನ್ನೂ ಮಾಡಲಿ. ಆದ್ದರಿಂದಲೇ ನಾವು ಪ್ರಕರಣ ಸಿಬಿಐಗೆ ಕೊಡಲಿ ಎಂದು ಕೇಳುತ್ತಿದ್ದೇವೆ' ಎಂದರು.

ಪೆನ್‌ಡ್ರೈವ್ ಹಂಚಿಕೆ: ಇಬ್ಬರ ಸೆರೆ

ಒಂದನೇ ಪುಟದಿಂದ

ಬಂಧಿತರು ಬಿಜೆಪಿ ಕಾರ್ಯಕರ್ತರು ಎಂದು ಹೇಳಲಾಗುತ್ತಿದೆ.

ಹಾಸನ ತಾಲ್ಲೂಕಿನ ಯಲಗುಂದ ಗ್ರಾಮದ ಚೇತನ್ ನಿವಾಸದಲ್ಲಿ ಒಂದೂವರೆ ಗಂಟೆ ಸ್ಥಳ ಮಹಜರು ನಡೆಸಿ, ಹೇಳಿಕೆ ಪಡೆಯಲಾಯಿತು. ಮತ್ತೊಬ್ಬ ಆರೋಪಿ ಲಿಖಿತ್‌ನನ್ನು ಶ್ರವಣಬೆಳಗೊಳಕ್ಕೆ ಕರೆದೊಯ್ದು ಸ್ಥಳ ಮಹಜರು ನಡೆಸಲಾಯಿತು.

ಏ.21 ರಂದು ಪೆನ್‌ಡ್ರೈವ್ ಹಂಚಿಕೆಯಾಗಿದ್ದು, ಆ ಕುರಿತು ಜೆಡಿಎಸ್ ಚುನಾವಣಾ ಏಜೆಂಟ್ ಪೂರ್ಣಚಂದ್ರ ತೇಜಸ್ವಿಯವರು, ಪ್ರಜ್ವಲ್ ಮಾಜಿ ಕಾರು ಚಾಲಕ ಕಾರ್ತಿಕ್, ಪುಟ್ಟರಾಜು, ನವೀನ್‌ಗೌಡ, ಚೇತನ್ ಹಾಗೂ ಲಿಖಿತ್ ವಿರುದ್ಧ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದರು.

ಲೈಂಗಿಕ ದೌರ್ಜನ್ಯ, ಜಾತಿನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರಾಗಿರುವ ವಕೀಲ ಜಿ.ದೇವರಾಜೇಗೌಡರನ್ನು ಜಿಲ್ಲಾ ಕಾರಾಗೃಹಕ್ಕೆ ಸ್ಥಳಾಂತರಿಸಲಾಗಿದೆ.

ರಥೋತ್ಸವ ವಿಜಯನಗರ ಜಿಲ್ಲೆ ಕೊಟ್ಟೂರು ತಾಲ್ಲೂಕಿನ ಉಜ್ಜಯಿನಿ ಸದ್ಧರ್ಮ ಪೀಠದ ಮರುಳಸಿದ್ದೇಶ್ವರ ಸ್ವಾಮಿ ರಥೋತ್ಸವವು ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಭಾನುವಾರ ಸಂಜೆ ವಿಜೃಂಭಣೆಯಿಂದ ಜರುಗಿತು

ಪ್ರಜಾವಾಣಿ ಚಿತ್ರ

'ಶಾಸಕ ಮಂಜು ಪೆನ್‌ಡ್ರೈವ್ ಹಂಚಿರಬಹುದು'

ಹಾಸನ: ಪೆನ್ ಡ್ರೈವ್ ಹಂಚಿಕೆಯ ಆರೋಪ ಹೊತ್ತಿರುವ ನವೀನ್ ಗೌಡ, ತನ್ನ ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್ ಹಾಕಿದ್ದು, 'ಅರಕಲಗೂಡು ಶಾಸಕ ಎ.ಮಂಜು ಅವರೇ ಪೆನ್‌ಡ್ರೈವ್ ಹಂಚಿಕೆ ಮಾಡಿರಬಹುದು. ಮಾಜಿ ಸಿಎಂ ಎಚ್‌.ಡಿ. ಕುಮಾರಸ್ವಾಮಿ ಹೇಳುತ್ತಿರುವ ಮಹಾ ನಾಯಕ ಇವರೇ' ಎಂದು ಆರೋಪಿಸಿದ್ದಾರೆ.

'ಏಪ್ರಿಲ್ 20 ರಂದು ನನಗೆ ರಸ್ತೆಯಲ್ಲಿ ಸಿಕ್ಕ ಪೆನ್ ಡ್ರೈವ್ ಅನ್ನು ಎ.ಮಂಜು ಅವರಿಗೆ ಏಪ್ರಿಲ್ 21 ರಂದು ಅರಕಲಗೂಡಿನ ಮಾರುತಿ ಕಲ್ಯಾಣ ಮಂಟಪದಲ್ಲಿ ನೀಡಿದ್ದೇನೆ. ವಿಡಿಯೊವನ್ನು ವೈರಲ್ ಮಾಡಿದ್ದರ ಹಿಂದೆ ಮಹಾ ನಾಯಕನ ಕೈವಾಡ ಇದೆ ಎಂದು ಮಾಜಿ ಸಿ.ಎಂ. ಎಚ್‌.ಡಿ. ಕುಮಾರಸ್ವಾಮಿ ಹೇಳಿದ್ದರು. ಆ ಮಹಾನಾಯಕ ಅರಕಲಗೂಡು ಶಾಸಕರೇ ಇರಬಹುದು' ಎಂದು ಪೋಸ್ಟ್ ಮಾಡಿದ್ದಾರೆ. ಪೆನ್‌ಡ್ರೈವ್ ಹಂಚಿಕೆ ಸಂಬಂಧ ಸೈಬರ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ನವೀನ್‌ಗೌಡ ಆರೋಪಿಯಾಗಿದ್ದು, ಸದ್ಯಕ್ಕೆ ತಲೆಮರೆಸಿಕೊಂಡಿದ್ದಾರೆ

ನವೀನ್ ಗೌಡ ಯಾರೆಂದು ಗೊತ್ತಿಲ್ಲ– ಶಾಸಕ ಮಂಜು

ಪ್ರಜಾವಾಣಿ ವಾರ್ತೆ

ಮೈಸೂರು: 'ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣದಲ್ಲಿ ನನ್ನ ಹೆಸರನ್ನು ಎಳೆದು ತಂದಿರುವ ನವೀನ್ ಗೌಡ ಯಾರೆಂದು ಗೊತ್ತಿಲ್ಲ' ಎಂದು ಅರಕಲಗೂಡು ಶಾಸಕ ಎ.ಮಂಜು ಸ್ಪಷ್ಟಪಡಿಸಿದರು.

'ಶಾಸಕ ಎ.ಮಂಜುಗೆ ಪೆನ್‌ಡ್ರೈವ್ ನೀಡಿದ್ದೆ ಎಂದು ಆರೋಪಿ ನವೀನ್ ಗೌಡ ಹೇಳಿಕೆ ನೀಡಿದ್ದಾರೆ' ಎನ್ನಲಾಗುತ್ತಿರುವ ಕುರಿತು ಇಲ್ಲಿ ಭಾನುವಾರ ಪ್ರತಿಕ್ರಿಯಿಸಿದ ಅವರು, 'ಏ.21ರಂದು ಮದುವೆ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದೇನೆ. ಅಲ್ಲಿ ನೂರಾರು ಜನರನ್ನು ಮಾತನಾಡಿಸಿದ್ದೇನೆ. ಅವರಲ್ಲಿ ನವೀನ್ ಗೌಡ ಎನ್ನುವವರ‍್ಯಾರು ಎಂಬುದು ತಿಳಿದಿಲ್ಲ' ಎಂದರು.

'ನನಗೆ ಆತ ಯಾವುದೇ ಪೆನ್‌ಡ್ರೈವ್ ಕೊಟ್ಟಿಲ್ಲ. ಆತನ ಹಿಂದೆ ಯಾರೋ ಪ್ರಬಲರು ಇರುವುದು ಸತ್ಯ. ಆ ಬಗ್ಗೆ ತನಿಖೆಯಾಗಬೇಕು' ಎಂದು ಒತ್ತಾಯಿಸಿದರು.

'ಆತನ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ. ಸೋಮವಾರ ಅರಕಲಗೂಡು ಠಾಣೆಗೆ ದೂರನ್ನೂ ಕೊಡುತ್ತೇನೆ. ನನ್ನ ಮತ್ತು ಎಚ್‌.ಡಿ. ದೇವೇಗೌಡರ ಸಂಬಂಧ ಹಾಳು ಮಾಡಲು ಹೀಗೆ ಮಾಡಲಾಗುತ್ತಿದೆ. ನಾನು ಯಾವತ್ತೂ ನೀಚ ರಾಜಕಾರಣ ಮಾಡಿಲ್ಲ. ತಡಮಾಡದೇ ಮೊದಲು ನವೀನ್ ಗೌಡ ಎನ್ನುವವನನ್ನು ಬಂಧಿಸಲಿ. ಅವನ ಮೂಲಕವೇ ಪೆನ್‌ಡ್ರೈವ್ ಇತಿಹಾಸ ತಿಳಿಯುತ್ತದೆ' ಎಂದರು.

'ರಾಜಕೀಯ ಜೀವನದ ಸಂಧ್ಯಾಕಾಲದಲ್ಲಿ ನನ್ನ ಕೈ ಹಿಡಿದವರು ದೇವೇಗೌಡರು. ಅವರ ಕುಟುಂಬಕ್ಕೆ ದ್ರೋಹ ಬಗೆಯುವ ಕೆಲಸ ಮಾಡುವುದಿಲ್ಲ. ಪೆನ್‌ಡ್ರೈವ್ ಪ್ರಕರಣದಿಂದ ದೇವೇಗೌಡರು ಬಹಳ ನೊಂದಿದ್ದಾರೆ. ಅವರನ್ನು ಈಚೆಗೆ ಭೇಟಿ ಆಗಿದ್ದಾಗ, ಈ ವಿಚಾರದ ಬಗ್ಗೆ ಯಾಕೆ ಮೊದಲೇ ತಿಳಿಸಲಿಲ್ಲ ಎಂದು ನೊಂದು ಕೇಳಿದರು. ಯಾರಿಗೂ ಇಂತಹ ಸ್ಥಿತಿ ಬರಬಾರದು' ಎಂದರು.

'ಎಚ್‌.ಡಿ. ರೇವಣ್ಣ ಅವರನ್ನು ಕಾರಾಗೃಹದಲ್ಲಿ ಭೇಟಿಯಾಗಿ ಧೈರ್ಯ ತುಂಬಿದ್ದೇನೆ. ದೇವೇಗೌಡರ ಕುಟುಂಬದ ಜೊತೆಯಲ್ಲೇ ಇದ್ದೇನೆ. ಈ ಕಾರಣಕ್ಕಾಗಿಯೇ ಪ್ರಕರಣದಲ್ಲಿ ನನ್ನ ಹೆಸರು ಎಳೆದುತರಲು ಕೆಲವರು ಪ್ರಯತ್ನಿಸುತ್ತಿದ್ದಾರೆ' ಎಂದರು.

ಐಎಫ್‌ಎಸ್ ಪರೀಕ್ಷೆ ನಿಶಾಗೆ 90ನೇ ರ‍್ಯಾಕ್

ಪ್ರಜಾವಾಣಿ ವಾರ್ತೆ

ಕೂಡ್ಲಿಗಿ (ವಿಜಯನಗರ ಜಿಲ್ಲೆ): ಕೇಂದ್ರ ನಾಗರಿಕ ಸೇವಾ ಆಯೋಗವು (ಯುಪಿಎಸ್‌ಸಿ) ನಡೆಸಿದ್ದ ಭಾರತೀಯ ಅರಣ್ಯ ಸೇವೆ (ಐಎಫ್‌ಎಸ್) ಪರೀಕ್ಷೆಯಲ್ಲಿ ವಿಜಯನಗರ ಜಿಲ್ಲೆಯ ಕೂಡ್ಲಗಿ ಪಟ್ಟಣದ ನಿವಾಸಿ ಎಸ್‌.ಎನ್. ನಿಶಾ 90ನೇ ರ‍್ಯಾಂಕ್ ಗಳಿಸಿದ್ದಾರೆ.

'4ನೇ ಪ್ರಯತ್ನದಲ್ಲಿ ಈ ಸಾಧನೆ ಮಾಡಿದ್ದೇನೆ. ಆರಂಭದಿಂದ ಪಿಯುಸಿ ವರೆಗೆ ಪಟ್ಟಣದಲ್ಲಿಯೇ ವಿದ್ಯಾಭ್ಯಾಸ ಮಾಡಿರುವೆ. ಮೊದಲು ಎಂಬಿಬಿಎಸ್ ಮಾಡುವ ಕನಸು ಹೊಂದಿದ್ದೆ. ಆದರೆ, ನಿರೀಕ್ಷಿತ ಅಂಕಗಳಿಸದೇ ಬಿಎಸ್‌ಸಿ ಫಾರೆಸ್ಟ್ರಿ ವಿಷಯ ಆಯ್ಕೆ ಮಾಡಿಕೊಂಡು ಪೊನ್ನಂಪೇಟೆಯಲ್ಲಿ ಅಭ್ಯಾಸ ಆರಂಭಿಸಿದೆ. ಅಲ್ಲಿದ್ದ ಉಪನ್ಯಾಸಕರೊಬ್ಬರು ಐಎಫ್‌ಎಸ್ ಮಾಡಲು ಪ್ರೋತ್ಸಾಹಿಸಿದರು' ಎಂದರು.

'ಬಿಎಸ್‌ಸಿ ಅಂತಿಮ ವರ್ಷದಲ್ಲಿದ್ದಾಗ ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ಆರಂಭಿಸಿದೆ. ಸಮಾಜ ಕಲ್ಯಾಣ ಇಲಾಖೆಯ ಉಚಿತ ಕೋಚಿಂಗ್ ಪರೀಕ್ಷೆ ಎದುರಿಸಿ ಅರ್ಹತೆ ಪಡೆದುಕೊಂಡೆ' ಅವರು 'ಪ್ರಜಾವಾಣಿ'ಯೊಂದಿಗೆ ಸಂತಸ ಹಂಚಿಕೊಂಡರು.

ಲೈಂಗಿಕ ದೌರ್ಜನ್ಯ ಪ್ರಕರಣ • ಸಂತ್ರಸ್ತೆಯರಿಂದ ಹೇಳಿಕೆ ಸಂಗ್ರಹ, ಕೌನ್ಸೆಲಿಂಗ್

ವಿಮಾನ ನಿಲ್ದಾಣಗಳಲ್ಲಿ ಪ್ರಜ್ವಲ್‌ಗಾಗಿ ನಿಗಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಜ್ವಲ್ ರೇವಣ್ಣ ದೇಶಕ್ಕೆ ವಾಪಸಾದಂತೆ ವಶಕ್ಕೆ ಪಡೆಯಲು ಎಸ್‌ಐಟಿ ಅಧಿಕಾರಿಗಳು ಬೆಂಗಳೂರು ಮತ್ತು ಮಂಗಳೂರು ವಿಮಾನ ನಿಲ್ದಾಣಗಳಲ್ಲಿ ತೀವ್ರ ನಿಗಾ ವಹಿಸಿದ್ದಾರೆ.

ಪ್ರಜ್ವಲ್ ವಿರುದ್ಧ ಬ್ಲೂಕಾರ್ನರ್ ನೋಟಿಸ್ ಜಾರಿಯಾಗಿದ್ದು, ಶೋಧ ನಡೆದಿದೆ. ಈ ಮಧ್ಯೆ, ಯಾವುದೇ ನಿಲ್ದಾಣದ ಮೂಲಕ ರಾಜ್ಯಕ್ಕೆ ಮರಳಿದರೂ ವಶಕ್ಕೆ ಪಡೆಯಲು ಸಿದ್ಧತೆ ಮಾಡಿಕೊಳ್ಳಲಾಗಿದೆ' ಎಂದು ಮೂಲಗಳು ಹೇಳಿವೆ.

'ಪ್ರಜ್ವಲ್ ಜರ್ಮನಿಯಲ್ಲಿಲ್ಲ ಎಂಬುದು ಈಗಾಗಲೇ ಗೊತ್ತಾಗಿದೆ. ಅವರು ದುಬೈನಲ್ಲಿರುವ ಮಾಹಿತಿ ಇದೆ. ದುಬೈನಿಂದಲೇ ಅವರು ಬೆಂಗಳೂರು ಅಥವಾ ಮಂಗಳೂರು ನಿಲ್ದಾಣಕ್ಕೆ ಬರುವ ನಿರೀಕ್ಷೆಯೂ ಇದೆ. ಸದ್ಯಕ್ಕೆ ಅವರು ಯಾವುದೇ ಟಿಕೆಟ್ ಕಾಯ್ದಿರಿಸಿಲ್ಲ' ಎಂದು ಮೂಲಗಳು ತಿಳಿಸಿವೆ.

ಸಂತ್ರಸ್ತೆಯರಿಂದ ಹೇಳಿಕೆ ಸಂಗ್ರಹ: 'ಸಹಾಯವಾಣಿಗೆ ನಿತ್ಯವೂ ಕರೆಗಳು ಬರುತ್ತಿವೆ. ಕೆಲ ಸಂತ್ರಸ್ತೆಯರು, ಹೇಳಿಕೆ ನೀಡುವುದಾಗಿ ಹೇಳಿದ್ದಾರೆ. ಅವರಿಗೆ ಕೌನ್ಸೆಲಿಂಗ್ ಮಾಡಲಾಗುತ್ತಿದೆ. ಸಂತ್ರಸ್ತೆಯರಿಗೆ ಹಾಗೂ ಅವರ ಕುಟುಂಬದವರಿಗೆ ಧೈರ್ಯ ತುಂಬಿದ ಬಳಿಕವೇ ಹೇಳಿಕೆ ದಾಖಲಿಸಿಕೊಂಡು, ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಮೂಲಗಳು ತಿಳಿಸಿವೆ.

ದೇವರಾಜೇಗೌಡ ಬಲಿಪಶು: ವಕೀಲರ ಆಕ್ಷೇಪ

ಮುಖ್ಯಾಂಶಗಳು

- ದೂರು ದಾಖಲಿಸಿಕೊಂಡು ಸುಮ್ಮನಿದ್ದ ಪೊಲೀಸರು
- ಪೆನ್‌ಡ್ರೈವ್ ಹೇಳಿಕೆ ಬೆನ್ನಲ್ಲೇ ಬಂಧನಕ್ಕೆ ಆಕ್ಷೇಪ

ಹೊಳೆನರಸೀಪುರ: 'ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣದಲ್ಲಿ ಬಿಜೆಪಿ ಮುಖಂಡ ಹಾಗೂ ವಕೀಲ ಜಿ.ದೇವರಾಜೇಗೌಡರನ್ನು ಕಾಣದ ಕೆಲವು ಕೈಗಳು ಬಲಿಪಶು ಮಾಡಲು ಹೊರಟಿವೆ. ಯಾವುದೇ ತಪ್ಪು ಮಾಡಿರದಿದ್ದರೆ ಖಂಡಿತ ಬೇಗ ಹೊರಬರುತ್ತಾರೆ' ಎಂದು ಅವರ ಪರ ವಕೀಲ ಸುನೀಲ್ ಅಭಿಪ್ರಾಯಪಟ್ಟರು.

ಭಾನುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಪೆನ್‌ಡ್ರೈವ್ ಬಗ್ಗೆ ಕೆಲವು ಕಾಂಗ್ರೆಸ್ ನಾಯಕರಿಗೆ ಅವರು ಮಾಹಿತಿ ನೀಡಿದ್ದರ ಬಗ್ಗೆ ಮಾಧ್ಯಮಗಳ ಮೂಲಕ ವಿವರಿಸಿದ ನಂತರ, ಮುಜುಗರಕ್ಕೆ ಒಳಗಾದ ಕಾಣದ ಕೈಗಳು ಸಂಚು ರೂಪಿಸಿವೆ' ಎಂದರು.

'ಲೈಂಗಿಕ ದೌಜನ್ಯ ನಡೆಸಿದ್ದಾರೆಂದು ಏಪ್ರಿಲ್ 1 ರಂದು ದೂರು ನೀಡಿರುವ ಮಹಿಳೆಯ ವಿರುದ್ಧ, ಹನಿಟ್ರ್ಯಾಪ್ ಆರೋಪ ಹೊರಿಸಿ ದೇವರಾಜೇಗೌಡರು ಬೆಂಗಳೂರಿನ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ' ಎಂದು ಇನ್ನೊಬ್ಬ ವಕೀಲ ಚಂದ್ರಶೇಖರ್ ಹೇಳಿದರು.

'ದೂರು ದಾಖಲಿಸಿಕೊಂಡು, ಇದುವರೆಗೂ ಸುಮ್ಮನಿದ್ದ ಪೊಲೀಸರು, ಪೆನ್‌ಡ್ರೈವ್ ಸಂಬಂಧ ಹೇಳಿಕೆ ನೀಡುತ್ತಿದ್ದಂತೆಯೇ ಬಂಧಿಸಿದ್ದಾರೆ. ಅದರ ಹಿಂದೆ ಏನೋ ಉದ್ದೇಶವಿದೆ ಎಂಬುದನ್ನು ನ್ಯಾಯಾಧೀಶರಿಗೆ ಮನವರಿಕೆ ಮಾಡಿಕೊಡಲಾಗಿದೆ. ಹೀಗಾಗಿ ದೇವರಾಜೇಗೌಡರನ್ನು 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ' ಎಂದು ಮತ್ತೊಬ್ಬ ವಕೀಲ ಚಂದ್ರಶೇಖರ್ ಪ್ರತಿಪಾದಿಸಿದರು.

'ನಮ್ಮ ನ್ಯಾಯಾಂಗ ವ್ಯವಸ್ಥೆಯಲ್ಲಿ ಯಾರು ಏನೇ ಆರೋಪ ಮಾಡಿದರೂ, ಸಾಕ್ಷಿ ಸಮೇತ ಸಾಬೀತಾದರೆ ಮಾತ್ರ ಅಪರಾಧಿ. ಅಲ್ಲಿಯವರೆಗೂ ದೇವರಾಜೇಗೌಡ ಆರೋಪಿ ಮಾತ್ರ' ಎಂದರು.

ನಾಲ್ಕನೇ ಹಂತದ ಮತದಾನಕ್ಕೆ ಸಕಲ ಸಿದ್ಧತೆ; 1,717 ಅಭ್ಯರ್ಥಿಗಳ ಭವಿಷ್ಯ ನಿರ್ಧಾರ ಇಂದು

ಕಣದಲ್ಲಿ ಅಖಿಲೇಶ್, ಒವೈಸಿ, ಮಹುವಾ

ಲೋಕಸಭಾ ಚುನಾವಣೆಯ ನಾಲ್ಕನೇ ಹಂತದ ಮತದಾನ ಸೋಮವಾರ ನಡೆಯಲಿದೆ. 96 ಕ್ಷೇತ್ರಗಳಲ್ಲಿ ಒಟ್ಟು 1,717 ಅಭ್ಯರ್ಥಿಗಳು ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಕಣದಲ್ಲಿರುವ ಪ್ರಮುಖ ಅಭ್ಯರ್ಥಿಗಳ ಸಂಕ್ಷಿಪ್ತ ವಿವರ ಇಲ್ಲಿದೆ...

ಅಖಿಲೇಶ್ ಯಾದವ್ (ಎಸ್‌ಪಿ)
ಕ್ಷೇತ್ರ: ಕನೌಜ್, ಉತ್ತರ ಪ್ರದೇಶ
ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್ ಅವರ ಕುಟುಂಬದ ಪ್ರಭಾವವಿರುವ ಕನೌಜ್ ಲೋಕಸಭಾ ಕ್ಷೇತ್ರದಿಂದ ಈ ಬಾರಿ ಅವರ ಪುತ್ರ ಹಾಗೂ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಕಣಕ್ಕಿಳಿದಿದ್ದಾರೆ. ಕಳೆದ ಚುನಾವಣೆಯಲ್ಲಿ ಅಖಿಲೇಶ್ ಅವರ ಪತ್ನಿ ಡಿಂಪಲ್ ಯಾದವ್ ಅವರು ಸ್ಪರ್ಧಿಸಿ ಪರಾಭವಗೊಂಡಿದ್ದರು. ಈ ಕ್ಷೇತ್ರಕ್ಕೆ ಸಮಾಜವಾದಿ ಪಕ್ಷವು ತೇಜ್ ಪ್ರತಾಪ್ ಯಾದವ್ ಅವರ ಹೆಸರನ್ನು ಆರಂಭದಲ್ಲಿ ಘೋಷಿಸಿತ್ತು. ಬಳಿಕ ಅವರನ್ನು ಬದಲಿಸಿ ಅಖಿಲೇಶ್ ಅವರೇ ಕಣಕ್ಕಿಳಿದಿದ್ದಾರೆ. ಬಿಜೆಪಿಯು ಕಳೆದ ಬಾರಿ ಗೆದ್ದಿದ್ದ ಸುಬ್ರತ್ ಪಾಠಕ್ ಅವರನ್ನು ಅಖಾಡಕ್ಕಿಳಿಸಿದೆ. ಬಿಎಸ್‌ಪಿಯಿಂದ ಇಮ್ರಾನ್ ಬಿನ್ ಜಾಫರ್ ಕಣದಲ್ಲಿದ್ದಾರೆ.

ಗಿರಿರಾಜ್ ಸಿಂಗ್ (ಬಿಜೆಪಿ)
ಕ್ಷೇತ್ರ: ಬೇಗುಸರಾಯ್, ಬಿಹಾರ

ಬಿಜೆಪಿಯು ಬೇಗುಸರಾಯ್ ಲೋಕಸಭಾ ಕ್ಷೇತ್ರದಿಂದ ಈ ಬಾರಿಯೂ ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಅವರನ್ನೇ ಕಣಕ್ಕಿಳಿಸಿದೆ. 2019ರ ಚುನಾವಣೆಯಲ್ಲಿ ಗಿರಿರಾಜ್ ಅವರು, ಸಿಪಿಐನಿಂದ ಸ್ಪರ್ಧಿಸಿದ್ದ ಕನ್ಹಯ್ಯ ಕುಮಾರ್ ಅವರನ್ನು 4,22,217 ಮತಗಳ ಅಂತರದಿಂದ ಪರಾಭವಗೊಳಿಸಿದ್ದರು. ಎಡಪಕ್ಷದ ಪ್ರಾಬಲ್ಯವಿರುವ ಈ ಕ್ಷೇತ್ರದಿಂದ 'ಇಂಡಿಯಾ' ಕೂಟದ ಅಭ್ಯರ್ಥಿಯಾಗಿ ಸಿಪಿಐನ ಅವಧೇಶ್ ಕುಮಾರ್ ರಾಯ್ ಕಣದಲ್ಲಿದ್ದಾರೆ.

ಅಧೀರ್–ಯೂಸುಫ್ ಮುಖಾಮುಖಿ
ಕ್ಷೇತ್ರ: ಬಹರಾಂಪುರ, ಪಶ್ಚಿಮ ಬಂಗಾಳ
ಪಶ್ಚಿಮ ಬಂಗಾಳದ ಬಹರಾಂಪುರ ಕ್ಷೇತ್ರವು ಕಾಂಗ್ರೆಸ್‌ನ ಅಧೀರ್ ರಂಜನ್ ಚೌಧರಿ ಮತ್ತು ಟಿಎಂಸಿಯ ಯೂಸುಫ್ ಪಠಾಣ್ ನಡುವಣ ಹಣಾಹಣಿಯಿಂದ ಕುತೂಹಲ ಕೆರಳಿಸಿದೆ. 1999ರಿಂದಲೂ ಈ ಕ್ಷೇತ್ರವನ್ನು ಅಧೀರ್ ರಂಜನ್ ಪ್ರತಿನಿಧಿಸುತ್ತಿದ್ದಾರೆ. ಪಶ್ಚಿಮ ಬಂಗಾಳದ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ಅಧೀರ್ ಅವರ ವಿರುದ್ಧ ಟಿಎಂಸಿಯು ಕ್ರಿಕೆಟಿಗ ಯೂಸುಫ್ ಪಠಾಣ್ ಅವರನ್ನು ಸ್ಪರ್ಧೆಗಿಳಿಸಿ ಪ್ರಬಲ ಪೈಪೋಟಿ ಒಡ್ಡಿದೆ. ಬಿಜೆಪಿಯಿಂದ ನಿರ್ಮಲ್ ಕುಮಾರ್ ಸಹಾ ಸ್ಪರ್ಧಿಸಿದ್ದಾರೆ.
ಕಾಂಗ್ರೆಸ್ ಮತ್ತು ಟಿಎಂಸಿ ರಾಜ್ಯದಲ್ಲಿ ಸ್ವತಂತ್ರವಾಗಿ ಚುನಾವಣೆ ಎದುರಿಸುತ್ತಿವೆ. ಆದರೆ, ರಾಷ್ಟ್ರ ಮಟ್ಟದಲ್ಲಿ ಎರಡೂ 'ಇಂಡಿಯಾ' ಕೂಟದ ಭಾಗವಾಗಿವೆ.

ನಾಲ್ಕನೇ ಹಂತ



ಪ್ರಜಾವಾಣಿ ಗ್ರಾಫಿಕ್ಸ್

2019ರ ಫಲಿತಾಂಶ

ಎನ್‌ಡಿಎ / ಇಂಡಿಯಾ / ಇತರರು

ಎನ್‌ಡಿಎ	46
ಬಿಜೆಪಿ	41
ಮಿತ್ರ ಪಕ್ಷಗಳು	5
ಇಂಡಿಯಾ	13
ಕಾಂಗ್ರೆಸ್	6
ಮಿತ್ರ ಪಕ್ಷಗಳು	7
ಇತರರು	37

ಆಂಧ್ರ ಪ್ರದೇಶ	25
ಬಿಹಾರ	5
ಜಾರ್ಖಂಡ್	4
ಮಧ್ಯಪ್ರದೇಶ	8
ಮಹಾರಾಷ್ಟ್ರ	11
ಒಡಿಶಾ	4
ತೆಲಂಗಾಣ	17
ಉತ್ತರ ಪ್ರದೇಶ	13
ಪಶ್ಚಿಮ ಬಂಗಾಳ	8
ಜಮ್ಮು ಮತ್ತು ಕಾಶ್ಮೀರ	1

ಮಹುವಾ ಮೊಯಿತ್ರಾ (ಟಿಎಂಸಿ)
ಕ್ಷೇತ್ರ: ಕೃಷ್ಣನಗರ, ಪಶ್ಚಿಮ ಬಂಗಾಳ

ಮೋದಿ ಸರ್ಕಾರದ ಕಟು ಟೀಕಾಕಾರ್ತಿಯಾಗಿದ್ದು, ಸಂಸತ್ತಿನಿಂದ ಉಚ್ಚಾಟನೆಗೊಂಡಿದ್ದ ಮಹುವಾ ಮೊಯಿತ್ರಾ ಮತ್ತೊಮ್ಮೆ ಪಶ್ಚಿಮ ಬಂಗಾಳದ ಕೃಷ್ಣನಗರ ಕ್ಷೇತ್ರದಿಂದ ಟಿಎಂಸಿಯಿಂದ ಸ್ಪರ್ಧಿಸಿದ್ದಾರೆ. ಅವರ ಎದುರಾಳಿಯಾಗಿ 'ರಾಜಮಾತೆ' ಎಂದೇ ಹೆಸರಾದ ಅಮೃತಾ ರಾಯ್ ಬಿಜೆಪಿಯಿಂದ ಸ್ಪರ್ಧಿಸಿದ್ದಾರೆ. ಮಹುವಾ ಕಳೆದ ಬಾರಿ ಬಿಜೆಪಿಯ ಕಲ್ಯಾಣ್ ಚೌಬೆ ಅವರನ್ನು 63,218 ಮತಗಳಿಂದ ಪರಾಭವಗೊಳಿಸಿದ್ದರು.

ಶತ್ರುಘ್ನ ಸಿನ್ಹಾ (ಟಿಎಂಸಿ) ಕ್ಷೇತ್ರ: ಅಸನ್‌ಸೋಲ್, ಪಶ್ಚಿಮ ಬಂಗಾಳ
ಜಾರ್ಖಂಡ್ ಗಡಿಗೆ ಹೊಂದಿಕೊಂಡಿರುವ ಅಸನ್‌ಸೋಲ್ ಕ್ಷೇತ್ರದ ಹಾಲಿ ಸಂಸದರಾಗಿರುವ ಶತ್ರುಘ್ನ ಸಿನ್ಹಾ ಮತ್ತೆ ಟಿಎಂಸಿ ಅಭ್ಯರ್ಥಿಯಾಗಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಅವರ ಪ್ರತಿಸ್ಪರ್ಧಿಯಾಗಿ ಬಿಜೆಪಿಯಿಂದ ಸುರೇಂದ್ರಜೀತ್ ಸಿಂಗ್ ಅಹ್ಲುವಾಲಿಯಾ ಕಣಕ್ಕಿಳಿದಿದ್ದಾರೆ. 2022ರಲ್ಲಿ ನಡೆದ ಉಪಚುನಾವಣೆಯಲ್ಲಿ ಶತ್ರುಘ್ನ ಸಿನ್ಹಾ ಗೆದ್ದಿದ್ದರು.

ಅಸಾದುದ್ದೀನ್ ಒವೈಸಿ (ಎಐಎಂಐಎಂ)
ಕ್ಷೇತ್ರ: ಹೈದರಾಬಾದ್, ತೆಲಂಗಾಣ

ಹೈದರಾಬಾದ್ ಲೋಕಸಭಾ ಕ್ಷೇತ್ರದಿಂದ ಎಐಎಂಐಎಂನಿಂದ ಅಸಾದುದ್ದೀನ್ ಒವೈಸಿ ಸ್ಪರ್ಧಿಸಿದ್ದಾರೆ. ಅವರ ವಿರುದ್ಧ ಬಿಜೆಪಿ ಅಭ್ಯರ್ಥಿಯಾಗಿ ಮಾಧವಿ ಲತಾ ಕಣದಲ್ಲಿದ್ದು, ಇಬ್ಬರ ನಡುವೆ ತುರುಸಿನ ಹಣಾಹಣಿ ನಿರೀಕ್ಷಿಸಲಾಗಿದೆ. ಒವೈಸಿ ಕಳೆದ ಬಾರಿ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಭಗವಂತ್ ರಾವ್ ಅವರನ್ನು 2,82,186 ಮತಗಳಿಂದ ಮಣಿಸಿದ್ದರು. ಕಾಂಗ್ರೆಸ್‌ನಿಂದ ಮಹಮ್ಮದ್ ವಲೀವುಲ್ಲಾ ಸಮೀರ್ ಹಾಗೂ ಬಿಆರ್‌ಎಸ್‌ನಿಂದ ಗಡ್ಡಂ ಶ್ರೀನಿವಾಸ ಯಾದವ್ ಸ್ಪರ್ಧಿಸಿದ್ದಾರೆ.

ವೈ.ಎಸ್.ಶರ್ಮಿಳಾ (ಕಾಂಗ್ರೆಸ್)
ಕ್ಷೇತ್ರ: ಕಡಪ, ಆಂಧ್ರಪ್ರದೇಶ

ಆಂಧ್ರಪ್ರದೇಶದ ಕಡಪ ಲೋಕಸಭಾ ಕ್ಷೇತ್ರದಿಂದ ಮಾಜಿ ಮುಖ್ಯಮಂತ್ರಿ ವೈ.ಎಸ್.ರಾಜಶೇಖರ ರೆಡ್ಡಿ ಅವರ ಪುತ್ರಿ ಹಾಗೂ ಮುಖ್ಯಮಂತ್ರಿ ವೈ.ಎಸ್.ಜಗನ್ ಮೋಹನ್ ರೆಡ್ಡಿ ಅವರ ಸಹೋದರಿ ವೈ.ಎಸ್. ಶರ್ಮಿಳಾ ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಅವರು ಆಂಧ್ರ ಪ್ರದೇಶ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷೆಯೂ ಆಗಿದ್ದಾರೆ. ವೈ.ಎಸ್.ಅವಿನಾಶ್ ಅವರು ವೈಎಸ್‌ಆರ್‌ಸಿಪಿಯಿಂದ ಎದುರಾಳಿಯಾಗಿ ಸ್ಪರ್ಧಿಸುತ್ತಿದ್ದಾರೆ.

ಅರ್ಜುನ್ ಮುಂಡಾ (ಬಿಜೆಪಿ) ಕ್ಷೇತ್ರ: ಖುಂಟಿ, ಜಾರ್ಖಂಡ್
ಜಾರ್ಖಂಡ್‌ನ ಖುಂಟಿ ಲೋಕಸಭಾ ಕ್ಷೇತ್ರದಲ್ಲಿ ಕಳೆದ ಬಾರಿಯ ಪೈಪೋಟಿ ಪುನರಾವರ್ತನೆಯಾಗಲಿದೆ. ಬಿಜೆಪಿಯು ಈ ಬಾರಿಯೂ ಅರ್ಜುನ್ ಮುಂಡಾ ಅವರನ್ನೇ ಅಭ್ಯರ್ಥಿಯಾಗಿ ಕಣಕ್ಕಿಳಿಸಿದೆ. ಕೇಂದ್ರ ಸಚಿವರಾಗಿರುವ ಅರ್ಜುನ್ ಮುಂಡಾ, 2019ರ ಚುನಾವಣೆಯಲ್ಲಿ 1,445 ಮತಗಳ ಅಂತರದಿಂದ ಕಾಂಗ್ರೆಸ್‌ನ ಕಾಳೀಚರಣ್ ಮುಂಡಾ ಅವರನ್ನು ಪರಾಭವಗೊಳಿಸಿದ್ದರು. ಕಾಂಗ್ರೆಸ್ ಈ ಬಾರಿಯೂ ಕಾಳೀಚರಣ್ ಅವರನ್ನೇ ಸ್ಪರ್ಧೆಗಿಳಿಸಿದೆ.

ಚೀನಾ ಅತಿಕ್ರಮಣದಿಂದ ಮುಕ್ತಗೊಳಿಸುವುದೂ ಸೇರಿ 10 ಭರವಸೆ ನೀಡಿದ ದೆಹಲಿ ಸಿ.ಎಂ

'ಕೇಜ್ರಿವಾಲ್ ಗ್ಯಾರಂಟಿ' ಘೋಷಣೆ

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಹಾಗೂ ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಭಾನುವಾರ 'ಕೇಜ್ರಿವಾಲ್ ಗ್ಯಾರಂಟಿ' ಘೋಷಣೆ ಮಾಡಿದ್ದಾರೆ. 'ಇಂಡಿಯಾ' ಕೂಟವು ಕೇಂದ್ರದಲ್ಲಿ ಸರ್ಕಾರ ರಚಿಸಿದರೆ, ಚೀನಾದ ಅತಿಕ್ರಮಣದಿಂದ ಭಾರತದ ನೆಲವನ್ನು ಮುಕ್ತಗೊಳಿಸುವುದೂ ಸೇರಿದಂತೆ 10 ಭರವಸೆಗಳನ್ನು ನೀಡಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜನ ಮೋದಿ ಗ್ಯಾರಂಟಿ ಮತ್ತು ಕೇಜ್ರಿವಾಲ್ ಗ್ಯಾರಂಟಿ ನಡುವೆ ಆಯ್ಕೆ ಮಾಡಿಕೊಳ್ಳಬೇಕು. ಇವುಗಳಲ್ಲಿ ಎರಡನೆಯದ್ದು ಒಂದು 'ಬ್ರ್ಯಾಂಡ್' ಎಂದು ಹೇಳಿದರು.

'ನಾನು 'ಇಂಡಿಯಾ' ಕೂಟದ ಮಿತ್ರಪಕ್ಷಗಳೊಂದಿಗೆ ಇದರ ಬಗ್ಗೆ ಇನ್ನೂ ಚರ್ಚಿಸಿಲ್ಲ. ಈ ಗ್ಯಾರಂಟಿಗಳನ್ನು ಈಡೇರಿಸುವಂತೆ ನಮ್ಮ ಮಿತ್ರಪಕ್ಷಗಳನ್ನು ಒತ್ತಾಯಿಸುತ್ತೇನೆ' ಎಂದರು.

'ಎಎಪಿಯು ಅದರ ಗ್ಯಾರಂಟಿಗಳಾದ ಉಚಿತ ವಿದ್ಯುತ್, ಉತ್ತಮ ಶಾಲೆಗಳು ಮತ್ತು ಮೊಹಲ್ಲಾ ಕ್ಲಿನಿಕ್‌ಗಳನ್ನು ದೆಹಲಿಯಲ್ಲಿ ಈಡೇರಿಸಿದೆ. ಆದರೆ, ಮೋದಿ ಅವರು ಅವರ ಗ್ಯಾರಂಟಿಗಳನ್ನು ಈಡೇರಿಸಿಲ್ಲ' ಎಂದು ಟೀಕಿಸಿದರು.

ದೆಹಲಿ ಮುಖ್ಯಮಂತ್ರಿ ಹಾಗೂ ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಪತ್ರಿಕಾಗೋಷ್ಠಿಯಲ್ಲಿ 'ಕೇಜ್ರಿವಾಲ್ ಗ್ಯಾರಂಟಿ' ಘೋಷಿಸಿದರು. ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್, ಪಕ್ಷದ ಹಿರಿಯ ನಾಯಕ ಸಂದೀಪ್ ಪಾಠಕ್ ಪಾಲ್ಗೊಂಡಿದ್ದರು–ಪಿಟಿಐ ಚಿತ್ರ

> **ನಾನು 20 ದಿನಗಳ ನಂತರ ಜೈಲಿಗೆ ಹಿಂದಿರುಗಬೇಕು. ನೀವು ಎಎಪಿಗೆ ಮತ ಹಾಕಿದರೆ, ನಾನು ಜೈಲಿಗೆ ವಾಪಸ್ ಆಗಬೇಕಿಲ್ಲ**
> **ಅರವಿಂದ ಕೇಜ್ರಿವಾಲ್,** ದೆಹಲಿ ಮುಖ್ಯಮಂತ್ರಿ

'ನಾವು ದೆಹಲಿ ಮತ್ತು ಪಂಜಾಬ್‌ನಲ್ಲಿ 24x7 ವಿದ್ಯುತ್ ಪೂರೈಕೆ ಖಾತರಿಪಡಿಸಲು ಕ್ರಮ ಕೈಗೊಂಡಿದ್ದೇವೆ. ಅದನ್ನು ಇಡೀ ದೇಶಕ್ಕೆ ವಿಸ್ತರಿಸುತ್ತೇವೆ. ದೇಶದಲ್ಲಿ ಸರ್ಕಾರಿ ಶಾಲೆಗಳು ಕೆಟ್ಟ ಪರಿಸ್ಥಿತಿಯಲ್ಲಿವೆ. ನಾವು ದೇಶದಾದ್ಯಂತ ಗುಣಮಟ್ಟದ ಶಿಕ್ಷಣ ನೀಡುತ್ತೇವೆ. ಅದನ್ನು ಹೇಗೆ ಮಾಡಬೇಕು ಎನ್ನುವುದು ನಮಗೆ ಗೊತ್ತಿದೆ' ಎಂದು ಹೇಳಿದರು.

ಅಗ್ನಿಪಥ ಯೋಜನೆ ರದ್ದುಗೊಳಿಸುವುದಾಗಿ ತಿಳಿಸಿದ ಅವರು, 'ಸ್ವಾಮಿನಾಥನ್ ವರದಿಯಂತೆ ಬೆಳೆಗಳಿಗೆ ಎಂಎಸ್‌ಪಿ ನೀಡುವುದು, ದೆಹಲಿಗೆ ಪೂರ್ಣ ರಾಜ್ಯದ ಸ್ಥಾನಮಾನ ನೀಡುವುದು, ಭ್ರಷ್ಟರನ್ನು ಸ್ವಚ್ಛಗೊಳಿಸುವ ಬಿಜೆಪಿಯ 'ವಾಷಿಂಗ್ ಮಷಿನ್' ಅನ್ನು ಕಳಚುವುದು, ಅಡೆತಡೆಯಿಲ್ಲದೆ ಉದ್ದಿಮೆ, ವ್ಯಾಪಾರ ನಡೆಸಲು ವ್ಯವಸ್ಥೆಯೊಂದನ್ನು ರೂಪಿಸುವುದು ನಮ್ಮ ಗ್ಯಾರಂಟಿಗಳಾಗಿವೆ' ಎಂದು ವಿವರಿಸಿದರು.

10 ಗ್ಯಾರಂಟಿಗಳು
- ಚೀನಾ ಅತಿಕ್ರಮಣದಿಂದ ಭಾರತದ ನೆಲವನ್ನು ಮುಕ್ತಗೊಳಿಸುವುದು
- 24x7 ವಿದ್ಯುತ್ ಪೂರೈಕೆ
- ಉತ್ತಮ ಶಿಕ್ಷಣ
- ಉತ್ತಮ ಆರೋಗ್ಯ ಸೌಲಭ್ಯ
- ಪ್ರತಿ ವರ್ಷ ಎರಡು ಕೋಟಿ ಉದ್ಯೋಗ
- ಅಗ್ನಿಪಥ ಯೋಜನೆ ರದ್ದು
- ಸ್ವಾಮಿನಾಥನ್ ವರದಿಯಂತೆ ಬೆಳೆಗಳಿಗೆ ಎಂಎಸ್‌ಪಿ
- ದೆಹಲಿಗೆ ರಾಜ್ಯದ ಸ್ಥಾನಮಾನ
- ಬಿಜೆಪಿಯ 'ವಾಷಿಂಗ್ ಮಷಿನ್' ಕಳಚುವುದು
- ಉದ್ದಿಮೆ, ವ್ಯಾಪಾರ ಸುಸೂತ್ರವಾಗಿ ನಡೆಯಲು ವ್ಯವಸ್ಥೆ

'ಮೋದಿ ಮತ್ತೆ ಬಂದರೆ ದಲಿತರು ಗುಲಾಮರಾಗುತ್ತಾರೆ'

ಧುಲೆ (ಮಹಾರಾಷ್ಟ್ರ) (ಪಿಟಿಐ): ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಮೂರನೇ ಅವಧಿಗೆ ಆಯ್ಕೆ ಆದರೆ ದಲಿತರು, ಆದಿವಾಸಿಗಳನ್ನು ಗುಲಾಮರಂತೆ ನಡೆಸಿಕೊಳ್ಳುತ್ತಾರೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾನುವಾರ ಹೇಳಿದರು.

ಮಹಾರಾಷ್ಟ್ರದ ಧುಲೆಯಲ್ಲಿ ಚುನಾವಣಾ ಪ್ರಚಾರ ನಡೆಸಿದ ಅವರು, 'ದೇಶದಲ್ಲಿ ಸಂವಿಧಾನ ಮತ್ತು ಮೀಸಲಾತಿ ಉಳಿಯಲು ಕಾಂಗ್ರೆಸ್‌ಗೆ ಮತ ಹಾಕಿ' ಎಂದು ವಿನಂತಿ ಮಾಡಿದರು.

'ಸ್ವಾತಂತ್ರ್ಯಪೂರ್ವದಲ್ಲಿ ದಲಿತರು, ಆದಿವಾಸಿಗಳನ್ನು ಗುಲಾಮರಂತೆ ನಡೆಸಿಕೊಳ್ಳಲಾಗುತ್ತಿತ್ತು. ನೀವು ಮೋದಿ, ಶಾಗೆ ಮೂರನೇ ಬಾರಿಗೆ ಅಧಿಕಾರ ನೀಡಿದರೆ ಅದೇ ಪರಿಸ್ಥಿತಿ ಮರುಕಳಿಸಲಿದೆ' ಎಂದು ಎಚ್ಚರಿಸಿದರು.

'ನೀವು ನಿಮಗಾಗಿ, ನಿಮ್ಮ ಜನರಿಗಾಗಿ ಮತದಾನ ಮಾಡಬೇಕಿದೆ. ಈ ಚುನಾವಣೆಯು ದೇಶದ ಭವಿಷ್ಯವನ್ನು ರೂಪಿಸಲಿದ್ದು, ನಿರ್ಣಾಯಕ ಹೋರಾಟವಾಗಿದೆ' ಎಂದು ಪ್ರತಿಪಾದಿಸಿದರು.

'ಪ್ರಧಾನಿ ಸ್ವಂತ ಹಣದಿಂದ ಉಚಿತ ಪಡಿತರ ಕೊಡುತ್ತಿಲ್ಲ'

ಚಂಡೀಗಢ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಜೇಬಿನಿಂದ ಬಡವರಿಗೆ ಉಚಿತ ಪಡಿತರ ನೀಡುತ್ತಿಲ್ಲ. ಆ ಕಾರಣಕ್ಕೆ ಬಿಜೆಪಿಗೆ ಮತ ಹಾಕಬೇಕು ಎಂದು ಬಡವರು ಭಾವಿಸಬೇಕಿಲ್ಲ ಎಂದು ಬಹುಜನ ಸಮಾಜವಾದಿ ಪಕ್ಷದ (ಬಿಎಸ್‌ಪಿ) ಮುಖ್ಯಸ್ಥೆ ಮಾಯಾವತಿ ಅವರು ಭಾನುವಾರ ಪ್ರತಿಪಾದಿಸಿದರು.

ಹರಿಯಾಣದ ಕರ್ನಾಲ್‌ನಲ್ಲಿ ಚುನಾವಣಾ ಪ್ರಚಾರ ನಡೆಸಿದ ಅವರು, 'ಚುನಾವಣೆಯ ಸಮಯದಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ಮಂದಿ ಪ್ರತಿ ಹಳ್ಳಿಗೂ ಭೇಟಿ ನೀಡಿ, ಬಿಜೆಪಿ ಮತ್ತು ನರೇಂದ್ರ ಮೋದಿ ಉಚಿತ ಪಡಿತರ ನೀಡುತ್ತಿದ್ದಾರೆ ಎಂದು ಬಡವರ ನಡುವೆ ಪ್ರಚಾರ ಮಾಡುತ್ತಿದ್ದಾರೆ. ನೀವು ಬಿಜೆಪಿಗೆ ಮತ ಹಾಕುವ ಮೂಲಕ ಋಣ ತೀರಿಸಬೇಕು ಎಂದು ಹೇಳುತ್ತಿದ್ದಾರೆ. ಅದು ಜನರ ತೆರಿಗೆ ಹಣದಿಂದ ನೀಡುವ ಉಚಿತ ಪಡಿತರ' ಎಂದು ಹೇಳಿದರು.

ಮಾಯಾವತಿ

ಬಿಜೆಪಿ ಶ್ರೀಮಂತರ ಪಕ್ಷವಾಗಿದೆ ಮತ್ತು ಅದು ಬಡವರಿಗೆ, ದಲಿತರಿಗೆ, ಹಿಂದುಳಿದವರಿಗೆ ಏನನ್ನೂ ಮಾಡಿಲ್ಲ. ಬಡವರ ಸಮಸ್ಯೆಗಳು ಬಗೆಹರಿಯಬೇಕು ಎಂದರೆ, ಅವರಿಗೆ ಉದ್ಯೋಗ ನೀಡಬೇಕು. ತಮ್ಮ ಪಕ್ಷಕ್ಕೆ ಅವಕಾಶ ನೀಡಿದರೆ ಆ ಬಗ್ಗೆ ಗಮನ ಹರಿಸುವುದಾಗಿ ತಿಳಿಸಿದರು.

'ಇಂಡಿಯಾ ಕೂಟ, ಪಾಕ್ ಡಿಎನ್‌ಎಗೆ ಸಾಮ್ಯತೆ'

ಸೀತಾಪುರ/ವಾರಾಣಸಿ (ಪಿಟಿಐ): ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷ ಒಳಗೊಂಡಿರುವ 'ಇಂಡಿಯಾ' ಒಕ್ಕೂಟದ ಡಿಎನ್‌ಎಗೂ ಪಾಕಿಸ್ತಾನದ ಡಿಎನ್‌ಎಗೂ ಸಾಮ್ಯತೆಯಿದೆ. ಅಲ್ಲಿನ ಜನರು ಹಸಿವಿನಿಂದ ಬಳಲುತ್ತಿದ್ದಾರೆ ಹಾಗೂ ಅಲ್ಲಿ ಅಭಿವೃದ್ಧಿಯ ಕೊರತೆ ಇದೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಭಾನುವಾರ ಹೇಳಿದರು.


ಯೋಗಿ ಆದಿತ್ಯನಾಥ

ಸೀತಾಪುರದಲ್ಲಿ ನಡೆದ ಚುನಾವಣಾ ರ್‍ಯಾಲಿಯಲ್ಲಿ ಮಾತನಾಡಿದ ಅವರು, ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್‌ನ ಆಡಳಿತದಲ್ಲಿ ಜನರು ಹಸಿವಿನಿಂದ ಸಾಯುತ್ತಿದ್ದರು. ಈಗ ಪಾಕಿಸ್ತಾನದಲ್ಲಿ ಅದೇ ಪರಿಸ್ಥಿತಿ ಇದೆ. ಭಾರತದಲ್ಲಿ 80 ಕೋಟಿ ಜನರು ಉಚಿತ ಪಡಿತರ ಪಡೆಯುತ್ತಿದ್ದಾರೆ ಎಂದರು. ದೇಶವನ್ನು ಅಭಿವೃದ್ಧಿಪಡಿಸಲು ಕಾಂಗ್ರೆಸ್‌ಗೆ 60ರಿಂದ 65 ವರ್ಷಗಳಷ್ಟು ಕಾಲ ಅವಕಾಶ ಸಿಕ್ಕಿತ್ತು. ಆದರೆ ಅವರು ಆ ಕೆಲಸ ಮಾಡಲಿಲ್ಲ. ಯುಪಿಎ ಅಧಿಕಾರಾವಧಿಯಲ್ಲಿ ವೈದ್ಯಕೀಯ ಸೌಲಭ್ಯಗಳ ಕೊರತೆ ಇತ್ತು ಎಂದು ಆರೋಪಿಸಿದರು.

ಆಂಧ್ರಪ್ರದೇಶ: ಜಗನ್–ನಾಯ್ಡು ತೀವ್ರ ಸೆಣಸಾಟ

ಅಮರಾವತಿ (ಪಿಟಿಐ): ಆಂಧ್ರ ಪ್ರದೇಶದಲ್ಲಿ 25 ಲೋಕಸಭಾ ಕ್ಷೇತ್ರಗಳು ಮತ್ತು 175 ವಿಧಾನಸಭಾ ಕ್ಷೇತ್ರಗಳ ಚುನಾವಣೆಗೆ ಏಕಕಾಲಕ್ಕೆ ಮತದಾನ ನಡೆಯುತ್ತಿದ್ದು, ಅದಕ್ಕಾಗಿ ವೇದಿಕೆ ಸಿದ್ಧಗೊಂಡಿದೆ.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ಅಮಿತ್ ಶಾ, ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ವೈ.ಎಸ್. ಜಗನ್‌ಮೋಹನ್ ರೆಡ್ಡಿ ಮತ್ತು ಇತರ ಪ್ರಮುಖ ರಾಜಕೀಯ ನಾಯಕರು ರಾಜ್ಯದಲ್ಲಿ ಅಬ್ಬರದ ಪ್ರಚಾರ ನಡೆಸಿದ್ದಾರೆ.

2019ರ ವಿಧಾನಸಭಾ ಚುನಾವಣೆ ಫಲಿತಾಂಶ

(ಒಟ್ಟು ಸ್ಥಾನ 175)	ವೈಎಸ್‌ಆರ್‌ಸಿಪಿ	ಟಿಡಿಪಿ	ಜನಸೇನಾ
	151	23	1

> **ವಿರೋಧ ಪಕ್ಷಗಳ ಕುತಂತ್ರಕ್ಕೆ ಬಲಿಯಾಗಲು ನಾನು 'ಅಭಿಮನ್ಯು' ಅಲ್ಲ, 'ಅರ್ಜುನ'. ನನ್ನೊಂದಿಗೆ ಶ್ರೀಕೃಷ್ಣನಂಥವರು ಇದ್ದು, ಗೆಲುವು ನಿಶ್ಚಿತ**
> **ವೈ.ಎಸ್.ಜಗನ್‌ಮೋಹನ್ ರೆಡ್ಡಿ** ಆಂಧ್ರಪ್ರದೇಶದ ಮುಖ್ಯಮಂತ್ರಿ

> **ಆಂಧ್ರಪ್ರದೇಶದ ಭವಿಷ್ಯದ ದೃಷ್ಟಿಯಿಂದ ಈ ಚುನಾವಣೆಯು ಬಹು ಮುಖ್ಯವಾಗಿದೆ. ತಪ್ಪದೇ ಮತದಾನ ಮಾಡುವಂತೆ ಜನರಲ್ಲಿ ವಿನಂತಿಸುತ್ತೇನೆ**
> **ಎನ್.ಚಂದ್ರಬಾಬು ನಾಯ್ಡು** ಟಿಡಿಪಿ ಮುಖ್ಯಸ್ಥ

ವೈಎಸ್‌ಆರ್‌ಸಿಪಿ ಅಧ್ಯಕ್ಷ ಜಗನ್ (ಪುಲಿವೆಂದುಲ), ಟಿಡಿಪಿ ಮುಖ್ಯಸ್ಥ ಎನ್.ಚಂದ್ರಬಾಬು ನಾಯ್ಡು (ಕುಪ್ಪಂ), ಜನಸೇನಾ ಮುಖ್ಯಸ್ಥ ಮತ್ತು ನಟ ಪವನ್ ಕಲ್ಯಾಣ್ (ಪಿಠಾಪುರಂ) ವಿಧಾನಸಭಾ ಚುನಾವಣೆಯ ಕಣದಲ್ಲಿದ್ದಾರೆ. ಆಂಧ್ರಪ್ರದೇಶದ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಮತ್ತು ಮುಖ್ಯಮಂತ್ರಿ ವೈ.ಎಸ್.ಜಗನ್ ಸಹೋದರಿ ವೈ.ಎಸ್. ಶರ್ಮಿಳಾ (ಕಡಪ) ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷೆ ಪುರಂದರೇಶ್ವರಿ (ರಾಜಮಹೇಂದ್ರವರಂ) ಲೋಕಸಭಾ ಚುನಾವಣೆಯ ಕಣದಲ್ಲಿದ್ದಾರೆ.

ವೈಎಸ್‌ಆರ್‌ಸಿಪಿ ವಿಧಾನಸಭೆಯ ಎಲ್ಲ 175 ಮತ್ತು ಲೋಕಸಭೆಯ 25 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದು, ಎನ್‌ಡಿಎ ಭಾಗವಾಗಿರುವ ಟಿಡಿಪಿ ವಿಧಾನಸಭೆಯ 144 ಕ್ಷೇತ್ರಗಳು ಮತ್ತು ಲೋಕಸಭೆಯ 17 ಕ್ಷೇತ್ರಗಳಲ್ಲಿ ಸ್ಪರ್ಧಿಸಿದೆ. ಬಿಜೆಪಿ ಲೋಕಸಭೆಯ ಆರು ಕ್ಷೇತ್ರಗಳಲ್ಲಿ ಮತ್ತು ವಿಧಾನಸಭೆಯ 10 ಕ್ಷೇತ್ರಗಳಲ್ಲಿ ಕಣಕ್ಕಿಳಿದಿದೆ. ಪವನ್ ಕಲ್ಯಾಣ್ ಅವರ ಜನಸೇನಾ ಪಕ್ಷವು ಲೋಕಸಭೆಯ ಎರಡು ಮತ್ತು ವಿಧಾನಸಭೆಯ 21 ಕ್ಷೇತ್ರಗಳಲ್ಲಿ ಉಮೇದುವಾರರನ್ನು ಕಣಕ್ಕಿಳಿಸಿದೆ.

ರಾಜ್ಯದಲ್ಲಿ ವೈಎಸ್‌ಆರ್‌ಸಿಪಿ, ಎನ್‌ಡಿಎ ಮತ್ತು 'ಇಂಡಿಯಾ' ಕೂಟಗಳ ನಡುವೆ ತ್ರಿಕೋನ ಸ್ಪರ್ಧೆ ಇದೆ.

ಲೋಕಸಭಾ ಚುನಾವಣೆಯ ಕಣದಲ್ಲಿ ಒಟ್ಟು 454 ಅಭ್ಯರ್ಥಿಗಳು ಇದ್ದರೆ, ವಿಧಾನಸಭಾ ಚುನಾವಣೆಯ ಕಣದಲ್ಲಿ 2387 ಅಭ್ಯರ್ಥಿಗಳಿದ್ದಾರೆ. ರಾಜ್ಯದಲ್ಲಿ ಒಟ್ಟು 4.14 ಕೋಟಿ ಮತದಾರರು ಇದ್ದಾರೆ ಎಂದು ಆಂಧ್ರಪ್ರದೇಶದ ಮುಖ್ಯ ಚುನಾವಣಾಧಿಕಾರಿ ಎಂ.ಕೆ.ಮೀನಾ ಮಾಹಿತಿ ನೀಡಿದರು.

ಬೆಂಗಳೂರಿನಿಂದ 1,494 ಬಸ್

ಹೈದರಾಬಾದ್/ಅಮರಾವತಿ (ಪಿಟಿಐ): ಆಂಧ್ರಪ್ರದೇಶದಲ್ಲಿ ಲೋಕಸಭೆ ಮತ್ತು ವಿಧಾನಸಭೆಗೆ ಮತದಾನ ನಡೆಯುತ್ತಿರುವುದರಿಂದ ಹೈದರಾಬಾದ್, ಬೆಂಗಳೂರು, ಚೆನ್ನೈ ನಗರಗಳಿಂದ ರಾಜ್ಯಕ್ಕೆ ದೊಡ್ಡ ಸಂಖ್ಯೆಯ ಜನರು ಭಾನುವಾರ ತೆರಳಿದರು. ಆಂಧ್ರಕ್ಕೆ ಹೋಗುವ ಬಸ್ಸು, ರೈಲುಗಳು ತುಂಬಿ ತುಳುಕುತ್ತಿದ್ದವು. ಹೆದ್ದಾರಿಗಳ ಟೋಲ್ ಪ್ಲಾಜಾಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಬೆಂಗಳೂರಿನಿಂದ ಆಂಧ್ರಪ್ರದೇಶದ ವಿವಿಧ ಭಾಗಗಳಿಗೆ 1,494 (ನಿಗದಿತ ಮತ್ತು ವಿಶೇಷ ಬಸ್ಸು ಸೇರಿ) ಬಸ್ಸುಗಳನ್ನು ವ್ಯವಸ್ಥೆ ಮಾಡಲಾಗಿದೆ. ರೈಲುಗಳಿಗೆ ಹೆಚ್ಚುವರಿ ಬೋಗಿಗಳನ್ನು ಅಳವಡಿಸಲಾಗಿದೆ ಎಂದು ದಕ್ಷಿಣ ಮಧ್ಯ ರೈಲ್ವೆ ವಲಯ ತಿಳಿಸಿದೆ.

ಚುಟುಕು

ದೇಶದ ಸಂಪತ್ತು ಶ್ರೀಮಂತರಿಗೆ ನೀಡಿದ ಪ್ರಧಾನಿ: ಪ್ರಿಯಾಂಕಾ

ರಾಯ್‌ಬರೇಲಿ (ಉತ್ತರ ಪ್ರದೇಶ) (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಸಂಪೂರ್ಣ ಸಂಪತ್ತನ್ನು ನಾಲ್ಕು ಅಥವಾ ಐದು ಮಂದಿ ಶ್ರೀಮಂತರಿಗೆ ನೀಡಿದ್ದಾರೆ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಭಾನುವಾರ ಆರೋಪಿಸಿದರು.

ರಾಯ್‌ಬರೇಲಿಯಲ್ಲಿ ಹಮ್ಮಿಕೊಂಡಿದ್ದ ಚುನಾವಣಾ ರ್‍ಯಾಲಿಯಲ್ಲಿ ಮಾತನಾಡಿದ ಅವರು, ಮೋದಿ ಅವರು ಕಳೆದ ಹತ್ತು ವರ್ಷಗಳಿಂದ ವಾರಾಣಸಿ ಕ್ಷೇತ್ರದ ಸಂಸದರಾಗಿದ್ದಾರೆ. ಆದರೆ ಅವರು ಅಲ್ಲಿನ ಯಾವುದೇ ಗ್ರಾಮಕ್ಕೆ ಭೇಟಿ ನೀಡಿಲ್ಲ. ಹೇಗೆ ಜೀವನ ಸಾಗಿಸುತ್ತೀರಿ ಎಂದು ಒಬ್ಬ ರೈತನಲ್ಲೂ ಕೇಳಿಲ್ಲ ಎಂದು ದೂರಿದರು.

ಖಾಸಗೀಕರಣ ಕೆಟ್ಟದ್ದಲ್ಲ. ಆದರೆ ಪ್ರಧಾನಿಯವರು ಎಲ್ಲಾ ಸಂಪತ್ತನ್ನು ಕೆಲವು ಶ್ರೀಮಂತರಿಗೆ ನೀಡಿರುವುದು ತಪ್ಪು. ಇಂದು ಕಲ್ಲಿದ್ದಲು, ವಿದ್ಯುತ್, ಬಂದರುಗಳು ಮತ್ತು ವಿಮಾನ ನಿಲ್ದಾಣಗಳು ಪ್ರಧಾನಿ ಅವರ ಸ್ನೇಹಿತರ ಕೈಯಲ್ಲಿವೆ ಎಂದು ಹೇಳಿದರು.

ಮಾಜಿ ಪ್ರಧಾನಿಗಳಾದ ರಾಜೀವ್ ಗಾಂಧಿ ಮತ್ತು ಇಂದಿರಾ ಗಾಂಧಿ ಅವರು ಗ್ರಾಮಗಳಿಗೆ ಭೇಟಿ ನೀಡಿ ಜನರ ಸಮಸ್ಯೆಗಳನ್ನು ಆಲಿಸುತ್ತಿದ್ದರು ಎಂದು ಪ್ರತಿಪಾದಿಸಿದರು.

ಮೋದಿ ಅವರು ದೊಡ್ಡ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದಾರೆ. ಅದರಲ್ಲಿ ದೊಡ್ಡ ದೊಡ್ಡ ಬಂಡವಾಳಶಾಹಿಗಳು ಪಾಲ್ಗೊಳ್ಳುತ್ತಾರೆ. ಆದರೆ ಒಬ್ಬನೇ ಒಬ್ಬ ಬಡ ವ್ಯಕ್ತಿ ಪಾಲ್ಗೊಂಡಿಲ್ಲ ಎಂದು ಪ್ರಿಯಾಂಕಾ ಹೇಳಿದರು.

ರಾಹುಲ್‌ಗೆ ಅಣು ಬಾಂಬ್ ಭಯವಿರಬಹುದು, ಬಿಜೆಪಿಗಲ್ಲ: ಶಾ

ಪ್ರತಾಪಗಢ/ರಾಯ್‌ಬರೇಲಿ (ಉತ್ತರ ಪ್ರದೇಶ) (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು 'ಅಣು ಬಾಂಬ್'ಗೆ ಹೆದರಬಹುದು ಆದರೆ ಬಿಜೆಪಿ ಹಾಗಲ್ಲ. ಪಾಕಿಸ್ತಾನ ಆಕ್ರಮಿತ ಕಾಶ್ಮೀರವು ಭಾರತಕ್ಕೆ ಸೇರಿದ್ದು, ಅದನ್ನು ನಾವು ಮರಳಿ ಪಡೆದುಕೊಳ್ಳುತ್ತೇವೆ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಭಾನುವಾರ ಹೇಳಿದರು.

ಪ್ರತಾಪ್‌ಗಢದಲ್ಲಿ ಹಮ್ಮಿಕೊಂಡಿದ್ದ ಚುನಾವಣಾ ರ್‍ಯಾಲಿಯಲ್ಲಿ ಮಾತನಾಡಿದ ಅವರು, 'ಪಾಕಿಸ್ತಾನವು ಅಣು ಬಾಂಬ್ ಹೊಂದಿರುವುದರಿಂದ ಆ ದೇಶಕ್ಕೆ ಗೌರವ ನೀಡಬೇಕು' ಎಂದು ಕಾಂಗ್ರೆಸ್ ಮುಖಂಡ ಮಣಿಶಂಕರ್ ಅಯ್ಯರ್ ಈಚೆಗೆ ನೀಡಿದ್ದ ಹೇಳಿಕೆಯನ್ನು ಉಲ್ಲೇಖಿಸಿದರು.

ಸೋನಿಯಾ ವಿರುದ್ಧ ವಾಗ್ದಾಳಿ: ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಸಂಸದರ ಅನುದಾನದ ಶೇ 70ರಷ್ಟನ್ನು ಅಲ್ಪಸಂಖ್ಯಾತರಿಗಾಗಿ ವಿನಿಯೋಗಿಸಿದ್ದಾರೆ ಎಂದು ಆರೋಪಿಸಿದ ಅಮಿತ್ ಶಾ, 'ಗಾಂಧಿ ಕುಟುಂಬದವರು ಸುಳ್ಳು ಹೇಳುವುದರಲ್ಲಿ ಪರಿಣತರು' ಎಂದು ವಾಗ್ದಾಳಿ ನಡೆಸಿದರು.

'ನೀವು ಗಾಂಧಿ ಕುಟುಂಬದವರಿಗೆ ಹಲವು ವರ್ಷಗಳಿಂದ ಅವಕಾಶ ನೀಡಿದ್ದೀರಿ. ಆದರೆ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ. ಕಾಂಗ್ರೆಸ್‌ನವರಿಗೆ ಅಭಿವೃದ್ಧಿಯಲ್ಲಿ ನಂಬಿಕೆಯಿಲ್ಲ' ಎಂದರು.

'ಪ್ರತಿ ಮಹಿಳೆಗೆ ₹1 ಲಕ್ಷ ನೀಡುವುದಾಗಿ ಕಾಂಗ್ರೆಸ್ ಈಗ ಭರವಸೆ ನೀಡುತ್ತಿದೆ. ಪ್ರತಿ ಮಹಿಳೆಗೆ ₹15 ಸಾವಿರ ನೀಡುವುದಾಗಿ ತೆಲಂಗಾಣ ವಿಧಾನಸಭಾ ಚುನಾವಣೆಯ ವೇಳೆ ಅದು ಹೇಳಿತ್ತು. ಅಲ್ಲಿನ ಮಹಿಳೆಯರು ಕಾಂಗ್ರೆಸ್ ಅನ್ನು ಆಯ್ಕೆ ಮಾಡಿದ್ದಾರೆ. ಆದರೆ ₹15 ಸಾವಿರ ಬಿಡಿ ₹1,500 ಕೂಡ ನೀಡಿಲ್ಲ' ಎಂದು ಶಾ ಆರೋಪಿಸಿದರು.

ಖರ್ಗೆ ಹೆಲಿಕಾಪ್ಟರ್ ತಪಾಸಣೆ

ನವದೆಹಲಿ (ಪಿಟಿಐ): ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೆಲಿಕಾಪ್ಟರ್ ಅನ್ನು ಬಿಹಾರದ ಸಮಸ್ತಿಪುರದಲ್ಲಿ ಚುನಾವಣಾಧಿಕಾರಿಗಳು ತಪಾಸಣೆ ನಡೆಸಿದ್ದಾರೆ ಎಂದು ತಿಳಿಸಿರುವ ಕಾಂಗ್ರೆಸ್, ಎನ್‌ಡಿಎ ಮುಖಂಡರನ್ನು ಮುಕ್ತವಾಗಿ ಸಂಚರಿಸಲು ಬಿಟ್ಟು, ವಿರೋಧ ಪಕ್ಷಗಳ ಮುಖಂಡರನ್ನು ಗುರಿ ಮಾಡಿಕೊಳ್ಳಲಾಗಿದೆ ಎಂದು ಆರೋಪಿಸಿದೆ.

ಖರ್ಗೆ ಅವರು ಸಮಸ್ತಿಪುರ ಮತ್ತು ಮುಜಫರ್‌ಪುರದಲ್ಲಿ ಲೋಕಸಭಾ ಚುನಾವಣೆಯ ಸರಣಿ ರ್‍ಯಾಲಿಗಳನ್ನು ನಡೆಸಿದರು.

ಈ ಬಗ್ಗೆ 'ಎಕ್ಸ್'ನಲ್ಲಿ ವಿಡಿಯೊ ಸಂದೇಶ ಪ್ರಕಟಿಸಿರುವ ಕಾಂಗ್ರೆಸ್ ಮುಖಂಡ ರಾಜೇಶ್ ರಾಠೋಡ್, 'ಈ ಹಿಂದೆ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರ ಹೆಲಿಕಾಪ್ಟರ್ ಅನ್ನು ಕೇರಳದಲ್ಲಿ ತಪಾಸಣೆ ನಡೆಸಲಾಗಿತ್ತು. ಈಗ ಬಿಹಾರದ ಸಮಸ್ತಿಪುರದಲ್ಲಿ ಖರ್ಗೆ ಅವರ ಹೆಲಿಕಾಪ್ಟರ್ ತಪಾಸಣೆ ಮಾಡಲಾಗಿದೆ' ಎಂದು ಹೇಳಿದ್ದಾರೆ.

ಬಿಹಾರ ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷರಾಗಿರುವ ರಾಠೋಡ್, 'ರಾಜ್ಯದ ಮುಖ್ಯ ಚುನಾವಣಾಧಿಕಾರಿಯೇ ಖುದ್ದಾಗಿ ಖರ್ಗೆ ಅವರ ಹೆಲಿಕಾಪ್ಟರ್ ಅನ್ನು ತಪಾಸಣೆ ನಡೆಸಿದ್ದಾರೆ' ಎಂದು ವಿಡಿಯೊದಲ್ಲಿ ಹೇಳಿದ್ದಾರೆ. ಕಾಂಗ್ರೆಸ್ ಮುಖಂಡರ ಹೆಲಿಕಾಪ್ಟರ್‌ಗಳನ್ನು ವಾಡಿಕೆಯಂತೆ ತಪಾಸಣೆ ಮಾಡಿದ ರೀತಿಯಲ್ಲಿ, ಎನ್‌ಡಿಎ ಕೂಟದ ಪ್ರಮುಖರ ಹೆಲಿಕಾಪ್ಟರ್‌ಗಳನ್ನು ತಪಾಸಣೆ ಮಾಡಲಾಗಿದೆಯೇ ಎನ್ನುವ ಬಗ್ಗೆ ಚುನಾವಣಾ ಆಯೋಗವು ಸ್ಪಷ್ಟೀಕರಣ ನೀಡಬೇಕಿದೆ ಎಂದು ರಾಠೋಡ್ ಒತ್ತಾಯಿಸಿದ್ದಾರೆ.

ಎಂಥಾ ಮಾತು!

ಸಂವಿಧಾನವು ನಮ್ಮ ಜೀವದಾತ. ಅದರ ರಕ್ಷಣೆಗಾಗಿ ಮತದಾನ ಮಾಡಿ. ಸಂವಿಧಾನ ಸುರಕ್ಷಿತವಾಗಿದ್ದರೆ, ನಮ್ಮ ಆತ್ಮಗೌರವ ಮತ್ತು ಹಕ್ಕುಗಳೂ ಸುರಕ್ಷಿತ. ಬಹುಜನ ಸಮಾಜದ ಜನರು ನಮಗೆ ಬೆಂಬಲ ನೀಡಲು ಮುಂದೆ ಬರುತ್ತಿದ್ದಾರೆ. ಇದರಿಂದ ಬಿಜೆಪಿ ವಿರುದ್ಧದ ನಮ್ಮ ಹೋರಾಟಕ್ಕೆ ಬಲ ಬಂದಿದೆ
ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಮುಖ್ಯಸ್ಥ

ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣೆಯಲ್ಲಿ ಹ್ಯಾಟ್ರಿಕ್ ಜಯ ಸಾಧಿಸಲು ಸಿದ್ಧರಾಗಿದ್ದಾರೆ ಮತ್ತು ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿಸುವ ಗುರಿಯತ್ತ ದಾಪುಗಾಲು ಹಾಕಲಿದ್ದಾರೆ. ಆಡಳಿತ ಮುಂದುವರಿಕೆಯು ದೇಶದ ಪ್ರಗತಿಯಲ್ಲಿ ಮಹತ್ವದ್ದಾಗಿದೆ. 'ತುಕ್ಡೆ ತುಕ್ಡೆ ಗ್ಯಾಂಗ್'ನವರು ಕಾಂಗ್ರೆಸ್‌ಗೆ ಏಕೆ ಸೇರುತ್ತಿದ್ದಾರೆ?, ನಿಷೇಧಿತ ಸಂಘಟನೆಯಾದ ಪಿಎಫ್‌ಐ ಕಾಂಗ್ರೆಸ್‌ಗೆ ಯಾಕೆ ಬೆಂಬಲ ನೀಡುತ್ತಿದೆ?
ಅನುರಾಗ್ ಠಾಕೂರ್, ಕೇಂದ್ರ ಸಚಿವ

ಕ್ಷೇತ್ರ ಮಹಾತ್ಮೆ

ಮಹಾರಾಷ್ಟ್ರದ ಬೀಡ್ ಲೋಕಸಭಾ ಕ್ಷೇತ್ರವು ಬಿಜೆಪಿ ಮತ್ತು ಎನ್‌ಸಿಪಿ ಶರದ್ ಪವಾರ್ ಬಣದ ಅಭ್ಯರ್ಥಿಗಳ ನಡುವಣ ನೇರ ಹಣಾಹಣಿಗೆ ಸಾಕ್ಷಿಯಾಗಲಿದೆ. ಬಿಜೆಪಿಯು ಮಾಜಿ ಸಚಿವೆ ಪಂಕಜಾ ಮುಂಡೆ ಅವರನ್ನು ಕಣಕ್ಕಿಳಿಸಿದರೆ, ಎನ್‌ಸಿಪಿ ಶರದ್ ಪವಾರ್ ಬಣವು ಭಜರಂಗ್ ಮನೋಹರ್ ಸೋನವಣೆ ಅವರನ್ನು ಅಖಾಡಕ್ಕಿಳಿಸಿದೆ. ಡಾ. ಬಿ.ಆರ್. ಅಂಬೇಡ್ಕರ್ ಮೊಮ್ಮಗ ಪ್ರಕಾಶ್ ಅಂಬೇಡ್ಕರ್ ಅವರ ವಂಚಿತ್ ಬಹುಜನ ಆಘಾಡಿ (ವಿಬಿಎ) ಪಕ್ಷವು ಅಶೋಕ್ ಹಿಂಗೆ ಅವರನ್ನು ಅಭ್ಯರ್ಥಿಯಾಗಿಸಿದೆ. 2019ರ ಚುನಾವಣೆಯಲ್ಲಿ ಪಂಕಜಾ ಅವರ ಸಹೋದರಿ ಪ್ರೀತಂ ಮುಂಡೆ ಅವರು 1,68,368 ಮತಗಳ ಅಂತರದಿಂದ ಎನ್‌ಸಿಪಿಯ ಭಜರಂಗ್ ಮನೋಹರ್ ಸೋನವಣೆ ಅವರನ್ನು ಪರಾಭವಗೊಳಿಸಿದ್ದರು. ಪಂಕಜಾ ಅವರ ತಂದೆ ಮಾಜಿ ಕೇಂದ್ರ ಸಚಿವ ಗೋಪಿನಾಥ್ ಮುಂಡೆ ಅವರು ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. 2009ರಿಂದಲೂ ಈ ಕ್ಷೇತ್ರವು ಗೋಪಿನಾಥ್ ಮುಂಡೆ ಅವರ ಕುಟುಂಬದ ಹಿಡಿತದಲ್ಲಿದೆ. ರೈತರ ಸಮಸ್ಯೆ, ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆಗಳೇ ಈ ಬಾರಿ ಪ್ರಚಾರದ ಪ್ರಮುಖ ವಿಷಯಗಳಾಗಿದ್ದವು. ಎನ್‌ಸಿಪಿಯು 'ಇಂಡಿಯಾ' ಒಕ್ಕೂಟದ ಜೊತೆಗಿರುವುದು ಭಜರಂಗ್ ಮನೋಹರ್ ಅವರ ಗೆಲುವಿನ ವಿಶ್ವಾಸವನ್ನು ಹೆಚ್ಚಿಸಿದೆ. ವಿಬಿಎ ಅಭ್ಯರ್ಥಿಯನ್ನು ಕಣಕ್ಕಿಳಿಸಿರುವುದರಿಂದ ಬಿಜೆಪಿ ವಿರೋಧಿ ಮತಗಳು ವಿಭಜನೆಯಾಗುವ ಸಾಧ್ಯತೆ ಇದೆ ಎಂದು ಚುನಾವಣಾ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಏರ್ ಇಂಡಿಯಾ: ಸಿಬ್ಬಂದಿ ಕರ್ತವ್ಯಕ್ಕೆ ಹಾಜರು

ಮುಂಬೈ/ ನವದೆಹಲಿ (ಪಿಟಿಐ): ಆಡಳಿತ ಮಂಡಳಿಯ ಅಸಮರ್ಪಕ ನಿರ್ವಹಣೆ ಖಂಡಿಸಿ ಅನಾರೋಗ್ಯದ ರಜೆಯ ಮೇಲೆ ತೆರಳಿದ್ದ ಕ್ಯಾಬಿನ್ ಸಿಬ್ಬಂದಿ ಕರ್ತವ್ಯ ಮರಳಿದ್ದು, ಏರ್ ಇಂಡಿಯಾ ಎಕ್ಸ್‌ಪ್ರೆಸ್ ಕಂಪನಿಯ ವಿಮಾನ ಸೇವೆಯು ನಿಧಾನ-ಗತಿಯಲ್ಲಿ ಯಥಾಸ್ಥಿತಿಗೆ ಮರಳುತ್ತಿದೆ.

ಟಾಟಾ ಸಮೂಹಕ್ಕೆ ಸೇರಿದ ಏರ್ ಇಂಡಿಯಾ ಎಕ್ಸ್‌ಪ್ರೆಸ್‌ನ 380 ವಿಮಾನಗಳು ಪ್ರತಿದಿನ ಕಾರ್ಯಾಚರಣೆ ನಡೆಸುತ್ತವೆ. ಈ ಪೈಕಿ ಭಾನುವಾರ 20 ವಿಮಾನಗಳ ಹಾರಾಟ ರದ್ದಾಗಿದೆ. ಮಂಗಳವಾರದ ವೇಳೆಗೆ ಪ್ರಯಾಣಿಕರಿಗೆ ಪೂರ್ಣ ಪ್ರಮಾಣದಲ್ಲಿ ಸೇವೆ ದೊರೆಯಲಿದೆ ಎಂದು ಮೂಲಗಳು ತಿಳಿಸಿವೆ.

ಆದರೆ, ಈ ಕುರಿತು ಕಂಪನಿಯು ಯಾವುದೇ ಅಧಿಕೃತ ಮಾಹಿತಿ ನೀಡಿಲ್ಲ.

ರಜೆಯ ಮೇಲೆ ತೆರಳಿದ್ದ 200ಕ್ಕೂ ಹೆಚ್ಚು ಸಿಬ್ಬಂದಿ ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಸಿಬ್ಬಂದಿ ಕಡೆಯಿಂದ ಸೇವೆಯಲ್ಲಿ ವಿಳಂಬವಾಗಿಲ್ಲ ಎಂದು ಏರ್ ಇಂಡಿಯಾ ಎಕ್ಸ್‌ಪ್ರೆಸ್ ನೌಕರರ ಸಂಘ ತಿಳಿಸಿದೆ.

ಎಸ್‌ಐಪಿ–ಎಸ್‌ಟಿಪಿ: ಹೂಡಿಕೆ ಹೇಗೆ?

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಮ್ಯೂಚುಯಲ್ ಫಂಡ್ ಹೂಡಿಕೆ ಅಂತ ಬಂದಾಗ ಎಸ್‌ಐಪಿ (ವ್ಯವಸ್ಥಿತ ಹೂಡಿಕೆ ಯೋಜನೆ) ಮತ್ತು ಎಸ್‌ಟಿಪಿ (ವ್ಯವಸ್ಥಿತ ವರ್ಗಾವಣೆ ಯೋಜನೆ) ಬಗ್ಗೆ ನಾವು ಕೇಳಿಯೇ ಇರುತ್ತೇವೆ. ಆದರೆ, ಯಾರಿಗೆ ಎಸ್‌ಐಪಿ ಸೂಕ್ತ, ಯಾರಿಗೆ ಎಸ್‌ಟಿಪಿ ಮಾದರಿ ಸರಿ ಹೊಂದುತ್ತದೆ ಎಂದು ಬಹುತೇಕರಿಗೆ ತಿಳಿದಿಲ್ಲ. ಎಸ್‌ಐಪಿ ಮತ್ತು ಎಸ್‌ಟಿಪಿ ಅಂದರೆ ಏನು? ಇವುಗಳಿಂದ ಯಾರಿಗೆ ಲಾಭ? ಯಾವ ಸಂದರ್ಭದಲ್ಲಿ ಯಾವ ಮಾದರಿಯನ್ನು ಪರಿಗಣಿಸಬೇಕು? ಬನ್ನಿ ವಿವರವಾಗಿ ಕಲಿಯೋಣ.

ಎಸ್‌ಐಪಿ–ಎಸ್‌ಟಿಪಿ ಅಂದರೆ ಏನು?: ನಿರ್ದಿಷ್ಟ ಮ್ಯೂಚುಯಲ್ ಫಂಡ್‌ವೊಂದನ್ನು ಆಯ್ಕೆ ಮಾಡಿಕೊಂಡು ಪ್ರತಿ ತಿಂಗಳು ನಿಯಮಿತವಾಗಿ ನಿಗದಿತ ಮೊತ್ತವನ್ನು ಹೂಡಿಕೆ ಮಾಡುತ್ತಾ ಸಾಗುವುದನ್ನು ಎಸ್‌ಐಪಿ ಎನ್ನಬಹುದು. ಉದಾಹರಣೆಗೆ ಮ್ಯೂಚುಯಲ್ ಫಂಡ್‌ವೊಂದನ್ನು ಆಯ್ಕೆ ಮಾಡಿಕೊಂಡು ಪ್ರತಿ ತಿಂಗಳು ₹10 ಸಾವಿರ ಹೂಡಿಕೆ ಮಾಡುವುದು ಎಸ್‌ಐಪಿಯಾಗುತ್ತದೆ.

ನಿರ್ದಿಷ್ಟ ಮ್ಯೂಚುಯಲ್ ಫಂಡ್ ಕಂಪನಿಯ ಲಿಕ್ವಿಡ್ ಫಂಡ್‌ನಲ್ಲಿ ಒಂದಿಷ್ಟು ದೊಡ್ಡ ಮೊತ್ತದ ಹಣವನ್ನು ಹೂಡಿಕೆ ಮಾಡಿ, ಆ ಫಂಡ್‌ನಿಂದ ಅದೇ ಕಂಪನಿಯ ಮತ್ತೊಂದು ಇಂಡೆಕ್ಸ್ ಮ್ಯೂಚುಯಲ್ ಫಂಡ್‌ಗೆ ವ್ಯವಸ್ಥಿತವಾಗಿ ಹಣ ವರ್ಗಾಯಿಸುವ ಪ್ರಕ್ರಿಯೆಯನ್ನು ಎಸ್‌ಟಿಪಿ (ಸಿಸ್ಟಮ್ಯಾಟಿಕ್ ಟ್ರಾನ್ಸ್‌ಫರ್ ಪ್ಲಾನ್) ಎನ್ನಬಹುದು.

ಉದಾಹರಣೆಗೆ ಎಸ್‌ಬಿಐ ಲಿಕ್ವಿಡ್ ಫಂಡ್‌ನಲ್ಲಿ ₹3 ಲಕ್ಷ ಹೂಡಿಕೆ ಮಾಡಿದ್ದೀರಿ ಎಂದು ಭಾವಿಸೋಣ. ಎಸ್‌ಬಿಐ ಲಿಕ್ವಿಡ್ ಫಂಡ್‌ನಿಂದ ನಿಯಮಿತವಾಗಿ ಪ್ರತಿ ತಿಂಗಳಿಗೊಮ್ಮೆ ₹10 ಸಾವಿರವನ್ನು ಎಸ್‌ಬಿಐ ಬ್ಲೂ ಚಿಪ್ ಫಂಡ್‌ಗೆ ವರ್ಗಾಯಿಸುವುದನ್ನು ಎಸ್‌ಟಿಪಿ ಎಂದು ಹೇಳಬಹುದು.

ಒಂದು ವಿಷಯ ನೆನಪಿರಲಿ. ಒಂದು ಕಂಪನಿಯ ಮ್ಯೂಚುಯಲ್ ಫಂಡ್‌ನಿಂದ ಅದೇ ಕಂಪನಿಯ ಮತ್ತೊಂದು ಮ್ಯೂಚುಯಲ್ ಫಂಡ್‌ಗೆ ಮಾತ್ರ ಎಸ್‌ಟಿಪಿ ಮಾಡಬಹುದು. ಎಸ್‌ಬಿಐ ಲಿಕ್ವಿಡ್ ಮ್ಯೂಚುಯಲ್ ಫಂಡ್‌ನಿಂದ ಮತ್ತೊಂದು ಎಸ್‌ಬಿಐ ಇಂಡೆಕ್ಸ್ ಮ್ಯೂಚುಯಲ್ ಫಂಡ್‌ಗೆ ಮಾತ್ರ ಎಸ್‌ಟಿಪಿ ಮಾಡಲು ಸಾಧ್ಯ. ಎಸ್‌ಬಿಐ ಮ್ಯೂಚುಯಲ್ ಫಂಡ್‌ನಿಂದ ಎಕ್ಸಿಸ್ ಇಂಡೆಕ್ಸ್ ಮ್ಯೂಚುಯಲ್ ಫಂಡ್‌ಗೆ ಎಸ್‌ಟಿಪಿ ಸಾಧ್ಯವಿಲ್ಲ.

ಎಸ್‌ಐಪಿ, ಎಸ್‌ಟಿಪಿ ನಡುವಿನ ವ್ಯತ್ಯಾಸ: ಎಸ್‌ಐಪಿಯಲ್ಲಿ ಪ್ರತಿ ತಿಂಗಳು ನಿರ್ದಿಷ್ಟ ಮೊತ್ತ ಹೂಡಿಕೆಯಾಗುತ್ತದೆ. ಆದರೆ, ಎಸ್‌ಟಿಪಿಯಲ್ಲಿ ದೊಡ್ಡ ಮೊತ್ತದ ಹೂಡಿಕೆ ಹಣವನ್ನು ನಿಯಮಿತವಾಗಿ ಒಂದು ಫಂಡ್‌ನಿಂದ ಮತ್ತೊಂದಕ್ಕೆ ವರ್ಗಾಯಿಸಲಾಗುತ್ತದೆ. ಎಸ್‌ಐಪಿಯಲ್ಲಿ ಹಣ ನಿಮ್ಮ ಬ್ಯಾಂಕ್ ಖಾತೆಯಿಂದ ಕಡಿತಗೊಳ್ಳುತ್ತದೆ. ಆದರೆ, ಎಸ್‌ಟಿಪಿಯಲ್ಲಿ ನಿರ್ದಿಷ್ಟ ಕಂಪನಿಯೊಂದರ ಮ್ಯೂಚುಯಲ್ ಫಂಡ್ ಸ್ಕೀಂಗಳ ನಡುವೆ ಹಣ ವರ್ಗಾವಣೆ ಆಗುತ್ತದೆ. ಎಸ್‌ಐಪಿ ಹೂಡಿಕೆ ಮಾಡಿದಾಗ ಷೇರು ಮಾರುಕಟ್ಟೆಯ ಏರಿಳಿತದ ಲಾಭ ಸಿಕ್ಕಿ ಮ್ಯೂಚುಯಲ್ ಫಂಡ್ ಖರೀದಿ ವೆಚ್ಚವನ್ನು ತಗ್ಗಿಸಿಕೊಳ್ಳಬಹುದಾಗಿದೆ. ಅಲ್ಲದೆ, ಶಿಸ್ತುಬದ್ಧ ಹೂಡಿಕೆಯೂ ಎಸ್‌ಐಪಿಯಲ್ಲಿ ಸಾಧ್ಯವಾಗುತ್ತದೆ.

ಎಸ್‌ಟಿಪಿಯಲ್ಲೂ ಈ ಅನುಕೂಲಗಳು ಸಿಗುತ್ತವೆ. ಜೊತೆಗೆ, ಒಂದು ಮ್ಯೂಚುಯಲ್ ಫಂಡ್‌ನಿಂದ ಮತ್ತೊಂದಕ್ಕೆ ಕಾಲಕಾಲಕ್ಕೆ ಹಣ ವರ್ಗಾವಣೆ ಆಗುವುದರಿಂದ ರಿಸ್ಕ್ ನಿರ್ವಹಣೆಯೂ ಸುಲಭವಾಗುತ್ತದೆ.

ಎಸ್‌ಐಪಿ ಹೂಡಿಕೆ, ಎಸ್‌ಟಿಪಿ ಹೂಡಿಕೆ ಯಾರಿಗೆ?: ಪ್ರತಿ ತಿಂಗಳು ವೇತನ ಪಡೆಯುವವರು, ನಿಯಮಿತವಾಗಿ ನಿರ್ದಿಷ್ಟ ಆದಾಯ ಪಡೆದುಕೊಳ್ಳುವವರು, ದೊಡ್ಡ ಮೊತ್ತದ ಹಣ ಹೂಡಿಕೆಗೆ ಇಲ್ಲ ಎನ್ನುವವರು ಎಸ್‌ಐಪಿ ಹೂಡಿಕೆಯನ್ನು ಪರಿಗಣಿಸಬಹುದು.

ವರ್ಷಕ್ಕೊಮ್ಮೆ ಬೋನಸ್ ಹಣ ಸಿಕ್ಕಾಗ ಅಥವಾ ಇನ್ಯಾವುದೋ ದೊಡ್ಡ ಮೊತ್ತ ಸಿಕ್ಕಾಗ ಆ ಮೊತ್ತವನ್ನು ಒಂದು ಲಿಕ್ವಿಡ್ ಫಂಡ್‌ನಲ್ಲಿ ತೊಡಗಿಸಿ ವೇತನ ಪಡೆಯುವವರು ಕೂಡ ಎಸ್‌ಟಿಪಿ ಹೂಡಿಕೆ ಪರಿಗಣಿಸಬಹುದು.

ನೀವು ಉದ್ಯಮಿ ಆಗಿದ್ದರೆ, ಸಣ್ಣ ವ್ಯಾಪಾರ ನಡೆಸುತ್ತಿದ್ದರೆ, ಸ್ವಂತ ಉದ್ಯೋಗಿಯಾಗಿದ್ದರೆ, ಪ್ರತಿ ತಿಂಗಳು ನಿರ್ದಿಷ್ಟ ಸಂಬಳವಿರದೆ ವರ್ಷದ ಕೊನೆಗೆ ಅಥವಾ ವರ್ಷಕ್ಕೆ ಮೂರ್ನಾಲ್ಕು ಬಾರಿ ಮಾತ್ರ ದೊಡ್ಡ ಮೊತ್ತದ ಹಣ ನಿಮಗೆ ಸಿಗುತ್ತದೆ ಎಂದರೆ ಎಸ್‌ಟಿಪಿ ಮಾದರಿಯ ಹೂಡಿಕೆ ಹೆಚ್ಚು ಸರಿ ಹೊಂದುತ್ತದೆ. ದೊಡ್ಡ ಮೊತ್ತದ ಹಣವನ್ನು ಲಿಕ್ವಿಡ್ ಫಂಡ್‌ನಲ್ಲಿ ತೊಡಗಿಸಿ ಅಲ್ಲಿಂದ ಅದೇ ಕಂಪನಿಯ ಮತ್ತೊಂದು ಫಂಡ್‌ಗೆ ಹಣ ವರ್ಗಾಯಿಸಿ ಹೂಡಿಕೆಯನ್ನು ಮುಂದುವರಿಸಬಹುದು. ಹೀಗೆ ಮಾಡಿದಾಗ ಮಾರುಕಟ್ಟೆಯ ಏರಿಳಿತದ ಲಾಭ ಸಿಗುತ್ತದೆ.

ಯಾಕೆ ಎಸ್‌ಟಿಪಿ ಮಹತ್ವದ್ದು?: ಈಕ್ವಿಟಿ ಮ್ಯೂಚುಯಲ್ ಫಂಡ್‌ಗಳಲ್ಲಿ ಒಂದೇ ಬಾರಿಗೆ ದೊಡ್ಡ ಮೊತ್ತದ ಹಣ ಹೂಡಿಕೆ ಮಾಡಿದಾಗ ಮಾರುಕಟ್ಟೆ ಏರಿಳಿತದ ಕಾರಣಕ್ಕೆ ನಷ್ಟವಾಗುವ ಸಾಧ್ಯತೆ ಇರುತ್ತದೆ. ಅದರಲ್ಲೂ ಷೇರು ಮಾರುಕಟ್ಟೆಯಲ್ಲಿ ಗೂಳಿ ಓಟವಿದ್ದಾಗ ದೊಡ್ಡ ಮೊತ್ತದ ಹಣ ಹೂಡಿಕೆ ಮಾಡುವುದು ಅಪಾಯಕಾರಿ. ಈ ರಿಸ್ಕ್ ತಪ್ಪಿಸಲು ಉತ್ತಮ ಆಯ್ಕೆ ಎಸ್‌ಟಿಪಿ ವಿಧಾನ. ಎಸ್‌ಟಿಪಿ ವಿಧಾನ ಬಳಸಿಕೊಂಡು ದೊಡ್ಡ ಮೊತ್ತದ ಹಣವನ್ನು ಲಿಕ್ವಿಡ್ ಫಂಡ್‌ನಲ್ಲಿ ಹೂಡಿಕೆ ಮಾಡಿ ನಿಯಮಿತವಾಗಿ ಇಂಡೆಕ್ಸ್ ಫಂಡ್‌ಗೆ ವರ್ಗಾವಣೆ ಮಾಡಿಕೊಂಡರೆ ಮಾರುಕಟ್ಟೆ ಅನಿಶ್ಚಿತತೆಯನ್ನು ಮೀರಿ ಹೂಡಿಕೆ ಮಾಡಲು ಸಾಧ್ಯವಾಗುತ್ತದೆ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಭಾರಿ ಕುಸಿತ ಕಂಡ ಸೂಚ್ಯಂಕಗಳು

ಮೇ 10ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಭಾರಿ ಕುಸಿತ ಕಂಡಿವೆ. 72,664 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.64ರಷ್ಟು ಇಳಿಕೆಯಾಗಿದೆ. 22,055 ಅಂಶಗಳಲ್ಲಿ ವಹಿವಾಟು ಮುಗಿಸಿದ ನಿಫ್ಟಿ ಶೇ 1.87ರಷ್ಟು ತಗ್ಗಿದೆ.

ಕಳೆದ ಎರಡು ತಿಂಗಳ ಅವಧಿಯಲ್ಲಿ ಸೂಚ್ಯಂಕಗಳು ಕಂಡಿರುವ ದೊಡ್ಡಮಟ್ಟದ ಕುಸಿತ ಇದಾಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಷೇರುಗಳ ಮಾರಾಟ, ಲೋಕಸಭಾ ಚುನಾವಣೆಯಲ್ಲಿ ಯಾರು ಗೆಲುವು ದಾಖಲಿಸಲಿದ್ದಾರೆ ಎಂಬ ಪ್ರಶ್ನೆ, ಚೀನಾ ಮಾರುಕಟ್ಟೆಯತ್ತ ವಿದೇಶಿ ಹೂಡಿಕೆದಾರರ ಚಿತ್ತ ಹರಿಸಿರುವುದು ಸೇರಿ ಹಲವು ಅಂಶಗಳು ಷೇರುಪೇಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 6.06, ನಿಫ್ಟಿ ಮಾಧ್ಯಮ ಸೂಚ್ಯಂಕ ಶೇ 4.27, ಅನಿಲ ಮತ್ತು ತೈಲ ಸೂಚ್ಯಂಕ ಶೇ 3.92, ಎನರ್ಜಿ ಸೂಚ್ಯಂಕ ಶೇ 3.76, ಲೋಹ ಸೂಚ್ಯಂಕ ಶೇ 3.21, ಹಣಕಾಸು ಸೂಚ್ಯಂಕ ಶೇ 3.17 ಹಾಗೂ ನಿಫ್ಟಿ ಬ್ಯಾಂಕ್ ಶೇ 3.01ರಷ್ಟು ಕುಸಿದಿವೆ.

ನಿಫ್ಟಿ ಎಫ್‌ಎಂಸಿಜಿ ಶೇ 1.88, ನಿಫ್ಟಿ ಆಟೊ ಶೇ 1.37 ಮತ್ತು ನಿಫ್ಟಿ ಐ.ಟಿ. ಸೂಚ್ಯಂಕ ಶೇ 0.12ರಷ್ಟು ಜಿಗಿದಿವೆ.

ಏರಿಕೆ- ಇಳಿಕೆ: ನಿಫ್ಟಿಯಲ್ಲಿ ಹೀರೊ ಮೋಟೊಕಾರ್ಪ್ ಶೇ 7.25, ಬ್ರಿಟಾನಿಯಾ ಇಂಡಸ್ಟ್ರೀಸ್ ಶೇ 6.82, ಹಿಂದುಸ್ತಾನ್ ಯೂನಿಲಿವರ್ ಶೇ 6.39, ಕೋಟಕ್ ಮಹೀಂದ್ರ ಬ್ಯಾಂಕ್ ಶೇ 5.38, ಟಾಟಾ ಮೋಟರ್ಸ್ ಶೇ 3.26, ನೆಸ್ಲೆ ಇಂಡಿಯಾ ಶೇ 2.81, ಏರ್‌ಟೆಲ್ ಶೇ 1.67 ಮತ್ತು ಟಿಸಿಎಸ್ ಷೇರಿನ ಮೌಲ್ಯವು ಶೇ 1.47ರಷ್ಟು ಜಿಗಿದಿದೆ.

ಶ್ರೀರಾಮ್ ಫೈನಾನ್ಸ್ ಶೇ 9.43, ಟೈಟನ್ ಶೇ 6.91, ಡಾ.ರೆಡ್ಡೀಸ್ ಲ್ಯಾಬ್ಸ್ ಶೇ 6.73, ಅದಾನಿ ಎಂಟರ್ ಪ್ರೈಸಸ್ ಶೇ 6.48, ಎಲ್ ಆ್ಯಂಡ್ ಟಿ ಶೇ 6.31, ಸಿಪ್ಲಾ ಶೇ 5.99, ಒಎನ್‌ಜಿಸಿ ಶೇ 5.54 ಮತ್ತು ಕೋಲ್ ಇಂಡಿಯಾ ಷೇರಿನ ಮೌಲ್ಯವು ಶೇ 5.35ರಷ್ಟು ಇಳಿಕೆಯಾಗಿದೆ.

ಮುನ್ನೋಟ: ಸದ್ಯದ ಪರಿಸ್ಥಿತಿಯಲ್ಲಿ ಷೇರುಪೇಟೆಯಲ್ಲಿ ಅನಿಶ್ಚಿತತೆ ಪರಿಸ್ಥಿತಿ ಮುಂದುವರಿಯಲಿದೆ. ಹೂಡಿಕೆದಾರರು ಲೋಕಸಭಾ ಚುನಾವಣೆಯ ಮತದಾನೋತ್ತರ ಸಮೀಕ್ಷೆಗಳ ಮೇಲೆ ಚಿತ್ತ ಹರಿಸಿದ್ದಾರೆ. ಜಾಗತಿಕ ವಿದ್ಯಮಾನಗಳು ಕೂಡ ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಈ ವಾರ ಜೊಮ್ಯಾಟೊ, ಪಿವಿಆರ್ ಐನಾಕ್ಸ್, ಜಿಂದಾಲ್ ಸ್ಟೀಲ್ ಆ್ಯಂಡ್ ಪವರ್, ಏರ್‌ಟೆಲ್, ಪತಂಜಲಿ ಫುಡ್ಸ್, ಅಪೋಲೊ ಟಯರ್ಸ್, ಶ್ರೀಸಿಮೆಂಟ್ಸ್, ಸೀಮನ್ಸ್, ಹನಿವೆಲ್ ಆಟೊಮೇಷನ್, ಮ್ಯಾನ್ ಕೈಂಡ್ ಫಾರ್ಮಾ, ಮಹೀಂದ್ರ ಆ್ಯಂಡ್ ಮಹೀಂದ್ರ, ಎಚ್‌ಎಎಲ್, ಬಯೋಕಾನ್, ವಿಗಾರ್ಡ್, ಎಂಡ್ಯೂರೆನ್ಸ್ ಟೆಕ್ನಾಲಜೀಸ್, ಎನ್‌ಎಚ್‌ಪಿಸಿ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

In Loving Memory of

Shri V. ANANTHA RAJU
21 Sept 1944 - 2 May 2024
The values that you have taught us will lead us forever
VAIKUNTA SAMARADHANA
will be held on Tuesday, 14th of May 2024 at our Sarakki, J P Nagar Residence
Deeply Mourned by Family Members

4ನೆಯ ವರ್ಷದ ಪುಣ್ಯಸ್ಮರಣೆ

ಸೌಭಾಗ್ಯವತಿ ಶ್ರೀಮತಿ ಬಿ. ಶಾಂತ
ಜನನ: 22.07.1956 – ನಿಧನ: 13.05.2021
ನೀವು ನಮ್ಮನ್ನು ಅಗಲಿ ಇಂದಿಗೆ ನಾಲ್ಕು ವರ್ಷವಾಯಿತು. ನೀವು ತೋರಿದ ಕಾಳಜಿ ಮತ್ತು ಕಳಕಳಿ ಹಾಗೂ ಕುಟುಂಬದ ಬಗೆಗಿನ ಬದ್ಧತೆ ಅನುಕರಣೀಯ. ನಿಮ್ಮನ್ನು ನೆನೆಯದ ದಿನವಿಲ್ಲ. ನೀವು ತೋರಿದ ಆದರ್ಶದ ಹಾದಿಯಲ್ಲಿ ನಮ್ಮ ಪಯಣ ಸಾಗಿದೆ.
ತಮ್ಮ ಸ್ಮರಣೆಯಲ್ಲಿರುವ
ಪತಿ ಶ್ರೀ ಕೆ. ವೆಂಕಟೇಶಪ್ಪ (ಹಾಪ್‌ಕಾಮ್ಸ್)
ಮಂಟಪ ಗ್ರಾಮ. ಬಿ.ಕೆ. ಶ್ರೀರಾಮ ಮತ್ತು ಕುಟುಂಬದವರು.

NAME CHANGE ANNOUNCEMENT
Log on to :
dhclassifieds.com

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

‘ದಿಕ್ಕು ತಪ್ಪಿಸುವ ಪ್ಯಾಕಿಂಗ್’

ನವದೆಹಲಿ (ಪಿಟಿಐ): ಆಹಾರ ಪದಾರ್ಥಗಳ ಪ್ಯಾಕಿಂಗ್ ಮೇಲೆ ನಮೂದಿಸಿರುವ ಮಾಹಿತಿಯು ದಾರಿ ತಪ್ಪಿಸುವ ಸಾಧ್ಯತೆ ಇರುತ್ತದೆ. ಹಾಗಾಗಿ, ಜಾಗರೂಕತೆಯಿಂದ ಆ ಮಾಹಿತಿ ಓದಿದ ಬಳಿಕವಷ್ಟೇ ಗ್ರಾಹಕರು ಉತ್ಪನ್ನಗಳನ್ನು ಖರೀದಿಸಬೇಕಿದೆ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಹೇಳಿದೆ.

ಸಕ್ಕರೆ ರಹಿತ ಆಹಾರ ಪದಾರ್ಥಗಳು ಅತಿಹೆಚ್ಚು ಕೊಬ್ಬಿನ ಅಂಶದಿಂದ ಕೂಡಿರುವ ಸಾಧ್ಯತೆಯಿದೆ. ಹಣ್ಣಿನ ರಸದ ಬಾಟಲಿಗಳಲ್ಲಿ ಶೇ 10ರಷ್ಟು ಮಾತ್ರವೇ ಹಣ್ಣಿನ ತಿರುಳಿನ ಅಂಶವಿರುತ್ತದೆ. ಆದರೆ, ಸಂಪೂರ್ಣವಾಗಿ ಹಣ್ಣಿನಿಂದಲೇ ಜ್ಯೂಸ್ ತಯಾರಿಸಲಾಗಿದೆ ಎಂದು ಹೇಳಲಾಗುತ್ತದೆ. ಆದರೆ, ಇದಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಸಕ್ಕರೆ ಬೆರೆಸಲಾಗಿರುತ್ತದೆ ಎಂದು ಹೇಳಿದೆ.

ಆಹಾರ ಪದಾರ್ಥಗಳತ್ತ ಗ್ರಾಹಕರ ಗಮನ ಸೆಳೆಯುವುದು ಹಾಗೂ ಉತ್ಪನ್ನಗಳು ಸುರಕ್ಷಿತವಾಗಿವೆ ಎಂದು ಬಿಂಬಿಸುವುದಷ್ಟೇ ಕಂಪನಿಗಳ ಉದ್ದೇಶವಾಗಿರುತ್ತದೆ. ಹಾಗಾಗಿ, ಪ್ಯಾಕಿಂಗ್ ಮಾಡಿದ ಆಹಾರ ಪದಾರ್ಥಗಳ ಖರೀದಿಗೂ ಮೊದಲ ಗ್ರಾಹಕರು ಅವುಗಳ ಗುಣಮಟ್ಟದ ಬಗ್ಗೆ ಎಚ್ಚರಿಕೆ ವಹಿಸಬೇಕಿದೆ ಎಂದು ಸಲಹೆ ನೀಡಿದೆ.

ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ರೂಪಿಸಿರುವ ನಿಯಮಾವಳಿಗಳ ಅನ್ವಯ ಐಸಿಎಂಆರ್ ಹಾಗೂ ಹೈದರಾಬಾದ್‌ನ ರಾಷ್ಟ್ರೀಯ ಪೌಷ್ಟಿಕಾಂಶ ಸಂಸ್ಥೆಯು ಜಂಟಿಯಾಗಿ ಈ ಕುರಿತು ಸಿದ್ಧಪಡಿಸಿರುವ ಮಾರ್ಗಸೂಚಿ-ಗಳನ್ನು ಬಿಡುಗಡೆಗೊಳಿಸಲಾಗಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹605
12 ಕ್ಕೆ	₹80
ಮೈಸೂರು	
100ಕ್ಕೆ	₹610

ಪ್ರಸಕ್ತ ವರ್ಷ12,000 ಹೊಸ ಉದ್ಯೋಗಿಗಳ ನೇಮಕ

ಎಂಜಿನಿಯರಿಂಗ್ ಪದವೀಧರರ ನೇಮಕಕ್ಕೆ ಆದ್ಯತೆ: ಎಸ್‌ಬಿಐ

ಮುಂಬೈ (ಪಿಟಿಐ): ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವು, 2024–25ನೇ ಆರ್ಥಿಕ ವರ್ಷದಲ್ಲಿ ಹೊಸದಾಗಿ ಸುಮಾರು 12 ಸಾವಿರ ಉದ್ಯೋಗಿಗಳ ನೇಮಕಕ್ಕೆ ಮುಂದಾಗಿದ್ದು, ಈ ಪೈಕಿ ಶೇ85ರಷ್ಟು ಎಂಜಿನಿಯರಿಂಗ್ ಪದವೀಧರರಿಗೆ ಆದ್ಯತೆ ನೀಡಲು ನಿರ್ಧರಿಸಿದೆ.

3 ಸಾವಿರಕ್ಕೂ ಹೆಚ್ಚು ಪ್ರೊಬೇಷನರಿ ಅಧಿಕಾರಿಗಳು ಮತ್ತು 8 ಸಾವಿರಕ್ಕೂ ಹೆಚ್ಚು ಸಹಾಯಕ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಬ್ಯಾಂಕ್‌ನ ಅಧ್ಯಕ್ಷ ದಿನೇಶ ಕುಮಾರ್ ಖಾರಾ ತಿಳಿಸಿದ್ದಾರೆ.

‘ಹೊಸ ಉದ್ಯೋಗಿಗಳಿಗೆ ಬ್ಯಾಂಕಿಂಗ್ ವ್ಯವಸ್ಥೆ ಕುರಿತು ಅಗತ್ಯ ತರಬೇತಿ ನೀಡಿದ ಬಳಿಕ ಬ್ಯಾಂಕ್‌ನ ವಿವಿಧ ಸ್ತರಗಳಲ್ಲಿ ಕೆಲಸಕ್ಕೆ ನಿಯೋಜಿಸಲಾಗುತ್ತದೆ. ನೇಮಕವಾಗುವ ಎಂಜಿನಿಯರ್‌ಗಳಿಗೆ ನೀಡುವ ಹುದ್ದೆಗಳ ಶ್ರೇಣಿಯಲ್ಲಿ ಯಾವುದೇ ಪಕ್ಷಪಾತ ಅನುಸರಿಸುವುದಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

‘ಬ್ಯಾಂಕಿಂಗ್ ವ್ಯವಸ್ಥೆ ಕುರಿತು ಎಂಜಿನಿಯರ್‌ಗಳಿಗೆ ಪರಿಚಯಿಸುವ ಜೊತೆಗೆ ಅವರ ಸಾಮರ್ಥ್ಯದ ಆಧಾರದ ಮೇಲೆ ಬ್ಯಾಂಕ್‌ನ ವ್ಯವಹಾರ ಹಾಗೂ ಮಾಹಿತಿ ತಂತ್ರಜ್ಞಾನದ ಕೆಲಸಕ್ಕೆ ನಿಯೋಜಿಸಲಾಗುತ್ತದೆ. ಇದು ಬ್ಯಾಂಕ್‌ನಲ್ಲಿ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ಬಲವರ್ಧನೆಗೂ ಸಹಕಾರಿಯಾಗಲಿದೆ’ ಎಂದು ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ದೇಶದಲ್ಲಿ ಪ್ರತಿವರ್ಷ ಎಂಜಿನಿಯರಿಂಗ್ ಕಾಲೇಜುಗಳಿಂದ ಹೊರಬರುತ್ತಿರುವ ಪದವೀಧರರ ಸಂಖ್ಯೆ ಹೆಚ್ಚುತ್ತಿದೆ. ಆದರೆ, ಅದಕ್ಕೆ ತಕ್ಕಂತೆ ಐ.ಟಿ ವಲಯದಲ್ಲಿ ಹೊಸದಾಗಿ ನೇಮಕಾತಿ ನಡೆಯುತ್ತಿಲ್ಲ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯು ಈ ಪದವೀಧರರ ಪಾಲಿಗೆ ವರದಾನವಾಗಲಿದೆ ಎಂದು ತಜ್ಞರು ಹೇಳಿದ್ದಾರೆ.

‘ತಂತ್ರಜ್ಞಾನ ಬಹುಮುಖ್ಯವಾಗಿದ್ದು, ಯಾರೊಬ್ಬರು ಇದನ್ನು ನಿರ್ಲಕ್ಷಿಸುವಂತಿಲ್ಲ. ಭಾರತೀಯ ರಿಸರ್ವ್ ಬ್ಯಾಂಕ್ ಕೂಡ ನಿಯಮಿತವಾಗಿ ತಂತ್ರಜ್ಞಾನದ ಮಹತ್ವ ಕುರಿತು ನಿಯಮಿತವಾಗಿ ಬ್ಯಾಂಕ್‌ಗಳಿಗೆ ಮಾರ್ಗದರ್ಶನ ನೀಡುತ್ತದೆ’ ಎಂದು ಖಾರಾ ಹೇಳಿದ್ದಾರೆ.

ಗಂಗಾರತಿ

ವಾರಾಣಸಿಯ ಗಂಗಾ ನದಿ ತಟದಲ್ಲಿ ಭಾನುವಾರ ನಡೆದ ಗಂಗಾರತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಭಕ್ತರು –ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ನಿಜ್ಜರ್ ಹತ್ಯೆ: ಮತ್ತೊಬ್ಬ ಭಾರತೀಯನ ಬಂಧನ

ವಾಷಿಂಗ್ಟನ್/ಒಟ್ಟಾವ (ಪಿಟಿಐ): ಖಾಲಿಸ್ತಾನ್ ಪ್ರತ್ಯೇಕವಾದಿ ಹೋರಾಟಗಾರ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣ ಸಂಬಂಧ ಕೆನಡಾದ ಪೊಲೀಸರು ಮತ್ತೊಬ್ಬ ಭಾರತೀಯ ಪ್ರಜೆಯನ್ನು ಬಂಧಿಸಿದ್ದಾರೆ. ಈ ಮೂಲಕ ಬಂಧಿತರಾದ ಭಾರತೀಯ ಪ್ರಜೆಗಳ ಸಂಖ್ಯೆ 4ಕ್ಕೆ ಏರಿದೆ.

ಸರ್ರೆ ಬ್ರಾಂಪ್ಟನ್‌ನ ನಿವಾಸಿ ಅಮನ್‌ದೀಪ್ ಸಿಂಗ್ ಬಂಧಿತ. ಕೊಲೆ ನಡೆಸಲು ಸಂಚು ರೂಪಿಸಿದ ಆರೋಪ ಈತನ ಮೇಲಿದೆ. 2023ರ ಜೂನ್ 18ರಂದು ಸರ್ರೆಯ ಗುರುನಾನಕ್ ಸಿಖ್ ಗುರುದ್ವಾರ ಸಮೀಪ, 45 ವರ್ಷ ವಯಸ್ಸಿನ ನಿಜ್ಜರ್ ಹತ್ಯೆಯಾಗಿತ್ತು.

ನಿಜ್ಜರ್ ಕೊಲೆ ಪ್ರಕರಣದ ಸಂಬಂಧ ಅಮನ್‌ದೀಪ್ ಸಿಂಗ್ ಎಂಬುವವರನ್ನು ಮೇ 11ರಂದು ಬಂಧಿಸಲಾಗಿದೆ. ಸದ್ಯ ಪೊಲೀಸರ ವಶದಲ್ಲಿ ಆರೋಪಿ ಇದ್ದಾರೆ ಎಂದು ತನಿಖಾ ತಂಡ ಹೇಳಿಕೆ ಮೂಲಕ ತಿಳಿಸಿದೆ.

ಸುಮಾತ್ರ: ಭಾರಿ ಮಳೆ, 37 ಜನ ಸಾವು

ಪಡಂಗ್ (ಇಂಡೊನೇಷ್ಯಾ) (ಎಪಿ): ಧಾರಾಕಾರ ಮಳೆ ಮತ್ತು ಪ್ರವಾಹದ ಪರಿಸ್ಥಿತಿಯಿಂದಾಗಿ ಇಂಡೊನೇಷ್ಯಾದ ಸುಮಾತ್ರ ದ್ವೀಪದಲ್ಲಿ ಕನಿಷ್ಠ 37 ಮಂದಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಮಳೆ ನೀರಿನ ಜತೆಗೆ ಮರಾಪಿ ಪರ್ವತದ ಮೇಲಿಂದ ತಂಪಿತ ಲಾವಾ ಹರಿವೂ ಸೇರಿಕೊಂಡಿದ್ದರಿಂದ ದೊಡ್ಡ ಪ್ರಮಾಣದಲ್ಲಿ ಭೂಕುಸಿತ ಸಂಭವಿಸಿದೆ. ಮಳೆ ಪ್ರವಾಹದಿಂದ ಪಶ್ಚಿಮ ಸುಮಾತ್ರ ಪ್ರಾಂತದ ಗ್ರಾಮಗಳು ಜಲಾವೃತ-ಗೊಂಡಿದ್ದು, 100ಕ್ಕೂ ಹೆಚ್ಚು ಮನೆ, ಕಟ್ಟಡಗಳು ಮುಳುಗಿವೆ ಎಂದು ಸ್ಥಳೀಯ ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆ ತಿಳಿಸಿದೆ.

ಕಲ್ಲು ತೂರಾಟ: ಪೊಲೀಸ್ ಅಧಿಕಾರಿ ಹತ್ಯೆ

ಪಿಒಕೆಯಲ್ಲಿ ಭಾರಿ ಘರ್ಷಣೆ

ಮುಖ್ಯಾಂಶಗಳು
- ಗೋಧಿ ಹಿಟ್ಟು, ವಿದ್ಯುತ್ ದರ ಏರಿಕೆ ಖಂಡಿಸಿ ಪ್ರತಿಭಟನೆ
- ಪ್ರತಿಭಟನಕಾರರು ಮತ್ತು ಪೊಲೀಸರ ಮಧ್ಯೆ ಸಂಘರ್ಷ
- 78 ಪೊಲೀಸರು, ನೂರಕ್ಕೂ ಹೆಚ್ಚು ಮಂದಿಗೆ ಗಾಯ

ಇಸ್ಲಾಮಾಬಾದ್ (ಪಿಟಿಐ): ಗೋಧಿ ಹಿಟ್ಟು ಮತ್ತು ವಿದ್ಯುತ್ ದರ ಏರಿಕೆ ಖಂಡಿಸಿ ಪಾಕಿಸ್ತಾನ-ಆಕ್ರಮಿತ ಕಾಶ್ಮೀರದಲ್ಲಿ (ಪಿಒಕೆ) ಶನಿವಾರ ನಡೆದ ಪ್ರತಿಭಟನೆ ವೇಳೆ ಪ್ರತಿಭಟನಕಾರರು ಮತ್ತು ಪೊಲೀಸರ ಮಧ್ಯೆ ಸಂಘರ್ಷ ಏರ್ಪಟ್ಟಿದೆ.

ಈ ಹಿಂಸಾಚಾರದಲ್ಲಿ ಒಬ್ಬ ಪೊಲೀಸ್ ಅಧಿಕಾರಿಯ ಹತ್ಯೆಯಾಗಿದೆ. ಅಲ್ಲದೆ, 78 ಪೊಲೀಸರು ಸೇರಿದಂತೆ ನೂರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ.

ವಿವಾದಿತ ಪಾಕಿಸ್ತಾನ-ಆಕ್ರಮಿತ ಕಾಶ್ಮೀರ ಪ್ರಾಂತ್ಯದಲ್ಲಿ ಶನಿವಾರ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿಸಿ, ರಸ್ತೆ ತಡೆ ಮಾಡಿ ಪ್ರತಿಭಟನೆ ಕೈಗೊಳ್ಳಲಾಗಿತ್ತು. ಈ ವೇಳೆ ಪೊಲೀಸರು ಮತ್ತು ಹೋರಾಟಗಾರರ ಮಧ್ಯೆ ಗಲಾಟೆ ಆರಂಭವಾಯಿತು ಎಂದು ‘ಡಾನ್’ ಪತ್ರಿಕೆ ವರದಿ ಮಾಡಿದೆ.

ಈ ಕುರಿತು ಪ್ರತಿಕ್ರಿಯಿಸಿದ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಕಾಮ್ರಾನ್ ಅಲಿ, ‘ಜಮ್ಮು-ಕಾಶ್ಮೀರ ಜಾಯಿಂಟ್ ಆವಾಮಿ ಆ್ಯಕ್ಷನ್ ಕಮಿಟಿ (ಜೆಎಎಸಿ) ಅಡಿ ಕೈಗೊಳ್ಳಲಾಗಿದ್ದ ಪ್ರತಿಭಟನಾ ಮೆರವಣಿಗೆ ಕೊಟ್ಲಿ ಮತ್ತು ಪೂಂಛ್ ಜಿಲ್ಲೆಗಳ ಮೂಲಕ ಮುಜಫ್ಫರಾಬಾದ್ ಪ್ರವೇಶಿಸದಂತೆ ತಡೆಯಲು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಆದರೆ, ಇಸ್ಲಾಂಗಢದಲ್ಲಿ ನಡೆದ ಗಲಾಟೆಯಲ್ಲಿ ಸಬ್ ಇನ್‌ಸ್ಪೆಕ್ಟರ್ ಅದ್ನಾನ್ ಖುರೇಷಿ ಮೃತಪಟ್ಟಿದ್ದಾರೆ’ ಎಂದರು.

ಜೆಎಎಸಿ ಪ್ರತಿಭಟನೆಗೆ ಮುಂದಾಗಿದ್ದರಿಂದಾಗಿ ಬುಧವಾರ ಮತ್ತು ಗುರುವಾರ ಜೆಎಎಸಿಯ ಸುಮಾರು 70 ಕಾರ್ಯಕರ್ತರನ್ನು ಬಂಧಿಸಲಾಗಿತ್ತು. ಇದರಿಂದಾಗಿ ಗುರುವಾರ ಗಂಭೀರ ಸ್ವರೂಪದ ಗಲಾಟೆಯಾಗಿತ್ತು. ಅಲ್ಲದೆ, ಮುಜಫ್ಫರಾಬಾದ್‌ನತ್ತ ಮೆರವಣಿಗೆ ಜಾಥಾ ಕೈಗೊಳ್ಳುವ ಮುನ್ನ ದಿನವಾದ ಶುಕ್ರವಾರ ಪ್ರತಿಭಟನೆ ನಡೆಸುವುದಾಗಿ ಜೆಎಎಸಿ ಘೋಷಿಸಿತ್ತು. ಇದರ ಪರಿಣಾಮ ಮುಜಫ್ಫರಬಾದ್ ಸೇರಿದಂತೆ ಇನ್ನಿತರ ಸ್ಥಳಗಳಲ್ಲಿ ಪ್ರತಿಭಟನಕಾರರು ಮತ್ತು ಪೊಲೀಸರ ಮಧ್ಯೆ ಗಲಾಟೆಗಳು ನಡೆದಿದ್ದವು.

ಶನಿವಾರ ಮತ್ತಷ್ಟು ಬಿಗಿ ಭದ್ರತೆ ಕೈಗೊಂಡಿದ್ದ ಪೊಲೀಸರು, ಪ್ರತಿಭಟನಕಾರರು ಮುಜಫ್ಫರಬಾದ್‌ನತ್ತ ತೆರಳದಂತೆ ಕ್ರಮ ವಹಿಸಿದ್ದರು. ಜೊತೆಗೆ ಪ್ರತಿಭಟನಕಾರರನ್ನು ಚದುರಿಸಲು ಅಶ್ರುವಾಯು ಶೆಲ್ ಮತ್ತು ಗಾಳಿಯಲ್ಲಿ ಗುಂಡುಗಳನ್ನು ಹಾರಿಸಿದರು. ಆಗ ಪ್ರತಿಭಟನಕಾರರು ಪೊಲೀಸರ ಮೇಲೆ ಕಲ್ಲು ತೂರಾಟ ಮತ್ತು ಬಾಟಲಿಗಳಿಂದ ದಾಳಿ ನಡೆಸಿದರು ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿಯಿದೆ. 13,000-17,000. 8951315839, 7022770052

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ15,000-20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555/ 9663563555

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳೆಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿವಮೊಗ್ಗ 8095555517

Teachers/ Professors

WANTED HEADMASTER and Teachers for Primary and High school all subjects @M.E.S Convent , Anjaneya badavane 9th cross, Davanagere. Contact 9880436414

Wanted

ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ. 18 ವರ್ಷ ಮೇಲ್ಪಟ್ಟವರಿಗೆ ಉಚಿತ, ಊಟ ವಸತಿಯೊಂದಿಗೆ 14 ರಿಂದ 17 ಸಾವಿರ ಸಂಬಳ. ದೂರವಾಣಿ: 8139962883

ಸೌಂದರ್ಯ-ಆರೋಗ್ಯ

Hair Care

ವಿಶೇಷವಾದ ಆಯಸ್ಕಾಂತದ ಕಲ್ಲನ್ನು ನೀರಿನಲ್ಲಿ ಹಾಕಿ ಕುಡಿಯುವುದರಿಂದ ಮಧುಮೇಹ, ರಕ್ತದೊತ್ತಡ , ಕೊಲೆಸ್ಟ್ರಾಲ್, ಹೃದಯ ರೋಗ, ಕೀಲುನೋವು, ಕಿಡ್ನಿ ಸ್ಟೋನ್, ಬೊಜ್ಜು ಕಡಿಮೆ ಮಾಡಿಕೊಳ್ಳಬಹುದು. ಕೆಮ್ಮು, ದಮ್ಮು, ಅಸ್ತಮ ಮುಂತಾದ ಕಾಯಿಲೆಗಳಿಗೆ ಉಪಯೋಗವಿದೆ. ಉಚಿತವಾಗಿ ಕೊಡಲಾಗುವುದು 9019626612.

ಪ್ರವಾಸ

Travel

★ಶ್ರೀಶ್ರೇಯಸ್ ಟೂರ್ಸ್★ 19.05.2024 12/15/20ದಿನಗಳು ದಿನಗಳು ಈಶಾನ್ಯರಾಜ್ಯಗಳ (ಸೆವೆನ್-ಸಿಸ್ಟರ್ಸ್)ನ 6ರಾಜ್ಯಗಳು ಅಸ್ಸಾಂ,ಅರುಣಾಚಲ ಮೇಘಾಲಯ,ನಾಗಲ್ಯಾಂಡ್, ತ್ರಿಪುರ,ಮಿಝೋರಾಂ, 20.05.2024 10ದಿನಗಳು ಅಖಂಡ ನೇಪಾಳ ರಾಷ್ಟ್ರ (ಮುಕ್ತಿನಾಥ)ಸಹಿತ 4ವಿಮಾನಗಳಲ್ಲಿ (ಕೆಲವೇ ಸೀಟುಗಳು ಲಭ್ಯತೆ), 26.06.2024,15.07.2024 6/12ದಿನಗಳು ಅಮರನಾಥಯಾತ್ರಾ ಸಹಿತ ಲೇ-ಲಡಾಕ್,20.07.2024 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯಪ್ರವಾಸ, 09.09.2024,21.09.2024 12ದಿನಗಳು ಚಾರ್-ದಾಮ್ ಯಾತ್ರಾ ವಿಶೇಷ, 24.05.2024,20.06.2024, 6ದಿನಗಳು ಭೂತಾನ್ ರಾಷ್ಟ್ರ ಪ್ರವಾಸ.9743351212, 9206979202, 8792319181

14.05.2026 ರಿಂದ 9 ದಿನಗಳು, ನೇಪಾಳ, ಕಾಶಿ, ಅಯೋಧ್ಯ, ಸೀತಾಮಡಿ, ಜನಕ್ ಪುರ, ಗಯಾ, ಮನೋಕಾಮ, 23.05.2026 ರಿಂದ 4 ದಿನಗಳು, ಧರ್ಮಸ್ಥಳ, ಹೊರನಾಡು, ಸಿಂಗದೂರು, ಮುರಡೇಶ್ವರ, ಕೊಲ್ಲೂರು, ಮಲ್ಪೆಬೀಚ್, 24.05.2026 ರಿಂದ 3 ದಿನಗಳು, ಊಟಿ, ಇಶಾ ಫೌಂಡೇಶನ್, ಕುಡುಮುಡಿ, ಪಳನಿ, 14.06.2024 ರಿಂದ 13 ದಿನಗಳು, ಚಾರಧಾಮ ಪ್ರವಾಸ, ಕೇದಾರನಾಥ, ಗಂಗೋತ್ರಿ, ಬದಿರನಾಥ, ಯಮೋನೊತ್ರಿ, ದೆಹಲಿ, ಹರಿದ್ವಾರ, 16.06.2024 ರಿಂದ 3 ದಿನಗಳು, ಶಿರಡಿ, ಪಂಡಾರಪುರ, ಕೊಡಲಸಂಗಮ, ಬಿಜಾಪುರ, ಶನಿಸಿಂಗನಪುರ, ಶ್ರೀ ಗುರುರಾಜ ಟ್ರಾವೆಲ್ಸ್. ಕೋಲಾರ: 9900124333, 8123099913, 9611082432,

19.06.2024 09.07.2024 18.09.2024 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 07.06.2024 06.07.2024 ನೇಪಾಳ 9 ದಿನಗಳು. 07.06.2024 ಅಸ್ಸಾಂ,ಮೇಘಾಲಯ 9 ದಿನಗಳು. 13.10.2024 24.11.202407.12.2024 ರಾಜಸ್ತಾನ 10 ದಿನಗಳು. 17.10.2024 26.11.202410.12.2024 ಗುಜರಾತ ಓಂಕಾರೇಶ್ವರ ಉಜ್ಜಯಿನಿ 8/12 ದಿನಗಳು. 5.10.2024 04.11.2024 07.12. 2024 ಕಾಶಿ,ಗಯಾ,ಅಯೋಧ್ಯ 7 ದಿನಗಳು. 17.10.2024 26.11.202410.12.2024 ಮಧ್ಯಪ್ರದೇಶ 9 ದಿನಗಳು. ರೈಲಿನಲ್ಲಿ ಪ್ರಯಾಣಿಸುವವರು 120 ದಿನಗಳ ಮುಂಚಿತವಾಗಿ ತಮ್ಮ ಸೀಟುಗಳನ್ನು ಕಾಯ್ದಿರಿಸಬೇಕು. ಇದಲ್ಲದೇ ಫಾಮಿಲಿ ಪ್ರವಾಸಿಗಳಿಗೆ ವಿಚಾರಿಸಿರಿ. ಜೈನ್ ಟ್ರಾವಲ್ಸ್ ಬೆಂಗಳೂರು03. 9448402248 7022547922

13 ದಿನಗಳ ಚಾರ್‌ಧಾಮ್ ಯಾತ್ರೆ. 10 ದಿನಗಳ ಗುಜರಾತ್. 7 ದಿನಗಳ ಕಾಶಿ,ಅಯೋಧ್ಯ 12ದಿನಗಳ ನೇಪಾಳ ಮುಕ್ತಿನಾಥ್. ಸಂಪರ್ಕಿಸಿ: ನಂದಿ ಹಾಲಿಡೇಸ್ DVG ರಸ್ತೆ, ಬೆಂಗಳೂರು.4. 9980270467 080-41467722

ಸುವರ್ಣ ಯಾತ್ರ ನೇಪಾಳ ಮುಕ್ತಿನಾಥ, ಪಶುಪತಿನಾಥ ಅಯೋಧ್ಯೆ, ಪೋಕ್ರ, ಕಟ್ಮಂಡು ಪ್ರವಾಸ 9 ದಿನಗಳು 29/5/24 ಹಾಗೂ 18/06/24. 8660233673, 6360146483

ಸುಸಜ್ಜಿತ ವ್ಯವಸ್ಥೆಗಳೊಂದಿಗೆ 30.06.2024 ರಿಂದ 12 ದಿನಗಳ ಅಮರನಾಥ್ ಯಾತ್ರೆ. 11.06.2024 13.09.2024 25.09.2024 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆ. 09.09.2024 14.10.2024 ರಿಂದ 8/12 ದಿನಗಳ ಕಾಶಿ,ಗಯಾ,ಅಯೋಧ್ಯಾ 05.10.2024 17.10.2024 ರಿಂದ 8/12 ದಿನಗಳ ಸಿಮ್ಲಾ,ಮನಾಲಿ. 09.09.2024 02.10.2024 ರಿಂದ 11 ದಿನಗಳ ಅಯೋಧ್ಯ ಮುಕ್ತಿನಾಥ ನೇಪಾಳ ಕಾಶಿ 17.10.2024 26.11.2024 07.12.2024 ರಿಂದ 11 ದಿನಗಳ ಮಧ್ಯಪ್ರದೇಶ. 14.10.2024 07.11.2024 26.11.2024 ರಿಂದ 8/11 ದಿನಗಳ ಗುಜರಾತ್ ರಾಜಸ್ತಾನ. 21.07.2024 25.09.2024 ರಿಂದ 7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. ಪ್ರವಾಸಗಳು.ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

ವ್ಯಾಪಾರ

Business Offers

Dealers And Stockists

SUPER STOCKIEST/ DISTRIBUTORS Wanted For Established Homecare Products, Herbal Products For Entire Karnataka. Contact: 9845781035

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಯಶ್ ದಯಾಳ್‌ಗೆ 3 ವಿಕೆಟ್ • ರಜತ್ ಪಾಟೀದಾರ್ ಅರ್ಧಶತಕ • ಡೆಲ್ಲಿ ಕ್ಯಾಪಿಟಲ್ಸ್‌ಗೆ ನಿರಾಸೆ

ಆರ್‌ಸಿಬಿ ಪ್ಲೇ ಆಫ್ ಆಸೆ ಜೀವಂತ

• ಗಿರೀಶ ದೊಡ್ಡಮನಿ

ಬೆಂಗಳೂರು: ಎಡಗೈ ವೇಗಿ ಯಶ್ ದಯಾಳ್ ಅವರ 'ಕೈಚಳಕ'ದ ಬಲದಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪ್ಲೇ ಆಫ್ ಪ್ರವೇಶದ ಆಸೆ ಜೀವಂತವಾಗುಳಿಯಿತು.

188 ರನ್‌ಗಳ ಗೆಲುವಿನ ಗುರಿಯನ್ನು ಬೆನ್ನಟ್ಟಿದ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಬೆಂಗಳೂರು ಬಳಗವು 47 ರನ್‌ಗಳಿಂದ ಸೋಲಿಸಿತು. ಫಫ್ ಡುಪ್ಲೆಸಿ ಬಳಗಕ್ಕೆ ಇದು ಸತತ ಐದನೇ ಗೆಲುವು. ಇದರೊಂದಿಗೆ ಒಟ್ಟು 12 ಅಂಕ ಗಳಿಸಿದ ತಂಡವು ಐದನೇ ಸ್ಥಾನಕ್ಕೇರಿತು.

ಇನಿಂಗ್ಸ್‌ನ ಮೂರನೇ ಓವರ್ ಬೌಲಿಂಗ್ ಮಾಡಲು ಚೆಂಡು ಪಡೆದ ಯಶ್ ಮೊದಲ ಎಸೆತದಲ್ಲಿಯೇ ಅಭಿಷೇಕ್ ಪೊರೆಲ್ ವಿಕೆಟ್ ಗಳಿಸಿದರು. ಎರಡನೇ ಎಸೆತದಲ್ಲಿ ಡೆಲ್ಲಿಯ ಪ್ರಮುಖ ಬ್ಯಾಟರ್ ಜೇಕ್ ಫ್ರೇಸರ್ ಮೆಕ್‌ಗುರ್ಕ್ ಅವರನ್ನು ದುರದೃಷ್ಟ ಕಾಡಿತು. ಬ್ಯಾಟರ್ ಶಾಯ್ ಹೋಪ್ ಹೊಡೆದ ಚೆಂಡು ನೇರವಾಗಿ ಸಾಗಿತ್ತು. ಅದನ್ನು ಹಿಡಿಯಲು ಪ್ರಯತ್ನಿಸಿದ ಬೌಲರ್ ಯಶ್ ಅವರ ಕೈ ಬೆರಳುಗಳನ್ನು ಸವರಿದ ಚೆಂಡು ನಾನ್‌ಸ್ಟ್ರೈಕ್ ತುದಿಯ ಸ್ಟಂಪ್‌ಗಳಿಗೆ ಅಪ್ಪಳಿಸಿತು. ಕ್ರೀಸ್‌ನಿಂದ ಮುಂದೆ ಬಂದು ಬಿಟ್ಟಿದ್ದ ಜೇಕ್ ರನ್ ಔಟ್ ಆದರು. 22 ವರ್ಷದ ಜೇಕ್ ಔಟಾಗಿದ್ದು ಡೆಲ್ಲಿ ತಂಡಕ್ಕೆ ದೊಡ್ಡ ಆಘಾತವಾಯಿತು. ಜೇಕ್ ತಮ್ಮ ಆಟಕ್ಕೆ ಕುದುರಿದ್ದರೆ ಡೆಲ್ಲಿಗೆ ಜಯದ ಅವಕಾಶ ಹೆಚ್ಚಿತ್ತು.

ಮೊದಲ ಓವರ್‌ನಲ್ಲಿಯೇ ಇಂಪ್ಯಾಕ್ಟ್ ಪ್ಲೇಯರ್ ಡೇವಿಡ್ ವಾರ್ನರ್ ಔಟಾಗಿದ್ದರು. ಬೇರೆ ಬ್ಯಾಟರ್‌ಗಳಿಂದ ನಿರೀಕ್ಷಿತ ಸಾಮರ್ಥ್ಯ ಹೊರಹೊಮ್ಮಲಿಲ್ಲ. ರಿಷಭ್ ಪಂತ್ ಗೈರುಹಾಜರಿ ಎದ್ದುಕಂಡಿತು.

ಈ ಹಂತದಲ್ಲಿ ಎದುರಾದ ಹಂಗಾಮಿ ನಾಯಕ ಅಕ್ಷರ್ ಪಟೇಲ್ (57; 39ಎ) ಹೋರಾಟ ಮಾಡಿದರು. ಆದರೆ ಅವರ ಆಟಕ್ಕೂ ಯಶ್ (3.1-0-20-3) ಅಡ್ಡಿಯಾದರು. ಉಳಿದ ಬ್ಯಾಟರ್‌ಗಳು ಹೆಚ್ಚು ಹೊತ್ತು ನಿಲ್ಲಲು ಆರ್‌ಸಿಬಿ ಬೌಲರ್‌ಗಳು ಬಿಡಲಿಲ್ಲ. ಇದರಿಂದಾಗಿ ಡೆಲ್ಲಿ ತಂಡವು 19.1 ಓವರ್‌ಗಳಲ್ಲಿ 140 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ನಾಲ್ಕು ಕ್ಯಾಚ್ ಕೈಚೆಲ್ಲಿದ ಡೆಲ್ಲಿ: ಹಾಗೆ ನೋಡಿದರೆ ಈ ಪಂದ್ಯದಲ್ಲಿ ಡೆಲ್ಲಿ ತಂಡದ ಸೋಲಿನಲ್ಲಿ ಫೀಲ್ಡಿಂಗ್ ಲೋಪಗಳೂ ಪ್ರಮುಖವಾಗಿದ್ದವು. ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡಿದ್ದ ಡೆಲ್ಲಿ ತಂಡವು 36 ರನ್‌ಗಳಾಗುಷ್ಟರಲ್ಲಿ ಫಫ್ ಡುಪ್ಲೆಸಿ ಹಾಗೂ ವಿರಾಟ್ ಕೊಹ್ಲಿಯವರ ವಿಕೆಟ್ ಗಳಿಸುವಲ್ಲಿ ಯಶಸ್ವಿಯಾಗಿತ್ತು. ಈ ಹಂತದಲ್ಲಿ ಆತಿಥೇಯ ಬಳಗವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಬಹುದಿತ್ತು. ಆದರೆ, ಡೆಲ್ಲಿ ಫೀಲ್ಡರ್‌ಗಳು ಕೈಬಿಟ್ಟ ನಾಲ್ಕು ಕ್ಯಾಚ್‌ಗಳಿಂದ ಬೆಂಗಳೂರು ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 187 ರನ್ ಗಳಿಸಿತು.

ಇದರಲ್ಲಿ ತಲಾ ಎರಡು ಜೀವದಾನ ಗಳಿಸಿದ ರಜತ್ ಪಾಟೀದಾರ್ (52; 32ಎ, 4X3, 6X3) ಮತ್ತು ವಿಲ್ ಜ್ಯಾಕ್ಸ್ (41; 29ಎ, 4X3, 6X2) ಮೂರನೇ ವಿಕೆಟ್ ಜೊತೆಯಾಟದಲ್ಲಿ 88 ರನ್ ಸೇರಿಸಿದರು.

ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಹಾಕಿದ ಒಂಬತ್ತನೇ ಓವರ್‌ನಲ್ಲಿ ಜ್ಯಾಕ್ಸ್ ಅವರ ಕ್ಯಾಚ್ ಅನ್ನು ಅಕ್ಷರ್ ಪಟೇಲ್ ಹಾಗೂ ಅದೇ ಓವರ್‌ನ ಐದನೇ ಎಸೆತದಲ್ಲಿ ರಜತ್ ಅವರ ಸುಲಭವಾದ ಕ್ಯಾಚ್ ಅನ್ನು ಲಾಂಗ್ ಆನ್ ಫೀಲ್ಡರ್ ಶಾಯ್ ಹೋಪ್ ಕೈಚೆಲ್ಲಿದರು. ಆಗ ತಂಡದ ಮೊತ್ತವು ಮೂರಂಕಿ ಮುಟ್ಟಿರಲಿಲ್ಲ.

ಖಲೀಲ್ ಅಹಮದ್ ಹಾಕಿದ 10ನೇ ಓವರ್‌ನಲ್ಲಿಯೂ ಜೇಕ್ ಫ್ರೆಸರ್ ಮೆಕ್‌ಗುರ್ಕ್ ಬಿಟ್ಟ ಕ್ಯಾಚ್‌ನಿಂದಾಗಿ ಜ್ಯಾಕ್ಸ್ ಆಟ ಮುಂದುವರಿಯಿತು. ನಂತರದ ಓವರ್‌ನಲ್ಲಿ ರಸಿಕ್ ಸಲಾಂ ಎಸೆತವನ್ನು ಆಡಿದ ರಜತ್ ಅವರ ಕ್ಯಾಚ್ ಪಡೆಯುವ ಅಕ್ಷರ್ ಪಟೇಲ್ ಪ್ರಯತ್ನ ಕೈಗೂಡಲಿಲ್ಲ.

ಇದರಿಂದಾಗಿ ರಜತ್, ಈ ಐಪಿಎಲ್‌ನಲ್ಲಿ 5ನೇ ಅರ್ಧಶತಕ ಪೂರೈಸಿದರು.. 29 ಎಸೆತಗಳಲ್ಲಿ ಅವರು 50ರ ಗಡಿ ಮುಟ್ಟಿದರು. ಇದಾಗಿ ಕೆಲವು ನಿಮಿಷಗಳ ನಂತರ ಸಲಾಂ ಬೌಲಿಂಗ್‌ನಲ್ಲಿ ಅಕ್ಷರ್ ತಮ್ಮ ಎಡಕ್ಕೆ ಡೈವ್ ಮಾಡಿದ ಪಡೆದ ಆಕರ್ಷಕ ಕ್ಯಾಚ್‌ಗೆ ರಜತ್ ಆಟಕ್ಕೆ ತೆರೆಬಿತ್ತು.

ದಿನೇಶ್ ಕಾರ್ತಿಕ್ ಮತ್ತು ಇಂಪ್ಯಾಕ್ಟ್ ಪ್ಲೇಯರ್ ಸ್ವಪ್ನಿಲ್ ಸಿಂಗ್ ಅವರು ಸೊನ್ನೆ ಸುತ್ತಿದರು. ಕ್ಯಾಮರಾನ್ ಗ್ರಿನ್ (ಅಜೇಯ 32) ಉತ್ತಮ ಕಾಣಿಕೆ ನೀಡಿದರು.

ಡೆಲ್ಲಿ ಕ್ಯಾಪಿಟಲ್ಸ್‌ನ ಜೇಕ್ ಫ್ರೆಸರ್ ಮೆಕ್‌ಗುರ್ಕ್ ಔಟಾದಾಗ ಆರ್‌ಸಿಬಿಯ ವಿರಾಟ್ ಕೊಹ್ಲಿ ಮತ್ತು ಯಶ್ ದಯಾಳ್ ಸಂಭ್ರಮಿಸಿದರು —ಪ್ರಜಾವಾಣಿ ಚಿತ್ರ /ಕೃಷ್ಣಕುಮಾರ್ ಪಿ.ಎಸ್

ಕೊಹ್ಲಿ–ಇಶಾಂತ್ ಕೀಟಲೆ

ಬಾಲ್ಯದ ಸ್ನೇಹಿತರಾದ ವಿರಾಟ್ ಕೊಹ್ಲಿ ಮತ್ತು ಇಶಾಂತ್ ಶರ್ಮಾ ಅವರ ಜಿದ್ದಾಜಿದ್ದಿಗೆ ಬೆಂಗಳೂರು ಕ್ರಿಕೆಟ್‌ಪ್ರಿಯರು ಸಾಕ್ಷಿಯಾದರು.

ತಂಡಕ್ಕೆ ಉತ್ತಮ ಆರಂಭ ನೀಡಿದ ಕೊಹ್ಲಿ 3 ಸಿಕ್ಸರ್‌ಗಳಿದ್ದ 27 ರನ್ ಗಳಿಸಿದರು. ಅದರಲ್ಲಿ ಎರಡು ಇಶಾಂತ್ ಅವರ ಬೌಲಿಂಗ್‌ನಲ್ಲಿಯೇ ಹೊಡೆದಿದ್ದರು. ಆದರೆ ನಾಲ್ಕನೇ ಓವರ್‌ನಲ್ಲಿ ಇಶಾಂತ್ ಅವರ ಎಸೆತವನ್ನು ಆಡುವ ಭರದಲ್ಲಿ ಕೊಹ್ಲಿ ವಿಕೆಟ್‌ಕೀಪರ್ ಪೊರೆಲ್‌ಗೆ ಕ್ಯಾಚಿತ್ತರು. ಇಶಾಂತ್ ಸಂಭ್ರಮಿಸಿದರು.

ಡಗ್‌ಔಟ್‌ಗೆ ಮರಳುತ್ತಿದ್ದ ವಿರಾಟ್ ಅವರನ್ನು ತಳ್ಳುತ್ತ ಕೀಟಲೆ ಮಾಡಿದರು. ವಿರಾಟ್ ಸಹ ನಸುನಗುತ್ತಲೇ ಸಾಗಿದರು. ಪಂದ್ಯದ ಕೊನೆಯಲ್ಲಿ 'ಇಶಾಂತ್ ಬ್ಯಾಟಿಂಗ್ ಬಂದಾಗ ವಿರಾಟ್ 'ಮುಯ್ಯಿ' ತೀರಿಸಿಕೊಂಡರು. ತಮ್ಮ ಹಳೆಯ ಸ್ನೇಹಿತನನ್ನು ಕಾಡಿದರು. ಇಬ್ಬರ ತುಂಟಾಟ ಪ್ರೇಕ್ಷಕರಲ್ಲಿಯೂ ನಗೆಯುಕ್ಕಿಸಿತು.

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು: 9 ವಿಕೆಟ್‌ಗೆ 187 (20 ಓವರ್‌ಗಳಲ್ಲಿ)
ಕೊಹ್ಲಿ ಸಿ ಅಭಿಷೇಕ್ ಪೂರೆಲ್ ಬಿ ಶರ್ಮಾ 27(13ಎ, 4X1, 6X3)
ಡುಪ್ಲೆಸಿ ಸಿ ಫ್ರೇಸರ್ ಮೆಕ್‌ಗುರ್ಕ್ ಬಿ ಮುಕೇಶ್ 6 (7ಎ, 4X1)
ಜ್ಯಾಕ್ಸ್ ಸಿ ಪಟೇಲ್ ಬಿ ಕುಲದೀಪ್ 41 (29ಎ, 4X3, 6X2)
ಪಾಟೀದಾರ್ ಸಿ ಪಟೇಲ್ ಬಿ ರಸಿಕ್ ಸಲಾಂ 52 (32ಎ, 4X3, 6X3)
ಗ್ರೀನ್ ಔಟಾಗದೇ 32 (24ಎ, 4X1, 6X2)
ಮಹಿಪಾಲ್ ಲೊಮ್ರೊರ್ ಸಿ ಅಭಿಷೇಕ್ ಬಿ ಅಹಮದ್ 13 (8ಎ, 6X1)
ದಿನೇಶ್ ಸಿ ಕುಲದೀಪ್ ಬಿ ಅಹಮದ್ 0 (2ಎ)
ಸ್ವಪ್ನಿಲ್ ಸಿಂಗ್ ಸಿ ಕುಶಾಗ್ರ ಬಿ ರಸಿಕ್ ಸಲಾಂ 0 (1ಎ)
ಕರ್ಣ ಶರ್ಮಾ ರನ್‌ಔಟ್ (ಹೋಪ್/ಮುಕೇಶ್ ಕುಮಾರ್) 6 (4ಎ, 4X1)
ಸಿರಾಜ್ ರನ್‌ಔಟ್ (ಅಭಿಷೇಕ್/ಮುಕೇಶ್ ಕುಮಾರ್) 0 (0ಎ)
ಇತರೆ: 10 (ಬೈ1, ಲೆಗ್‌ಬೈ2, ವೈಡ್7)
ವಿಕೆಟ್ ಪತನ: 1-23 (ಫಫ್ ಡುಪ್ಲೆಸಿ, 2.2), 2-36 (ವಿರಾಟ್ ಕೊಹ್ಲಿ, 3.4), 3-124 (ರಜತ್ ಪಾಟೀದಾರ್, 12.3), 4-137 (ವಿಲ್ ಜ್ಯಾಕ್ಸ್, 14.4), 5-174 (ಮಹಿಪಾಲ್ ಲೊಮ್ರೊರ್ 17.4), 6-174 (ದಿನೇಶ್ ಕಾರ್ತಿಕ್, 17.4), 7–176 (ಸ್ವಪ್ನಿಲ್ ಸಿಂಗ್ 18.3), 8–185 (ಕರ್ಣ ಶರ್ಮಾ 19.5), 9–187 (ಮೊಹಮದ್ ಸಿರಾಜ್ 19.6)
ಬೌಲಿಂಗ್: ಇಶಾಂತ್ ಶರ್ಮಾ 3–0–31–1, ಖಲೀಲ್ ಅಹಮದ್ 4–0–31–2, ಮುಕೇಶ್ ಕುಮಾರ್ 3–0–23–1, ಅಕ್ಷರ್ ಪಟೇಲ್ 3–0–24–0, ಕುಲದೀಪ್ ಯಾದವ್ 4–0–52–1, ರಸಿಕ್ ಸಲಾಂ 3–0–23–2

ಡೆಲ್ಲಿ ಕ್ಯಾಪಿಟಲ್ಸ್: 140 (19.1 ಓವರ್‌ಗಳಲ್ಲಿ)
ವಾರ್ನರ್ ಸಿ ಜ್ಯಾಕ್ಸ್ ಬಿ ಸ್ವಪ್ನಿಲ್ 1 (2ಎ)
ಮೆಕ್‌ಗುರ್ಕ್ ರನ್‌ಔಟ್ (ಯಶ್ ದಯಾಳ್) 21 (8ಎ, 4x2, 6x2)
ಅಭಿಷೇಕ್ ಸಿ ಫರ್ಗ್ಯುಸನ್ ಬಿ ಯಶ್ 2 (3ಎ)
ಹೋಪ್ ಸಿ ಶರ್ಮಾ ಬಿ ಫರ್ಗ್ಯುಸನ್ 29 (23ಎ, 4x4)
ಕುಶಾಗ್ರಾ ಎಲ್‌ಬಿಡಬ್ಲ್ಯು ಬಿ ಸಿರಾಜ್ 2 (3ಎ)
ಅಕ್ಷರ್ ಸಿ ಡುಪ್ಲೆಸಿ ಬಿ ಯಶ್ 57 (39ಎ, 4x5, 6x3)
ಟ್ರಸ್ಟನ್ ರನ್‌ಔಟ್ (ಗ್ರೀನ್) 3 (4ಎ)
ಸಲಾಂ ಸಿ ಜ್ಯಾಕ್ಸ್ ಬಿ ಗ್ರೀನ್ 10 (12ಎ, 4x1)
ಕುಲದೀಪ್ ಬಿ ಯಶ್ 6 (10ಎ)
ಮುಕೇಶ್ ಸಿ ಲೊಮ್ರೊರ್ ಬಿ ಫರ್ಗ್ಯುಸನ್ 3 (7ಎ)
ಇಶಾಂತ್ ಶರ್ಮಾ ಔಟಾಗದೆ 0 (4ಎ)
ಇತರೆ: 6 (ಲೆಗ್‌ಬೈ 1, ವೈಡ್ 5)
ವಿಕೆಟ್ ಪತನ: 1-8 (ಡೇವಿಡ್ ವಾರ್ನರ್, 0.4), 2-24 (ಅಭಿಷೇಕ್ ಪೊರೆಲ್, 2.1), 3-24 (ಜೇಕ್ ಫ್ರೆಸರ್ ಮೆಕ್‌ಗುರ್ಕ್, 2.2), 4-30 (ಕುಮಾರ್ ಕುಶಾಗ್ರಾ, 3.3), 5-86 (ಶಾಯ್ ಹೋಪ್, 9.3), 6-90 (ಟ್ರಿಸ್ಟನ್ ಸ್ಟಬ್ಸ್, 10.6), 7-127 (ರಸಿಕ್ ಸಲಾಂ, 14.6), 8-128 (ಅಕ್ಷರ್, 15.4), 9-135 (ಮುಕೇಶ್,17.4), 10-140 (ಕುಲದೀಪ್, 19.1)
ಬೌಲಿಂಗ್: ಸ್ವಪ್ನಿಲ್ ಸಿಂಗ್ 1–0–9–1, ಮೊಹಮ್ಮದ್ ಸಿರಾಜ್ 4–0–33–1, ಯಶ್ ದಯಾಳ್ 3.1–0–20–3, ಕರ್ಣ ಶರ್ಮಾ 2–0–19–0, ಲಾಕಿ ಫರ್ಗ್ಯುಸನ್ 4–0–23–2, ಕ್ಯಾಮರಾನ್ ಗ್ರೀನ್ 4–0–19–1, ವಿಲ್ ಜ್ಯಾಕ್ಸ್ 1–0–16–0
ಪಂದ್ಯದ ಆಟಗಾರ: ಕ್ಯಾಮರಾನ್ ಗ್ರೀನ್

ಫಲಿತಾಂಶ: ಆರ್‌ಸಿಬಿ ತಂಡಕ್ಕೆ 47 ರನ್‌ಗಳ ಗೆಲುವು

ಸೂಪರ್ ಕಿಂಗ್ಸ್‌ಗೆ ಸುಲಭ ಜಯ

ಸಿಮ್ರನ್‌ಜೀತ್‌ಗೆ ಮೂರು ವಿಕೆಟ್: ರಾಜಸ್ಥಾನಕ್ಕೆ ಸೋಲು

ಚೆನ್ನೈ (ಪಿಟಿಐ): ಐದು ಬಾರಿಯ ಐಪಿಎಲ್ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡ ಭಾನುವಾರ ರಾಜಸ್ಥಾನ ರಾಯಲ್ಸ್ ತಂಡದ ವಿರುದ್ಧ ಸುಲಭ ಜಯ ಸಾಧಿಸಿತು. ಈ ಮೂಲಕ ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಬಡ್ತಿ ಪಡೆದ ಚೆನ್ನೈ ತಂಡದ ಪ್ಲೇ ಆಫ್ ಹಾದಿ ಮತ್ತಷ್ಟು ಸನಿಹವಾಯಿತು.

ತವರಿನಲ್ಲಿ ನಡೆದ ಪಂದ್ಯದಲ್ಲಿ ಋತುರಾಜ್ ಗಾಯಕವಾಡ್ ಬಳಗವು ರಾಯಲ್ಸ್ ತಂಡದ ವಿರುದ್ಧ ಐದು ವಿಕೆಟ್‌ಗಳ ಜಯ ಸಾಧಿಸಿತು. ಈ ಗೆಲುವಿನೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ 14 ಅಂಕ ಗಳಿಸಿದೆ. ರಾಯಲ್ಸ್ ತಂಡ 16 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದೆ.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ನಾಯಕ ಸಂಜು ಸ್ಯಾಮ್ಸನ್ ನಿರ್ಧಾರ ಕೈಕೊಟ್ಟಿತ್ತು. ರಾಯಲ್ಸ್ ತಂಡಕ್ಕೆ ಆರಂಭದಲ್ಲಿಯೇ ವೇಗಿ ಸಿಮ್ರನ್‌ಜೀತ್ ಸಿಂಗ್ (26ಕ್ಕೆ3) ಬಲವಾದ ಪೆಟ್ಟು ಕೊಟ್ಟರು. 20 ಓವರ್‌ಗಳಲ್ಲಿ 5 ವಿಕೆಟ್‌ಗೆ 141 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಈ ಸಾಧಾರಣ ಮೊತ್ತದ ಗುರಿ ಬೆನ್ನತ್ತಿದ ಚೆನ್ನೈ ತಂಡ ಇನ್ನು ಹತ್ತು ಎಸೆತಗಳು ಬಾಕಿ ಇರುವಂತೆಯೇ 5 ವಿಕೆಟ್‌ಗೆ 145 ರನ್ ಗಳಿಸಿತು.

ಪಂದ್ಯವನ್ನು ಗೆಲ್ಲಲೇಬೇಕಾದ ಅನಿವಾರ್ಯತೆಯೊಂದಿಗೆ ಚೆನ್ನೈ ತಂಡ ಕಣಕ್ಕಿಳಿಯಿತು. ಆರಂಭಿಕ ಆಟಗಾರ ರಚಿನ್ ರವೀಂದ್ರ (27, 18ಎ) ಅವರ ವಿಕೆಟ್ ಅನ್ನು ಬೇಗನೆ ಕಳೆದುಕೊಂಡಿತು. ಅಶ್ವಿನ್ ಅವರಿಗೆ ವಿಕೆಟ್ ಒಪ್ಪಿಸಿದರು. ನಂತರ ಬಂದ ಡೇರಿಲ್ ಮಿಚೆಲ್ (22) ಮೊಯಿನ್ ಅಲಿ (10), ಶುಭಂ ದುಬೆ (18) ರವೀಂದ್ರ ಜಡೇಜ (5) ಅವರು ಹೆಚ್ಚು ಪ್ರತಿರೋಧ ತೋರಲಿಲ್ಲ.

ಸಂಕಷ್ಟದಲ್ಲಿ ತಂಡಕ್ಕೆ ನಾಯಕ ಋತುರಾಜ್ ಗಾಯಕವಾಡ್ ಆಸರೆಯಾದರು. ರಾಯಲ್ಸ್ ಬೌಲರ್‌ಗಳನ್ನು ಕಾಡಿದ ಅವರು, 41 ಎಸೆತಗಳಲ್ಲಿ 42 ರನ್ ಗಳಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಇದರಲ್ಲಿ ಒಂದು ಬೌಂಡರಿ, ಎರಡು ಸಿಕ್ಸರ್ ಸೇರಿತ್ತು. ಸಮೀರ್ (ಅಜೇಯ 15) ಸಹ ತಂಡದ ಗೆಲುವಿಗೆ ಕಾಣಿಕೆ ನೀಡಿದರು.

ಇದಕ್ಕೂ ಮೊದಲು ರಾಜಸ್ಥಾನ ರಾಯಲ್ಸ್ ಆರಂಭದಲ್ಲಿಯೇ ಮೂರು ವಿಕೆಟ್ ಕಳೆದುಕೊಂಡಿತು. ಸಿಮ್ರನ್‌ಜೀತ್ ಸಿಂಗ್ ಅವರು ಯಶಸ್ವಿ ಜೈಸ್ವಾಲ್, ಜೋಸ್ ಬಟ್ಲರ್, ನಾಯಕ ಸಂಜು ಸ್ಯಾಮ್ಸನ್ ಅವರ ವಿಕೆಟ್ ಪಡೆಯುವ ಮೂಲಕ ಆರಂಭಿಕ ಆಘಾತ ನೀಡಿದರು.

ಚೆನ್ನೈ ಸೂಪರ್ ಕಿಂಗ್ಸ್ ತಂಡದ ವೇಗಿ ಸಿಮ್ರನ್‌ಜೀತ್ ಸಿಂಗ್ —ಎಎಫ್‌ಪಿ ಚಿತ್ರ

ನಂತರ ದಾಳಿಗಿಳಿದ ತುಷಾರ್ ದೇಶಪಾಂಡೆ, ಶುಭಂ ದುಬೆಗೆ ಖಾತೆ ತೆರೆಯಲು ಅವಕಾಶ ನೀಡಲಿಲ್ಲ. ಧ್ರುವ್ ಜುರೇಲ್ (28, 18ಎ) ಅವರು ತುಷಾರ್ ಬೌಲಿಂಗ್‌ನಲ್ಲಿ ಠಾಕೂರ್‌ಗೆ ಕ್ಯಾಚಿತ್ತು ನಿರ್ಗಮಿಸಿದರು. ತಂಡ ಸಂಕಷ್ಟಕ್ಕೆ ಸಿಲುಕಿತು.

ಒಂದೆಡೆ ವಿಕೆಟ್‌ಗಳು ಉರುಳುತ್ತಿದ್ದರೆ, ಮತ್ತೊಂದೆಡೆ ರಿಯಾನ್ ಪರಾಗ್ (ಅಜೇಯ 47, 35ಎ) ತಾಳ್ಮೆಯ ಆಟವಾಡಿ ಅಲ್ಪ ಮೊತ್ತಕ್ಕೆ ಕುಸಿಯುವುದನ್ನು ತಪ್ಪಿಸಿದರು. ಒಂದು ಬೌಂಡರಿ, ಮೂರು ಸಿಕ್ಸರ್ ಬಾರಿಸಿ ಮೂಲಕ ತಂಡದ ಮೊತ್ತ ಹೆಚ್ಚಳಕ್ಕೆ ಕಾರಣರಾದರು.

ಸಂಕ್ಷಿಪ್ತ ಸ್ಕೋರ್: ರಾಜಸ್ಥಾನ ರಾಯಲ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 141 (ಯಶಸ್ವಿ ಜೈಸ್ವಾಲ್ 24, ರಿಯಾನ್ ಪರಾಗ್ ಔಟಾಗದೇ 47, ಧ್ರುವ್ ಜುರೇಲ್ 28, ಸಿಮ್ರನ್‌ಜೀತ್ ಸಿಂಗ್ 28ಕ್ಕೆ3, ತುಷಾರ್ ದೇಶಪಾಂಡೆ 30ಕ್ಕೆ2). **ಚೆನ್ನೈ ಸೂಪರ್ ಕಿಂಗ್ಸ್:** 18.5 ಓವರ್‌ಗಳಲ್ಲಿ 5 ವಿಕೆಟ್‌ಗೆ 145. (ರಚಿನ್ ರವೀಂದ್ರ 27, ಋತುರಾಜ್ ಗಾಯಕವಾಡ್ ಅಜೇಯ 42, ಡೇರಿಲ್ ಮಿಚೆಲ್ 22, ಆರ್. ಅಶ್ವಿನ್ 35ಕ್ಕೆ2, ಯಜುವೇಂದ್ರ ಚಾಹಲ್ 22ಕ್ಕೆ1).
ಪಂದ್ಯ ಶ್ರೇಷ್ಠ: ಸಿಮ್ರನ್‌ಜೀತ್ ಸಿಂಗ್

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಕೋಲ್ಕತ್ತ ನೈಟ್ ರೈಡರ್ಸ್	12	9	3	18	1.428
ರಾಜಸ್ಥಾನ ರಾಯಲ್ಸ್	12	8	4	16	0.349
ಚೆನ್ನೈ ಸೂಪರ್ ಕಿಂಗ್ಸ್	13	7	6	14	0.528
ಸನ್‌ರೈಸರ್ಸ್ ಹೈದರಾಬಾದ್	12	7	5	14	0.406
ಆರ್‌ಸಿಬಿ	13	6	7	12	0.387
ಡೆಲ್ಲಿ ಕ್ಯಾಪಿಟಲ್ಸ್	13	6	7	12	-0.482
ಲಖನೌ ಸೂಪರ್ ಜೈಂಟ್ಸ್	12	6	6	12	-0.769
ಗುಜರಾತ್ ಟೈಟನ್ಸ್	12	5	7	10	-1.063
ಮುಂಬೈ ಇಂಡಿಯನ್ಸ್	13	4	9	8	-0.271
ಪಂಜಾಬ್ ಕಿಂಗ್ಸ್	12	4	8	8	-0.423

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (661)

ಪರ್ಪಲ್ ಕ್ಯಾಪ್: ಜಸ್‌ಪ್ರೀತ್ ಬೂಮ್ರಾ, ಹರ್ಷಲ್ ಪಟೇಲ್ (ತಲಾ 20 ವಿಕೆಟ್)

ರಾಜಸ್ಥಾನದಲ್ಲಿ ಬಿಸಿಲ ಧಗೆ ತಗ್ಗಿಸಿದ ಮಳೆ

ಜೈಪುರ (ಪಿಟಿಐ): ಮೆಡಿಟರೇನಿಯನ್ ಸಮುದ್ರದಲ್ಲಿನ ಒತ್ತಡದ ಏರಿಳಿತದಿಂದಾಗಿ ರಾಜಸ್ಥಾನದ ಹಲವು ಭಾಗಗಳಲ್ಲಿ 24 ಗಂಟೆಯಿಂದ ಸಾಧಾರಣ ಮಳೆಯಾಗಿದೆ ಎಂದು ಜೈಪುರದಲ್ಲಿರುವ ಹವಾಮಾನ ಇಲಾಖೆಯ ಕೇಂದ್ರ ಭಾನುವಾರ ತಿಳಿಸಿದೆ.

ರಾಜಸಮಂದ್ ಜಿಲ್ಲೆಯ ದೇವಗಢ ಪಟ್ಟಣದಲ್ಲಿ ಅತಿ ಹೆಚ್ಚು 42 ಮಿಲಿ ಮೀಟರ್‌ನಷ್ಟು ಮಳೆಯಾಗಿದೆ. ಈ ಮಳೆಯಿಂದ ಹಲವು ದಿನಗಳಿಂದ ಬಿಸಿಲ ಧಗೆಯಿಂದ ಕಂಗೆಟ್ಟಿದ್ದ ಜನರು ಕೊಂಚ ನಿರಾಳರಾಗಿದ್ದಾರೆ. ಮೇ 14ರವರೆಗೆ ರಾಜ್ಯದಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮಳೆಯಿಂದಾಗಿ ರಾಜ್ಯದಲ್ಲಿನ ಗರಿಷ್ಠ ತಾಪಮಾನವು 42 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆಯಾಗಿದೆ. ಶನಿವಾರ ಮಧ್ಯಾಹ್ನದಿಂದ ಬಿಕಾನೇರ್ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ದೂಳಿನ ಬಿರುಗಾಳಿ ವ್ಯಾಪಿಸಿತ್ತು.

ಜೈಪುರದ ಖಾಸಗಿ ಆಸ್ಪತ್ರೆಯ ಇಬ್ಬರು ವೈದರ ಬಂಧನ

ಅಂಗಾಂಗ ಕಸಿಗೆ ನಕಲಿ ಎನ್‌ಒಸಿ

ಜೈಪುರ (ಪಿಟಿಐ): ಅಂಗಾಂಗ ಕಸಿಗೆ ನಕಲಿ ನಿರಾಕ್ಷೇಪಣಾ ಪ್ರಮಾಣಪತ್ರ (ಎನ್‌ಒಸಿ) ನೀಡಿದ ಪ್ರಕರಣ ಸಂಬಂಧ ಜೈಪುರದ ಖಾಸಗಿ ಆಸ್ಪತ್ರೆಯ ಇಬ್ಬರು ವೈದ್ಯರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜೈಪುರದ ಫೋರ್ಟಿಸ್ ಆಸ್ಪತ್ರೆಯ ಮೂತ್ರಪಿಂಡ ತಜ್ಞರಾದ ಡಾ. ಜಿತೇಂದ್ರ ಗೋಸ್ವಾಮಿ ಮತ್ತು ಡಾ. ಸಂದೀಪ್ ಗುಪ್ತಾ ಅವರನ್ನು ಬಂಧಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ನಕಲಿ ಎನ್‌ಒಸಿಗೆ ಸಂಬಂಧಿಸಿದಂತೆ ರಾಜಸ್ಥಾನ ಸರ್ಕಾರವು ಸವಾಯಿ ಮಾನ್ ಸಿಂಗ್ (ಎಸ್‌ಎಂಎಸ್) ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ. ರಾಜೀವ್ ಬಗ್ರಾಹಟ್ಟಾ ಮತ್ತು ಎಸ್‌ಎಂಎಸ್ ಆಸ್ಪತ್ರೆಯ ಸೂಪರಿಂಟೆಂಡೆಂಟ್

ಡಾ. ಅಚಲ್ ಶರ್ಮಾ ಅವರನ್ನು ತಮ್ಮ ಹುದ್ದೆಗಳಿಂದ ಮಂಗಳವಾರ ಬಿಡುಗಡೆ ಮಾಡಿದೆ. ಅಲ್ಲದೆ, ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆಯ (ಎಸ್‌ಒಟಿಟಿಒ) ಚಾಲನಾ ಸಮಿತಿಯ ಅಧ್ಯಕ್ಷ ಸ್ಥಾನದಿಂದ ಡಾ. ಸುಧೀರ್ ಭಂಡಾರಿ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ತೆಗೆದು ಹಾಕಲಾಗಿದೆ. ಭಂಡಾರಿ ಅವರು ರಾಜಸ್ಥಾನ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ (ಆರ್‌ಯುಎಚ್‌ಎಸ್) ಕುಲಪತಿ ಹುದ್ದೆಗೂ ಗುರುವಾರ ರಾಜೀನಾಮೆ ನೀಡಿದ್ದಾರೆ.

ಅಂಗಾಂಗ ಕಸಿಗೆ ಸಂಬಂಧಿಸಿದಂತೆ ಎನ್‌ಒಸಿ ನೀಡಲು ಲಂಚ ಪಡೆದ ಮೂವರನ್ನು ಭ್ರಷ್ಟಾಚಾರ ನಿಗ್ರಹ ದಳದ ತಂಡದವರು ಏಪ್ರಿಲ್ 1ರಂದು ಬಂಧಿಸಿದ್ದರು. ಇವರು ಹಣ ಪಡೆದು ನಕಲಿ ಎನ್‌ಒಸಿ ನೀಡುತ್ತಿದ್ದರು ಎಂಬ ಆರೋಪ ಇದೆ. ಬಳಿಕ ಜೈಪುರದ ಕೆಲವು ಖಾಸಗಿ ಆಸ್ಪತ್ರೆಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ.

ಪ್ಲಾಸ್ಮಾ ಕಳ್ಳತನ: ಟೆಕ್ನಿಷಿಯನ್ ಬಂಧನ

ಜೈಪುರ: ರಾಜಸ್ಥಾನದ ಜೈಪುರದಲ್ಲಿರುವ ಜೆಕೆ ಲೋನ್ ಸರ್ಕಾರಿ ಆಸ್ಪತ್ರೆಯಿಂದ ಪ್ಲಾಸ್ಮಾ ಪ್ಯಾಕ್‌ಗಳನ್ನು ಕದ್ದ ಆರೋಪದ ಮೇಲೆ ಲ್ಯಾಬ್ ಟೆಕ್ನಿಷಿಯನ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತ ಕಿಶನ್ ಸಹಾಯ್ ಕಟಾರಿಯಾ, ಇದೇ ಜೆ.ಕೆ. ಲೋನ್ ಆಸ್ಪತ್ರೆಯ ರಕ್ತನಿಧಿ ಕೇಂದ್ರದಲ್ಲಿ ಲ್ಯಾಬ್ ಟೆಕ್ನೀಷಿಯನ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಎಂದು ಡಿಸಿಪಿ ಕಾವೇಂದ್ರ ಸಾಗರ್ ತಿಳಿಸಿದ್ದಾರೆ.

ರಕ್ತನಿಧಿ ಕೇಂದ್ರದ ಉಸ್ತುವಾರಿಯಾಗಿರುವ ಡಾ.ಸತ್ಯೇಂದ್ರ ಚೌಧರಿ ಅವರು ಲ್ಯಾಬ್ ಟೆಕ್ನಿಷಿಯನ್ ಕಿಶನ್ ಸಹಾಯ್ 76 ಪ್ಲಾಸ್ಮಾ ಪ್ಯಾಕ್‌ಗಳನ್ನು ಕಳ್ಳತನ ಮಾಡಿರುವುದಾಗಿ ಇದೇ 6ರಂದು ಪೊಲೀಸ್ ದೂರು ದಾಖಲಿಸಿದ್ದರು.

ಬಿಎಸ್‌ಎಫ್ ಮಾದರಿ ಅಳವಡಿಕೆಗೆ ಸೂಚನೆ

ಪಶ್ಚಿಮ ಬಂಗಾಳದ ಗಡಿ ಪ್ರದೇಶಗಳಲ್ಲಿ ಜೇನುಸಾಕಣೆ

ನವದೆಹಲಿ (ಪಿಟಿಐ): ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಪಶ್ಚಿಮ ಬಂಗಾಳ ಘಟಕವು ಅಳವಡಿಸಿಕೊಂಡಿರುವ 'ಗಡಿ ಬೇಲಿಯಲ್ಲಿ ಜೇನುಗೂಡು' ಮಾದರಿಯನ್ನು ಎಲ್ಲ ಕೇಂದ್ರೀಯ ಅರೆಸೇನಾ ಪಡೆಗಳು ಹಾಗೂ ಇತರ ಪಡೆಗಳು ಜಾರಿಗೆ ತರಬೇಕು ಎಂದು ಕೇಂದ್ರ ಗೃಹ ಸಚಿವಾಲಯವು ಸೂಚನೆ ನೀಡಿದೆ.

ಈ ಮಾದರಿಯು ಸ್ಥಳೀಯರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸುತ್ತದೆ, ಭದ್ರತೆಯನ್ನು ಹೆಚ್ಚಿಸುವ ಉದ್ದೇಶದಿಂದ ಸ್ಥಳೀಯರಲ್ಲಿ ಸದಭಿಪ್ರಾಯ ಮೂಡಿಸಲು ನೆರವಾಗುತ್ತಿದೆ.

ಗೃಹ ಸಚಿವಾಲಯದ ಕಾರ್ಯದರ್ಶಿ ಅಜಯ್ ಭಲ್ಲಾ ಅವರು ಏಪ್ರಿಲ್‌ನಲ್ಲಿ ಕರೆದಿದ್ದ 'ವೈಜ್ಞಾನಿಕ ಜೇನುಸಾಕಣೆ ಮತ್ತು ಜೇನುತುಪ್ಪ ಕಾರ್ಯಯೋಜನೆ' ಕುರಿತ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

ಬಿಎಸ್‌ಎಫ್‌ನ 32ನೆಯ ಬೆಟಾಲಿಯನ್ ರೂಪಿಸಿ, ಜಾರಿಗೆ ತಂದಿರುವ ಈ ಮಾದರಿಯನ್ನು ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯಲ್ಲಿ ಭಾರತ–ಬಾಂಗ್ಲಾದೇಶ ಅಂತರರಾಷ್ಟ್ರೀಯ ಗಡಿಯಲ್ಲಿ ಅಳವಡಿಸಲಾಗಿದೆ. ಇದನ್ನು ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳು (ಸಿಎಪಿಎಫ್‌ಗಳು) ಅಳವಡಿಸಿಕೊಳ್ಳಬೇಕು ಎಂಬ ತೀರ್ಮಾನವನ್ನು ಸಭೆಯಲ್ಲಿ ತೆಗೆದುಕೊಳ್ಳಲಾಯಿತು ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಬಿಎಸ್‌ಎಫ್ ಅನುಷ್ಠಾನಕ್ಕೆ ತಂದಿರುವ ಈ ಮಾದರಿಯು ದೂರದ ಪ್ರದೇಶಗಳಲ್ಲಿ ಉದ್ಯೋಗ ಸೃಷ್ಟಿಸುವ, ಸ್ಥಳೀಯರ ಸ್ನೇಹ ಸಂಪಾದಿಸುವ ಮತ್ತು ಅವರಲ್ಲಿ ಸದಭಿಪ್ರಾಯ ಮೂಡಿಸುವ ಉದ್ದೇಶ ಹೊಂದಿದೆ. ಸ್ಥಳೀಯರು ಇಂತಹ ಪ್ರದೇಶಗಳಲ್ಲಿ ಭದ್ರತೆಯ ದೃಷ್ಟಿಯಿಂದ ಬಹಳ ಮುಖ್ಯವಾಗುತ್ತಾರೆ ಎಂದು ಬಿಎಸ್‌ಎಫ್‌ನ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಈ ಮಾದರಿಯನ್ನು ಕಳೆದ ವರ್ಷದ ನವೆಂಬರ್‌ನಲ್ಲಿ ಜಾರಿಗೆ ತರಲಾಯಿತು. ಬಿಎಸ್‌ಎಫ್ ಯೋಧರು ನಾದಿಯಾ ಜಿಲ್ಲೆಯಲ್ಲಿ ಅಂದಾಜು 200 ಜೇನುಪೆಟ್ಟಿಗೆಗಳನ್ನು ಇರಿಸಿದ್ದಾರೆ. ಈ ಮೂಲಕ ಅವರು ಸ್ಥಳೀಯರನ್ನು ಉತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಿದ್ದಾರೆ.

ಗಡಿ ಪ್ರದೇಶಗಳಲ್ಲಿ ಜೀವನೋಪಾಯಕ್ಕೆ ಹೆಚ್ಚಿನ ಅವಕಾಶಗಳು ಇಲ್ಲದಿರುವ ಕಾರಣದಿಂದಾಗಿ ಸ್ಥಳೀಯರು ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗುವುದು ಕಂಡುಬಂದ ನಂತರ ಈ ಯೋಜನೆಯನ್ನು ಆರಂಭಿಸಲಾಯಿತು ಎಂದು ಕಮಾಂಡೆಂಟ್ ಸುಜೀತ್ ಕುಮಾರ್ ಸುದ್ದಿಸಂಸ್ಥೆಗೆ ತಿಳಿಸಿದ್ದರು.

'ಬೇಲಿಗಳ ಮೇಲೆ ಜೇನುಪೆಟ್ಟಿಗೆ' ಯೋಜನೆಯ ಅಡಿಯಲ್ಲಿ ಸ್ಥಳೀಯರನ್ನು ಜೇನುತುಪ್ಪ ಉತ್ಪಾದನೆಯಲ್ಲಿ, ಜೇನುಹುಳುಗಳಿಗಾಗಿ ಕೆಲವು ಗಿಡಗಳನ್ನು ಬೆಳೆಸುವ ಕಾರ್ಯದಲ್ಲಿ ತೊಡಗಿಸಲಾಗುತ್ತದೆ ಎಂದು ಅವರು ಹೇಳಿದ್ದರು.

ಮುಖ್ಯಾಂಶಗಳು
- ನಾದಿಯಾ ಜಿಲ್ಲೆಯಲ್ಲಿ 200 ಜೇನುಪೆಟ್ಟಿಗೆ ಇರಿಸಿರುವ ಬಿಎಸ್‌ಎಫ್ ಯೋಧರು
- ಭದ್ರತೆ ಜೊತೆ ಸ್ಥಳೀಯರಿಗೆ ಉದ್ಯೋಗಾವಕಾಶದ ಪರಿಕಲ್ಪನೆ

ಜಾರ್ಖಂಡ್ ಸಚಿವ ಆಲಂಗೆ ಇ.ಡಿ ನೋಟಿಸ್

ರಾಂಚಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಮೇ 14ರಂದು ವಿಚಾರಣೆಗೆ ಹಾಜರಾಗುವಂತೆ ಜಾರ್ಖಂಡ್ ಗ್ರಾಮೀಣಾಭಿವೃದ್ಧಿ ಸಚಿವ ಮತ್ತು ಕಾಂಗ್ರೆಸ್ ಮುಖಂಡ ಆಲಂಗೀರ್ ಆಲಂ ಅವರಿಗೆ ಜಾರಿ ನಿರ್ದೇಶನಾಲಯವು (ಇ.ಡಿ) ನೋಟಿಸ್ ನೀಡಿದೆ.

ಇತ್ತೀಚೆಗೆ ಸಚಿವ ಆಲಂಗೀರ್ ಆಲಂ ಅವರ ಆಪ್ತ ಕಾರ್ಯದರ್ಶಿಯ ಮನೆಗೆಲಸದ ವ್ಯಕ್ತಿಗೆ ಸೇರಿದ ಮನೆಯಲ್ಲಿ ₹32 ಕೋಟಿ ಹಣವನ್ನು ಇ.ಡಿ ಪತ್ತೆ ಹಚ್ಚಿತ್ತು. ಇದಾದ ಬಳಿಕ ಆಲಂ ಅವರ ಆಪ್ತ ಕಾರ್ಯದರ್ಶಿ ಸಂಜೀವ್ ಲಾಲ್ ಅವರನ್ನು ಬಂಧಿಸಲಾಗಿತ್ತು.

ಈ ಪ್ರಕರಣದ ಸಂಬಂಧ ರಾಂಚಿಯಲ್ಲಿರುವ ಇ.ಡಿ ಕಚೇರಿಗೆ ಮಂಗಳವಾರ ಹಾಜರಾಗಿ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಹೇಳಿಕೆ ದಾಖಲಿಸುವಂತೆ ಆಲಂ ಅವರಿಗೆ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಜಾರ್ಖಂಡ್‌ನ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಕ್ಕೆ ಸಂಬಂಧಿಸಿದ ಪ್ರಕರಣವಿದು ಎನ್ನಲಾಗಿದೆ.

ಕೇಂದ್ರ ಸರ್ಕಾರದ ತೀರ್ಮಾನಕ್ಕೆ ಕೇರಳ ಸರ್ಕಾರ ಪ್ರತಿರೋಧ

ಪಾಲಕ್ಕಾಡ್ ರೈಲ್ವೆ ವಲಯ ಮುಚ್ಚಲು ನಿರ್ಧಾರ

ತಿರುವನಂತಪುರ (ಪಿಟಿಐ): ಪಾಲಕ್ಕಾಡ್ ರೈಲ್ವೆ ವಲಯವನ್ನು ಕೇಂದ್ರ ಸರ್ಕಾರ ಮುಚ್ಚಲು ನಿರ್ಧರಿಸಿದೆ ಎಂಬ ವರದಿ ಕುರಿತು ಕೇರಳ ಸರ್ಕಾರ ತೀವ್ರ ಪ್ರತಿಭಟನೆ ದಾಖಲಿಸಿದೆ. ದಕ್ಷಿಣ ರಾಜ್ಯದ ವಿರುದ್ಧ ಕೇಂದ್ರ ಸರ್ಕಾರದ ಸೇಡಿನ ರಾಜಕಾರಣ ಮತ್ತು ನಿರ್ಲಕ್ಷ್ಯಕ್ಕೆ ಇದೊಂದು ಉದಾಹರಣೆಯಾಗಿದೆ ಎಂದು ಆರೋಪಿಸಿದೆ.

ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿರುವ ರಾಜ್ಯ ರೈಲ್ವೆ ಸಚಿವ ವಿ. ಅಬ್ದುರಹಿಮಾನ್, ಪಾಲಕ್ಕಾಡ್ ರೈಲ್ವೆ ವಲಯವನ್ನು ಮುಚ್ಚುವ ತೀರ್ಮಾನ ಹಿಂಪಡೆಯಬೇಕು ಎಂದು ಕೋರಿದ್ದಾರೆ.

ಪ್ರಯಾಣಿಕರ ಸಂಖ್ಯೆ ಮತ್ತು ವರಮಾನ ವಿಚಾರದಲ್ಲಿ ಪಾಲಕ್ಕಾಡ್ ವಲಯವು ತುಂಬಾ ಮುಂದಿದೆ. ಯಾವುದೇ ಕಾರಣ ನೀಡದೆ, ಮುಚ್ಚುವ ನಿರ್ಧಾರವು ರಾಜ್ಯ ಸರ್ಕಾರದ ವಿರುದ್ಧವಾದದ್ದು. ರೈಲ್ವೆ ಅಭಿವೃದ್ಧಿ ವಿಚಾರದಲ್ಲಿ ಕೇರಳವನ್ನು ನಿರಂತರವಾಗಿ ನಿರ್ಲಕ್ಷಿಸಲಾಗುತ್ತಿದೆ ಎಂದೂ ಅವರು ದೂರಿದರು.

ಈ ಹಿಂದೆಯೂ ಪಾಲಕ್ಕಾಡ್ ವಲಯವನ್ನು ಮಂಗಳೂರು ವಲಯಕ್ಕೆ ಸೇರಿಸಲು ಕೇಂದ್ರ ಸರ್ಕಾರ ಯತ್ನಿಸಿತ್ತು. ಆದರೆ, ಕೇರಳ ಸರ್ಕಾರ ತೀವ್ರ ಪ್ರತಿರೋಧ ಒಡ್ಡಿದ್ದರಿಂದಾಗಿ ಈ ತೀರ್ಮಾನವನ್ನು ಹಿಂಪಡೆದಿತ್ತು ಎಂದು ಅವರು ಹೇಳಿದರು.

₹84 ಲಕ್ಷ ಮೌಲ್ಯದ ಮಾದಕವಸ್ತು ವಶ

ಗುವಾಹಟಿ (ಪಿಟಿಐ): ಅಸ್ಸಾಂನ ಗುವಾಹಟಿಯಲ್ಲಿ ಭಾನುವಾರ ₹84 ಲಕ್ಷ ಮೌಲ್ಯದ ಮಾದಕವಸ್ತು ವಶಪಡಿಸಿಕೊಂಡು, ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಖಾನಾಪಾರದಲ್ಲಿ ಮಾದಕವಸ್ತುವನ್ನು ಸಾಗಣೆ ಮಾಡಲಾಗುತ್ತಿರುವ ಕುರಿತು ಖಚಿತ ಮಾಹಿತಿ ಹೊರಕುತ್ತಿದ್ದಂತೆ ಎಸ್‌ಐಟಿ ಕಾರ್ಯಾಚರಣೆಗೆ ಇಳಿಯಿತು. ನಾಲ್ವರು ಮಾದಕವಸ್ತು ಕಳ್ಳಸಾಗಣೆದಾರರ ಚಲನವಲನವನ್ನು ಪತ್ತೆ ಮಾಡಿದ ತಂಡವು ಅವರನ್ನು ಬಂಧಿಸಿತು. ಅವರಿಂದ, 77 ಶೀಶೆಗಳಲ್ಲಿ ಇರಿಸಲಾಗಿದ್ದ 105 ಗ್ರಾಂ ಹೆರಾಯಿನ್, ಎರಡು ಮೊಬೈಲ್ ಫೋನ್‌ಗಳು ಮತ್ತು ₹7,220 ನಗದನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು. ಮಾದಕವಸ್ತು ನಿಗ್ರಹ ಸಂಸ್ಥೆ ಅಂದಾಜಿನ ಪ್ರಕಾರ ವಶಕ್ಕೆ ತೆಗೆದುಕೊಳ್ಳಲಾದ ಮಾದಕವಸ್ತು ಬೆಲೆ ಸುಮಾರು ₹84 ಲಕ್ಷ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚೀನಾ ಜೊತೆಗಿನ ಸಮಸ್ಯೆ ಇತ್ಯರ್ಥಕ್ಕೆ ಭಾರತ ಒಲವು: ಸಚಿವ ಜೈಶಂಕರ್

ನವದೆಹಲಿ (ಪಿಟಿಐ): ಪೂರ್ವ ಲಡಾಖ್‌ನಲ್ಲಿನ ಮಿಲಿಟರಿ ಬಿಕ್ಕಟ್ಟು ಐದನೆಯ ವರ್ಷ ಪ್ರವೇಶಿಸಿರುವ ಸಂದರ್ಭದಲ್ಲಿ ಅದರ ಬಗ್ಗೆ ಅನಿಸಿಕೆ ಹಂಚಿಕೊಂಡಿರುವ ವಿದೇಶಾಂಗ ಸಚಿವ ಎಸ್. ಜೈಶಂಕರ್, ಚೀನಾ ಜೊತೆ ಬಾಕಿ ಉಳಿದಿರುವ ಸಮಸ್ಯೆಗಳನ್ನು ಇತ್ಯರ್ಥಪಡಿಸಿಕೊಳ್ಳುವ ಇರಾದೆಯನ್ನು ಭಾರತ ಹೊಂದಿದೆ ಎಂದು ಹೇಳಿದ್ದಾರೆ.

ದ್ವಿಪಕ್ಷೀಯ ಸಂಬಂಧವು ಸಹಜ ಸ್ಥಿತಿಗೆ ಬರುವುದು ಗಡಿ ಪ್ರದೇಶದಲ್ಲಿನ ಶಾಂತಿಯನ್ನು ಆಧರಿಸಿದೆ ಎಂದು ಅವರು ಹೇಳಿದ್ದಾರೆ. ಪಿಟಿಐ ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಜೈಶಂಕರ್ ಅವರು, ಬಾಕಿ ಉಳಿದಿರುವ ವಿಷಯಗಳು ಪ್ರಮುಖವಾಗಿ, ಪಹರೆಯ ಹಕ್ಕುಗಳು ಮತ್ತು ಪಹರೆಯ ಸಾಮರ್ಥ್ಯಕ್ಕೆ ಸಂಬಂಧಿಸಿವೆ ಎಂದಿದ್ದಾರೆ.

ಎಸ್. ಜೈಶಂಕರ್

'ಇಂದು ಚೀನಾದ ಜೊತೆಗಿನ ನಮ್ಮ ಸಂಬಂಧವು ಸಹಜವಾಗಿ ಇಲ್ಲ. ಏಕೆಂದರೆ, ಗಡಿ ಪ್ರದೇಶಗಳಲ್ಲಿ ಶಾಂತಿಗೆ ಭಂಗ ಉಂಟಾಗಿದೆ. ಹೀಗಾಗಿ ಪ್ರಧಾನಿಯವರು, ಈಗಿನ ಪರಿಸ್ಥಿತಿಯು ತಮ್ಮ ಹಿತಾಸಕ್ತಿಗಳಿಗೂ ಪೂರಕವಾಗಿ ಇಲ್ಲ ಎಂಬುದನ್ನು ಚೀನಾದವರು ಅರಿಯಬೇಕು ಎಂದು ಹೇಳಿದ್ದರು' ಎಂದು ಜೈಶಂಕರ್ ಅವರು ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಈಚೆಗೆ ಸಂದರ್ಶನವೊಂದರಲ್ಲಿ, 'ಗಡಿಯಲ್ಲಿನ ಸಮಸ್ಯೆಯನ್ನು ತ್ವರಿತವಾಗಿ ಬಗೆಹರಿಸಬೇಕಿದೆ, ಭಾರತ ಮತ್ತು ಚೀನಾ ನಡುವೆ ಶಾಂತಿಯುತ ಹಾಗೂ ಸ್ಥಿರವಾದ ಸಂಬಂಧವು ಎರಡು ದೇಶಗಳಿಗೆ ಮಾತ್ರವೇ ಮುಖ್ಯವಲ್ಲ; ಇಡೀ ಪ್ರದೇಶಕ್ಕೆ ಹಾಗೂ ವಿಶ್ವಕ್ಕೆ ಅದು ಮುಖ್ಯ' ಎಂದು ಹೇಳಿದ್ದರು.

ಗಾಲ್ವನ್ ಕಣಿವೆಯಲ್ಲಿ ಚೀನಾದ ಸೈನಿಕರ ಜೊತೆ ಸಂಘರ್ಷ ನಡೆದ ನಂತರದಲ್ಲಿ ಕೇಂದ್ರ ಸರ್ಕಾರವು, ಚೀನಾಕ್ಕೆ ಹೊಂದಿಕೊಂಡಿರುವ ಗಡಿಯಲ್ಲಿ ಮಿಲಿಟರಿ ಸಾಮರ್ಥ್ಯವನ್ನು ಹೆಚ್ಚು ಮಾಡಲು ಗಮನಹರಿಸಿದೆ. ಸೇನೆಯು ಯೋಧರ ನಿಯೋಜನೆಯನ್ನು ಹೆಚ್ಚು ಮಾಡಿದೆ. ಅಲ್ಲದೆ, ಶಸ್ತ್ರಾಸ್ತ್ರಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಗಡಿಯಲ್ಲಿ ನಿಯೋಜಿಸಿದೆ.

ದಾಖಲೆ ಬರೆದ ನೇಪಾಳದ ಪರ್ವತಾರೋಹಿ ಕಾಮಿ ಶೆರ್ಪಾ

29ನೇ ಬಾರಿಗೆ ಎವರೆಸ್ಟ್ ಆರೋಹಣ

ಕಠ್ಮಂಡು (ಪಿಟಿಐ): ನೇಪಾಳದ ಹಿರಿಯ ಪರ್ವತಾರೋಹಿ ಕಾಮಿ ರೀಟಾ ಶೆರ್ಪಾ ಅವರು ವಿಶ್ವದ ಅತಿ ಎತ್ತರದ ಎವರೆಸ್ಟ್ ಶಿಖರವನ್ನು 29ನೇ ಬಾರಿಗೆ ಏರುವ ಮೂಲಕ ಭಾನುವಾರ ತಮ್ಮ ದಾಖಲೆಯನ್ನು ಮುರಿದು ಹೊಸ ಇತಿಹಾಸ ನಿರ್ಮಿಸಿದರು.

54 ವರ್ಷ ವಯಸ್ಸಿನ ಕಾಮಿ ಅವರು ನೇಪಾಳದ ಸ್ಥಳೀಯ ಕಾಲಮಾನ ಬೆಳಿಗ್ಗೆ 7.25 ಗಂಟೆಗೆ, 8,849 ಮೀಟರ್ ಎತ್ತರದ ಶಿಖರವನ್ನು ಏರಿದರು ಎಂದು ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕ ರಾಕೇಶ್ ಗುರೂಂಗ್ ಅವರು ತಿಳಿಸಿದರು.

ಪರ್ವತಾರೋಹಣವನ್ನು 'ಸೆವೆನ್ ಸಮಿತ್ ಟ್ರೆಕ್ಸ್' ಸಂಸ್ಥೆಯು ಆಯೋಜಿಸಿತ್ತು. ಕಾಮಿ ಶೆರ್ಪಾ ಸೇರಿದಂತೆ ಒಟ್ಟು 20 ಮಂದಿ ಪರ್ವತಾರೋಹಣ ಭಾನುವಾರ ಪರ್ವತಾರೋಹಣ ಮಾಡಿದ ತಂಡದಲ್ಲಿ ಇದ್ದರು ಎಂದು ಸಂಸ್ಥೆಯ ಸಿಬ್ಬಂದಿಯೊಬ್ಬರು ಮಾಹಿತಿ ನೀಡಿದರು.

ಅಮೆರಿಕ, ಕೆನಡಾ, ಕಜಕಿಸ್ತಾನದ ಪರ್ವತಾರೋಹಿಗಳ ಜೊತೆಗೆ ನೇಪಾಳದವರೇ ಆದ 13 ಮಂದಿ ತಂಡದಲ್ಲಿದ್ದರು. ಕಾಮಿ ಅವರು ಎವರೆಸ್ಟ್ ಶಿಖರವನ್ನು ಮೊದಲ ಬಾರಿಗೆ 1994ರಲ್ಲಿ ಏರಿದ್ದರು.

ಮುಖ್ಯಾಂಶಗಳು
- 'ಸೆವೆನ್ ಸಮಿತ್ ಟ್ರೆಕ್ಸ್' ಸಂಸ್ಥೆಯು ಆಯೋಜಿಸಿದ್ದ ಪರ್ವತಾರೋಹಣ
- ನೇಪಾಳದ 13 ಮಂದಿ ಪರ್ವತಾರೋಹಿಗಳು ಭಾಗಿ
- 1994ರಲ್ಲಿ ಎವರೆಸ್ಟ್ ಶಿಖರವನ್ನು ಮೊದಲ ಬಾರಿಗೆ ಏರಿದ್ದ ಕಾಮಿ

ಕಾಮಿ ರೀಟಾ ಶೆರ್ಪಾ —ಎ.ಪಿ ಚಿತ್ರ

ಕಳೆದ ವರ್ಷ ಒಂದೇ ಋತುವಿನಲ್ಲಿ ಸತತವಾಗಿ ಎರಡು ಬಾರಿ ಶಿಖರವನ್ನು ಏರಿದ್ದರು. ಈಗ 29ನೇ ಬಾರಿಗೆ ಶಿಖರ ಏರುವ ಮೂಲಕ ಗರಿಷ್ಠ ಬಾರಿ ಶಿಖರವನ್ನು ಏರಿದ ದಾಖಲೆಯನ್ನು ಬರೆದರು.

ಕಾಮಿ ಅವರು 'ಸೆವೆನ್ ಸಮಿತ್ ಟ್ರೆಕ್ಸ್' ಸಂಸ್ಥೆಯ ಹಿರಿಯ ಗೈಡ್ ಕೂಡ ಆಗಿದ್ದಾರೆ. 1970ರ ಜನವರಿ 17ರಂದು ಜನಿಸಿದ ಅವರು, ಪರ್ವತಾರೋಹಣದ ಪ್ರಯಾಣವನ್ನು 1992ರಲ್ಲಿ ಆರಂಭಿಸಿದ್ದರು.

ಅಂದಿನಿಂದಲೂ ಕಾಮಿ ಅವರ ಪರ್ವತಾರೋಹಣ ಯಾತ್ರೆಯು ನಿರ್ಭೀತಿಯಿಂದ ಸಾಗಿದೆ. ಮೌಂಟ್ ಎವರೆಸ್ಟ್ ಅಲ್ಲದೆ ಅವರು ಮೌಂಟ್ ಕೆ2, ಚೊ ಒಯು, ಲೋತ್ಸೆ ಮತ್ತು ಮನಾಸ್ಲು ಶಿಖರಗಳನ್ನೂ ಏರಿದ್ದಾರೆ.

ಮಂಗಳಾ ಕಪ್ ರಾಷ್ಟ್ರೀಯ ಮುಕ್ತ ಬ್ಯಾಡ್ಮಿಂಟನ್

ನಿಖಿಲ್, ಸ್ನೇಹಾ ಮುಡಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮಂಗಳೂರು: ರಾಜ್ಯದ ರ್‍ಯಾಂಕಿಂಗ್ ಆಟಗಾರರು ನಿರಾಸೆ ಕಂಡ ಕೊನೆಯ ದಿನ ಭರ್ಜರಿ ಆಟವಾಡಿದ ನಿಖಿಲ್ ಶ್ಯಾಮ್ ಶ್ರೀರಾಮ್ ಅವರು ಮಂಗಳಾ ಕಪ್ ರಾಷ್ಟ್ರೀಯ ಮುಕ್ತ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ತಮ್ಮದಾಗಿಸಿಕೊಂಡರು. ಮಹಿಳಾ ವಿಭಾಗದ ಪ್ರಶಸ್ತಿ ಸ್ನೇಹಾ ಎಸ್. ಮುಡಿಗೇರಿತು.

ಮಂಗಳಾ ಬ್ಯಾಡ್ಮಿಂಟನ್ ಸಂಸ್ಥೆ, ನಗರದ ಯು.ಎಸ್.ಮಲ್ಯ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಟೂರ್ನಿಯ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಬೆಂಗಳೂರಿನ ಅರ್‍ರೈಸ್ ಬ್ಯಾಡ್ಮಿಂಟನ್ ಅಕಾಡೆಮಿಯ ನಿಖಿಲ್ 21-11, 15-21, 22-20ರಲ್ಲಿ ಎಲ್‌ಎನ್‌ಬಿಎಯ ಶ್ರೀವರ್ಷನ್ ವಿರುದ್ಧ ಜಯ ಸಾಧಿಸಿದರು.

ಮಹಿಳೆಯರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಸ್ನೇಹಾ ಎಸ್. ಅವರ ಆಟ
ಪ್ರಜಾವಾಣಿ ಚಿತ್ರಗಳು /ಫಕ್ರುದ್ದೀನ್ ಎಚ್

ಶ್ರೀವರ್ಷನ್ ಅವರ ಮುಂದೆ ಚಾಕಚಕ್ಯತೆ ಮರೆದ ನಿಖಿಲ್, ನೆಟ್ ಬಳಿ ಮೋಹಕ ಡ್ರಾಪ್‌ಗಳ ಮೂಲಕ ಪಾಯಿಂಟ್‌ಗಳನ್ನು ಕಲೆ ಹಾಕಿದರು. ಎರಡನೇ ಗೇಮ್ ಗೆದ್ದ ಶ್ರೀವರ್ಷನ್ ಕೊನೆಯ ಗೇಮ್‌ನಲ್ಲಿ ಭಾರಿ ಪೈಪೋಟಿ ನೀಡಿದರು. ಒಂದು ಹಂತದಲ್ಲಿ ಪಂದ್ಯ ಗೆಲ್ಲುವತ್ತ ಸಾಗಿದ್ದರು. ಆದರೆ ಧೃತಿಗೆಡದ ನಿಖಿಲ್ ಹಿನ್ನಡೆಯಿಂದ ಚೇತರಿಸಿಕೊಂಡು ಗೇಮ್ ಮತ್ತು ಪಂದ್ಯವನ್ನು ತಮ್ಮದಾಗಿಸಿಕೊಂಡರು.

ನಿಖಿಲ್ ₹35 ಸಾವಿರ ಮೊತ್ತ ಮತ್ತು ಟ್ರೋಫಿ ಗಳಿಸಿದರೆ ರನ್ನರ್ ಅಪ್ ಶ್ರೀವರ್ಷನ್‌ಗೆ ₹15 ಸಾವಿರ ಮೊತ್ತ ಮತ್ತು ಟ್ರೋಫಿ ನೀಡಲಾಯಿತು. ಸೆಮಿಫೈನಲ್‌ನಲ್ಲಿ ರ್‍ಯಾಂಕಿಂಗ್ ಆಟಗಾರ ಹೇಮಂತ್ ಗೌಡ ವಿರುದ್ಧ ನಿಖಿಲ್ ಮತ್ತು ಆದಿತ್ಯ ವಿರುದ್ಧ ಶ್ರೀವರ್ಷನ್ ಜಯ ಗಳಿಸಿದ್ದರು.

ಕನಕ್ ಸವಾಲು ಗೆದ್ದ ಸ್ನೇಹಾ: ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ನಾಲ್ಕರ ಘಟ್ಟ ತಲುಪಿದ್ದ ರಾಜ್ಯದ ಏಕೈಕ ರ್‍ಯಾಂಕಿಂಗ್ ಆಟಗಾರ್ತಿ, ಬೆಂಗಳೂರಿನ ಸೆಲೆನೈಟ್ ಸ್ಪೋರ್ಟ್ಸ್ ಅಕಾಡೆಮಿಯ ಸ್ನೇಹಾ ಎಸ್ ಫೈನಲ್‌ನಲ್ಲಿ ಆರ್‌ಆರ್‌ಬಿಎಯ ಕನಕ್ ಕಲಕೋಟಿ ಸವಾಲನ್ನು ಮೀರಿನಿಂತರು. ತೀವ್ರ ಪೈಪೋಟಿ ಕಂಡ ಎರಡನೇ ಗೇಮ್‌ನಲ್ಲಿ ಸೋತರೂ ಪಂದ್ಯದಲ್ಲಿ ಕನಕ್ ಅವರನ್ನು 21-8, 21-23, 21-9ರಲ್ಲಿ ಮಣಿಸಿದ ಸ್ನೇಹಾ ₹15 ಸಾವಿರ ಮೊತ್ತ ಮತ್ತು ಟ್ರೋಫಿ ತಮ್ಮದಾಗಿಸಿಕೊಂಡರು.

ಕುಸ್ತಿ: ಅಮನ್‌ಗೆ ಒಲಿಂಪಿಕ್ಸ್ ಟಿಕೆಟ್

ಇಸ್ತಾಂಬುಲ್ (ಪಿಟಿಐ): ವಿಶ್ವ ಒಲಿಂಪಿಕ್ ಗೇಮ್ಸ್ ಕ್ವಾಲಿಫೈಯರ್‌ನಲ್ಲಿ ಭಾನುವಾರ ಭಾರತದ ಕುಸ್ತಿಪಟುಗಳಾದ ಸುಜಿತ್ ಕಲ್ಕಲ್ ಮತ್ತು ಜೈದೀಪ್ ಅಹ್ಲಾವತ್ ಅವರು ತಮ್ಮ ವಿಭಾಗಗಳ ಸೆಮಿಫೈನಲ್‌ನಲ್ಲಿ ಸೋಲುವ ಮೂಲಕ ಪ್ಯಾರಿಸ್ ಒಲಿಂಪಿಕ್ಸ್ ಕೋಟಾ ಗಿಟ್ಟಿಸಲು ಸಾಧ್ಯವಾಗಲಿಲ್ಲ. ಆದರೆ, ಪುರುಷರ ವಿಭಾಗದಲ್ಲಿ ಯುವ ಕುಸ್ತಿಪಟು ಅಮನ್ ಸೆಹ್ರಾವತ್ ಅವರು ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿದ ಏಕೈಕ ಕುಸ್ತಿಪಟು ಎಂಬ ಹೆಗ್ಗಳಿಕೆಗೆ ಪಾತ್ರರಾದರು.

23 ವರ್ಷದೊಳಗಿನವರ ವಿಶ್ವ ಚಾಂಪಿಯನ್ ಮತ್ತು ಹಿರಿಯ ಏಷ್ಯನ್ ಚಾಂಪಿಯನ್‌ಷಿಪ್ ಪ್ರಶಸ್ತಿ ವಿಜೇತ ಅಮನ್ ಅವರು 57 ಕೆ.ಜಿ. ವಿಭಾಗದ ಸೆಮಿಫೈನಲ್‌ನಲ್ಲಿ 12-2 ರಿಂದ ಉತ್ತರ ಕೊರಿಯಾದ ಚೊಂಗ್ಸಾಂಗ್ ಹಾನ್ ಮಣಿಸಿ ಫೈನಲ್ ಪ್ರವೇಶಿಸಿದರು.

65 ಕೆ.ಜಿ ವಿಭಾಗದ ಕಂಚಿನ ಪದಕ ಸ್ಪರ್ಧೆಯಲ್ಲಿ ಸುಜಿತ್ ಮುಗ್ಗರಿಸಿದರು.

ಗಿಲ್ ಬಳಗಕ್ಕೆ ಕೋಲ್ಕತ್ತ ಸವಾಲು ಇಂದು

ಅಹಮದಬಾದ್ (ಪಿಟಿಐ): ನಾಯಕ ಶುಭಮನ್ ಗಿಲ್ ಲಯಕ್ಕೆ ಮರಳಿರುವುದು ಗುಜರಾತ್ ಟೈಟನ್ಸ್ ತಂಡದಲ್ಲಿ ಹೊಸ ಚೈತನ್ಯ ಮೂಡಿಸಿದೆ. ಸೋಮವಾರ ಬಲಿಷ್ಠ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ನಡೆಯಲಿರುವ ಪಂದ್ಯದಲ್ಲಿ ಜಯಿಸುವ ಹುಮ್ಮಸ್ಸಿನಲ್ಲಿದೆ.

ಕಳೆದ ಪಂದ್ಯದಲ್ಲಿ ಗಿಲ್ ಮತ್ತು ಸುದರ್ಶನ್ ಅವರ 'ಅವಳಿ' ಶತಕ ಭರಾಟೆಯಿಂದ ಆತಿಥೇಯ ತಂಡ ದೊಡ್ಡ ಮೊತ್ತ ಪೇರಿಸಿತು. ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಜಯ ಸಾಧಿಸುವುದರೊಂದಿಗೆ ಟೈಟನ್ಸ್ ಪ್ಲೇಆಫ್ ಆಸೆ ಜೀವಂತವಾಗಿರಿಸಿದೆ.

ಪ್ರಸಕ್ತ ಐಪಿಎಲ್ ಆವೃತ್ತಿಯಲ್ಲಿ ಪ್ಲೇಆಫ್‌ಗೆ ಪ್ರವೇಶ ಪಡೆದಿರುವ ಮೊದಲ ತಂಡವಾಗಿರುವ ಕೆಕೆಆರ್ ಎದುರಿಸುವುದು ಸುಲಭವಲ್ಲ.

ಏಳು ತಂಡಗಳು ಇನ್ನೂ ಪ್ಲೇಆಫ್ ರೇಸ್‌ನಲ್ಲಿವೆ. ರಾಜಸ್ಥಾನ ರಾಯಲ್ಸ್ (16) ಎರಡನೇ ಸ್ಥಾನದಲ್ಲಿದ್ದರೆ, ಚೆನ್ನೈ ಸೂಪರ್ ಕಿಂಗ್ಸ್ (14), ಸನ್‌ರೈಸರ್ಸ್ ಹೈದರಾಬಾದ್ (14) ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿವೆ. ಡೆಲ್ಲಿ ಕ್ಯಾಪಿಟಲ್ಸ್, ಆರ್‌ಸಿಬಿ ಮತ್ತು ಲಖನೌ ಸೂಪರ್ ಜೈಂಟ್ಸ್ ತಲಾ 12 ಅಂಕಗಳನ್ನು ಹೊಂದಿವೆ.

ಗುಜರಾತ್ 10 ಅಂಕಗಳನ್ನು ಹೊಂದಿದೆ. ಉಳಿದೆರಡು ಪಂದ್ಯಗಳನ್ನು ಗೆದ್ದರೆ ಗರಿಷ್ಠ 14 ಅಂಕಗಳನ್ನು ತಲುಪಬಹುದು.

ಪಂದ್ಯ ಆರಂಭ: ರಾತ್ರಿ 7.30, ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್

1500 ಮೀ ಓಟ: ರಾಷ್ಟ್ರೀಯ ದೀಕ್ಷಾ ದಾಖಲೆ

ನವದೆಹಲಿ (ಪಿಟಿಐ): ಲಾಸ್ ಏಂಜಲೀಸ್‌ನಲ್ಲಿ ನಡೆಯುತ್ತಿರುವ ಸೌಂಡ್ ರನ್ನಿಂಗ್ ಟ್ರ್ಯಾಕ್ ಫೆಸ್ಟ್‌ನಲ್ಲಿ ಮಹಿಳೆಯರ 1500 ಮೀಟರ್ಸ್ ಓಟದಲ್ಲಿ ಭಾರತದ ಅಥ್ಲೀಟ್ ಕೆ.ಎಂ.ದೀಕ್ಷಾ ನೂತನ ರಾಷ್ಟ್ರೀಯ ದಾಖಲೆ ನಿರ್ಮಿಸಿದರೆ, ಪುರುಷರ 5000 ಮೀಟರ್ಸ್ ಸ್ಪರ್ಧೆಯಲ್ಲಿ ಅವಿನಾಶ್ ಸಾಬ್ಳೆ ದ್ವಿತೀಯ ಸ್ಥಾನ ಪಡೆದರು.

25 ವರ್ಷದ ದೀಕ್ಷಾ ಶನಿವಾರ ನಡೆದ ಫೈನಲ್‌ನಲ್ಲಿ 4 ನಿಮಿಷ 4.78 ಸೆಕೆಂಡ್‌ಗಳಲ್ಲಿ ಓಡಿ ಮೂರನೇ ಸ್ಥಾನ ಪಡೆದರು. ವಾರಂಗಲ್‌ನಲ್ಲಿ 2021ರಲ್ಲಿ ನಡೆದಿದ್ದ ರಾಷ್ಟ್ರೀಯ ಮುಕ್ತ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಹರ್‌ಮಿಲನ್ ಬೈನ್ಸ್ ಸ್ಥಾಪಿಸಿದ್ದ (4 ನಿಮಿಷ 5.39 ಸೆಕೆಂಡ್) ದಾಖಲೆಯನ್ನು ಮುರಿದರು.

2023ರಲ್ಲಿ ಭುವನೇಶ್ವರದಲ್ಲಿ ನಡೆದ ರಾಷ್ಟ್ರೀಯ ಅಂತರರಾಜ್ಯ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ದೀಕ್ಷಾ (4 ನಿಮಿಷ 6.07 ಸೆ.) ಅವರ ವೈಯಕ್ತಿಕ ಶ್ರೇಷ್ಠ ಸಾಧನೆಯಾಗಿತ್ತು. ಅಲ್ಲಿ ಅವರು ಬೈನ್ಸ್ ಅವರನ್ನು ಮಣಿಸಿ ಚಿನ್ನ ಜಯಿಸಿದ್ದರು. ಉತ್ತರ ಪ್ರದೇಶದ ಅಮ್ರೋಹಾ ಮೂಲದ ದೀಕ್ಷಾ, ಐದು ವರ್ಷಗಳಿಂದ ಎಂಪಿ ಅಥ್ಲೆಟಿಕ್ಸ್ ಅಕಾಡೆ ಮಿಯ ಕೋಚ್ ಎಸ್.ಕೆ.ಪ್ರಸಾದ್ ಅವರ ಬಳಿ ತರಬೇತಿ ಪಡೆಯುತ್ತಿದ್ದಾರೆ.

ಮಹಿಳೆಯರ 5000 ಮೀಟರ್ ಓಟದಲ್ಲಿ ಪಾರುಲ್ ಚೌಧರಿ (15 ನಿಮಿಷ, 10.69 ಸೆ.) ಓಡಿ ಐದನೇ ಸ್ಥಾನ ಪಡೆದರು. ಪಾರುಲ್ ತಮ್ಮ ರಾಷ್ಟ್ರೀಯ ದಾಖಲೆಯನ್ನು ಸುಧಾರಿಸುವಲ್ಲಿ ವಿಫಲರಾದರು, ಸಹ ಓಟಗಾರ್ತಿ ಅಂಕಿತಾ (15 ನಿಮಿಷ 28.88 ಸೆ.) 10 ನೇ ಸ್ಥಾನ ಪಡೆದರು.

ಪುರುಷರ 5000 ಮೀಟರ್ ಓಟದಲ್ಲಿ ಸಾಬ್ಳೆ 13 ನಿಮಿಷ 20.37 ಸೆಕೆಂಡುಗಳಲ್ಲಿ ಗುರಿ ತಲುಪಿ ಎರಡನೇ ಸ್ಥಾನ ಪಡೆದರು.

ಪವರ್‌ಲಿಫ್ಟಿಂಗ್: ಲತಾಗೆ ನಾಲ್ಕು ಚಿನ್ನ

ಬೆಂಗಳೂರು: ಇಲ್ಲಿನ ರಾರಾಜಿನಗರದ ಲತಾ ಜಿ. ನಟರಾಜ್ ಅವರು ಹಾಂಗ್ ಕಾಂಗ್‌ನಲ್ಲಿ ಈಚೆಗೆ ನಡೆದ ಏಷ್ಯನ್ ಪವರ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ ಮಾಸ್ಟರ್ಸ್ (84 ಕೆಜಿ ಮೇಲಿನವರ) ವಿಭಾಗದಲ್ಲಿ ನಾಲ್ಕು ಚಿನ್ನ ಸೇರಿದಂತೆ ಐದು ಪದಕಗಳನ್ನು ಗೆದ್ದಿದ್ದಾರೆ.

ಸ್ಕ್ವಾಟ್, ಬೆಂಚ್‌ಪ್ರೆಸ್ ಮತ್ತು ಡೆಡ್‌ಲಿಫ್ಟ್‌ನ ವೈಯಕ್ತಿಕ ವಿಭಾಗದಲ್ಲಿ ಅವರು ಚಾಂಪಿಯನ್ ಆದರು. ಇದು ಅವರಿಗೆ 2ನೇ ಅಂತರರಾಷ್ಟ್ರೀಯ ಪದಕವಾಗಿದೆ. 2023ರಲ್ಲಿ ಮಂಗೋಲಿಯಾದಲ್ಲಿ ನಡೆದ ವಿಶ್ವ ಪವರ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಅವರು ಬೆಳ್ಳಿ ಪದಕವನ್ನು ಗೆದಿದ್ದರು.

ಬೆಂಗಳೂರಿನ ಎಲ್.ಎ. ಪವರ್ ಲಿಫ್ಟಿಂಗ್ ಮತ್ತು ಫಿಟ್‌ನೆಸ್ ಕ್ಲಬ್‌ನಲ್ಲಿ ತರಬೇತುದಾರರಾದ ಅವರು ಪವರ್ ಲಿಫ್ಟಿಂಗ್ ಇಂಡಿಯಾ (ಪಿಐ) ಅಧ್ಯಕ್ಷ ಸತೀಶ್ ಕುಮಾರ್ ಕುದ್ರೋಳಿ ಅವರಿಂದ ತರಬೇತಿ ಪಡೆಯುತ್ತಿದ್ದಾರೆ.

ಶೂಟಿಂಗ್: ಇಶಾ, ಅನೀಶ್‌ಗೆ ಜಯ

ನವದೆಹಲಿ/ಭೋಪಾಲ್ (ಪಿಟಿಐ): ಇಶಾ ಸಿಂಗ್ ಮತ್ತು ಅನೀಶ್ ಭಾನವಾಲಾ ಅವರು ಭಾನುವಾರ ಮಹಿಳೆಯರ 25 ಮೀಟರ್ ಪಿಸ್ತೂಲ್ ಮತ್ತು ಪುರುಷರ 25 ಮೀಟರ್ ರಾಪಿಡ್-ಫೈರ್ ಪಿಸ್ತೂಲ್ (ಆಎಫ್‌ಪಿ) ನಲ್ಲಿ ಕ್ರಮವಾಗಿ ಎರಡನೇ ಒಲಿಂಪಿಕ್ ಆಯ್ಕೆ ಟ್ರಯಲ್ಸ್‌ನಲ್ಲಿ ಗೆಲುವು ದಾಖಲಿಸಿದ್ದಾರೆ.

ದೆಹಲಿಯಲ್ಲಿ ನಡೆದ ಇದೇ ಸ್ಪರ್ಧೆಯಲ್ಲಿ ಅನೀಶ್ ಮೊದಲ ಟ್ರಯಲ್ಸ್ ಗೆದ್ದಿದ್ದರೆ, ದೆಹಲಿಯ ಕರ್ಣಿ ಸಿಂಗ್ ರೇಂಜ್‌ನಲ್ಲಿ ನಡೆದ ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್‌ನಲ್ಲಿ ಇಶಾ ಎರಡನೇ ಟ್ರಯಲ್ಸ್ ಜಯಿಸಿದ್ದರು.

ಎಂ.ಪಿ ಸ್ಟೇಟ್ ಶೂಟಿಂಗ್ ಅಕಾಡೆಮಿ ರೇಂಜ್‌ನಲ್ಲಿ ನಡೆದ ಮಹಿಳೆಯರ 25 ಮೀಟರ್ ಪಿಸ್ತೂಲ್ ಟ್ರಯಲ್‌ನಲ್ಲಿ ಇಶಾ ಫೈನಲ್‌ನಲ್ಲಿ 43 ಅಂಕ ಗಳಿಸಿದರು.

ಜಾವೆಲಿನ್: ಕರಿಷ್ಮಾಗೆ ಬೆಳ್ಳಿ ಪದಕ

ಭುವನೇಶ್ವರ (ಪಿಟಿಐ): ಕರ್ನಾಟಕದ ಕರಿಷ್ಮಾ ಎಸ್. ಸನಿಲ್ ಅವರು ಇಲ್ಲಿ ಭಾನುವಾರ ಆರಂಭಗೊಂಡ ರಾಷ್ಟ್ರೀಯ ಫೆಡರೇಷನ್ ಕಪ್ ಸೀನಿಯರ್ ಅಥ್ಲೆಟಿಕ್ಸ್‌ನ ಮಹಿಳೆಯರ ಜಾವೆಲಿನ್ ಥ್ರೋ ಫೈನಲ್‌ನಲ್ಲಿ 49.91 ಮೀ ಸಾಧನೆಯೊಂದಿಗೆ ಬೆಳ್ಳಿ ಗೆದ್ದರು.

ಕರಿಷ್ಮಾ ಎಸ್.

ಕಳಿಂಗ ಕ್ರೀಡಾಂಗಣದಲ್ಲಿ ನಡೆದ ಸ್ಪರ್ಧೆಯಲ್ಲಿ ಆಂಧ್ರಪ್ರದೇಶದ ರಶ್ಮಿ ಕೆ. (54.75 ಮೀ) ಚಿನ್ನ ಗೆದ್ದರೆ, ಪಂಜಾಬ್‌ನ ರೂಪಿಂದರ್ ಕೌರ್ ಸೋಹಲ್ ಕಂಚು ತಮ್ಮದಾಗಿಸಿಕೊಂಡರು.

ಮಹಿಳೆಯರ 400 ಮೀ ಹರ್ಡಲ್ಸ್‌ನಲ್ಲಿ ಹಾಲಿ ಚಾಂಪಿಯನ್ ಮತ್ತು ಜಂಟಿ ರಾಷ್ಟ್ರೀಯ ದಾಖಲೆ ಹೊಂದಿರುವ ತಮಿಳುನಾಡಿನ ವಿದ್ಯಾ ರಾಮರಾಜ್ ಬೆನ್ನುನೋವಿನ ಕಾರಣ ತಮ್ಮ ಸ್ಪರ್ಧೆಯಿಂದ ಹಿಂದೆ ಸರಿದರು. ಪ್ಯಾರಿಸ್ ಒಲಿಂಪಿಕ್ಸ್ ಕೋಟಾವನ್ನು ಕಾಯ್ದಿರಿಸಿದ ಭಾರತದ ಮಹಿಳೆಯರ 4x400 ಮೀ ರಿಲೇ ತಂಡದಲ್ಲಿ ವಿದ್ಯಾ ಇದ್ದಾರೆ.

ಪುರುಷರ 400 ಮೀಟರ್ ಹರ್ಡಲ್ಸ್‌ನಲ್ಲಿ ತಮಿಳುನಾಡಿನ ಸಂತೋಷ್ ಕುಮಾರ್ ಚಿನ್ನ ಗೆದ್ದರೆ, ಪಂಜಾಬ್‌ನ ನಿಖಿಲ್ ಭಾರದ್ವಾಜ್ ಮತ್ತು ಗುಜರಾತ್‌ನ ಧವಲ್ ಮಹೇಶ್ ಉಟೇಕರ್ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಚೆಸ್: ಪ್ರಜ್ಞಾನಂದಗೆ ಮಣಿದ ಕಾರ್ಲ್‌ಸನ್

ವಾರ್ಸಾ, ಪೋಲೆಂಡ್ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಸೂಪರ್‌ಬಿಟ್ ರ್‍ಯಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಟೂರ್ನಿಯಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ವಿರುದ್ಧ ಮತ್ತೊಂದು ಗೆಲುವು ಸಾಧಿಸಿದರು.

ಬ್ಲಿಟ್ಜ್ ಟೂರ್ನಿಯಲ್ಲಿ ಇನ್ನೂ ಒಂಬತ್ತು ಸುತ್ತುಗಳು ಬಾಕಿ ಇವೆ. ವೀಯಿ (20.5) ಅಗ್ರಸ್ಥಾನದಲ್ಲಿದ್ದು, ಕಾರ್ಲ್‌ಸನ್ (18) ಎರಡನೇ ಸ್ಥಾನದಲ್ಲಿದ್ದಾರೆ. ಪ್ರಜ್ಞಾನಂದ 14.5 ಅಂಕ ಪಡೆದಿದ್ದಾರೆ.

ಅಂತಿಮ ಫಲಿತಾಂಶ (ರ್‍ಯಾಪಿಡ್): 1.ವೀಯಿ (20.5), 2. ಮ್ಯಾಗ್ನಸ್ ಕಾರ್ಲ್‌ಸನ್ (18), 3. ಆರ್.ಪ್ರಜ್ಞಾನಂದ (14.5), 4. ಅರ್ಜುನ್ ಇರಿಗೇಶಿ (14), 5. ಯಾನ್ ಕ್ರಿಸ್ಟೋಫ್ ಡೂಡ (13), 6. ಅಬ್ದುಸತ್ತಾರೋವ್ (12.5), 7. ವಿನ್ಸೆಂಟ್ ಕೀಮರ್ (11.5), 8. ಕಿರಿಲ್ ಶೆವ್ಚೆಂಕೊ (11), 9. ಅನೀಶ್ ಗಿರಿ (10.5), 10. ಡಿ.ಗುಕೇಶ್ (9.5)